ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 15 ಏಪ್ರಿಲ್ 6-12, 1998 ರೂ.2.00

ಅಂತೂ ಇಂತೂ ಬಂತು ವಿಶ್ವಾಸಮತ!

ಕೊನೆಗೂ ಬಿಜೆಪಿ ನೇತೃತ್ವದ ಸರಕಾರ ವಿಶ್ವಾಸಮತ ಗೆದ್ದಿದೆ. *"ಆದರೆ ಹೇಗೆ? ಹಣಶಕ್ತಿಯ ಬಳಕೆ, ಅಧಿಕಾರ ಸ್ಥಾನದ ಆಮಿಷ ಮತ್ತಿತರ ಆಮಿಷಗಳ ಮೂಲಕ ಎಂ.ಪಿ.ಗಳನ್ನು ಗೆದ್ದು ತಮ್ಮ ಸಂಖ್ಯೆಯನ್ನು ಬೆಳೆಸಿಕೊಳ್ಳುವ ಪ್ರಯತ್ನ ಸಾಲದೋ ಎಂಬಂತೆ ಬಿಜೆಪಿ ಹೇಗಾದರೂ ಪಾರಾಗಲು ಲೋಕಸಭೆಯ ಎರಡು ನಾಮಕರಣ ಸ್ಥಾನಗಳನ್ನೂ ಮೊದಲೇ ತುಂಬಿತ್ತು. ಸಾಮಾನ್ಯವಾಗಿ ಸರಕಾರವೊಂದು ತನ್ನ ಕೆಲಸಕ್ಕೆ ತೊಡಗಿದ ಮೇಲೆ ಮಾಡುವ ಕೆಲಸ ಇದು'* ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಟೀಕಿಸಿದ್ದಾರೆ. *'ಟಿಡಿಪಿ ತಟಸ್ಥವಾಗಿದ್ದರೂ ಸಾಲದು, ತಮ್ಮ ಲೆಕ್ಕಾಚಾರ ತಲೆಕೆಳಗಾಗ ದಂತೆ ನೋಡಿಕೊಳ್ಳಲು ಬಿಜೆಪಿ ತೆಲುಗು ದೇಶಂನೊಂದಿಗೆ ಒಂದು ವ್ಯವಹಾರ ಕುದುರಿಸಿತು. ಆಂಧ್ರ ಪ್ರದೇಶಕ್ಕೆ ಆರ್ಥಿಕ ನೆರವು, ಲೋಕಸಭಾಧ್ಯಕ್ಷ ಸ್ಥಾನ ಮತ್ತು ಕೇಂದ್ರ ಸಂಪುಟದಲ್ಲಿ ಸ್ಥಾನಗಳ ಭರವಸೆ ನೀಡಲಾಯಿತು'* ಎಂದು ಮುಂದುವರೆದು ಸುರ್ಜಿತ್ ಹೇಳಿದ್ದಾರೆ.

ವಾಜಪೇಯಿ ಸರಕಾರ ಈ ರೀತಿ ವಿಶ್ವಾಸಮತ ಗೆದ್ದ ಮೇಲೆ ತಮ್ಮ ಕೂಟಕ್ಕೆ ಜನಾದೇಶವಿದ್ದದ್ದು ಸಾಬೀತಾಯಿತು ಎಂದು ಬಿಜೆಪಿ ಮುಖಂಡರು ಹೇಳುತ್ತಿದ್ದಾರೆ. ಅದು ವಿಶ್ವಾಸಮತ ಗೆದ್ದದ್ದು 274-261 ರ ಅಂತರದಲ್ಲಿ. ಈ 13 ಮತಗಳಲ್ಲಿ 2 ನಾಮಕರಣಗೊಂಡ ಸದಸ್ಯರದ್ದು. 11 ಬಿಜೆಪಿ-ವಿರೋಧಿ, ಕಾಂಗ್ರೆಸ್-ವಿರೋಧಿ ವೇದಿಕೆಯಿಂದ ಚುನಾವಣೆ ಸ್ಪರ್ಧಿಸಿದ ತೆಲುಗುದೇಶಂ ಸದಸ್ಯರದ್ದು. ಇದೇ ವೇದಿಕೆಯ ಮೇಲಿಂದ ಸ್ಪರ್ಧಿಸಿದ್ದ ನ್ಯಾಶನಲ್ ಕಾನ್ಫರೆನ್ಸ್‌ನ ಇಬ್ಬರು ಗೈರು ಹಾಜರಾದರು. *'ನಮ್ಮ ಸಮಾಜದ ಬಹು-ಜನಾಂಗೀಯ, ಬಹು-ಧರ್ಮೀಯ ಹಾಗೂ ಬಹು ಭಾಷೀಯ ಸ್ವರೂಪವನ್ನು ಬುಡಮೇಲು ಮಾಡುವ ಕೋಮುವಾದಿ ಶಕ್ತಿಗಳ ಪ್ರಯತ್ನಗಳನ್ನು ಬಲವಾಗಿ ಎದುರಿಸಲಾಗುವುದು .... ಸಂಯುಕ್ತ ರಂಗ ನಮ್ಮ ಸಮಾಜದ ಸಮಾನ ಅಂಶಗಳನ್ನು ಬಲಪಡಿಸಿ ಒಂದು ಬಲಿಷ್ಠ, ಆಧುನಿಕ, ಪುರೋಗಾಮಿ ಕಣ್ಣೋಟದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಮಾಜವನ್ನು ಬಲಪಡಿಸಿ ವಿವಿಧ ವಿಭಾಗಗಳನ್ನು ಒಟ್ಟಿಗೆ ತರುವ ಸರ್ವಪ್ರಯತ್ನ ನಡೆಯುತ್ತದೆ'* ಎಂದ ಸಂಯುಕ್ತ ರಂಗದ ಪ್ರಣಾಳಿಕೆಗೆ ಬದ್ಧರಾಗಿ ಚುನಾವಣೆ ಸ್ಪರ್ಧಿಸಿ ಗೆದ್ದವರು ಈ 13 ಸಂಸತ್ ಸದಸ್ಯರು ಎಂದು ನೆನಪಿಸಿರುವ ಸುರ್ಜಿತ್ ಬಿಜೆಪಿಯಾಗಲೀ, ಬಿಜೆಪಿ ಕೂಟವಾಗಲೀ, ಅವರ ಬೆಂಬಲಿಗರಾಗಲೀ ಜನಾದೇಶ ತಮ್ಮ ಪರವಾಗಿದೆ ಎಂದು ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ.

ಚುನಾವಣೆಯ ಮೊದಲು ಸಮಾನ ಕಾರ್ಯಕ್ರಮವನ್ನು ಅಂಗೀಕರಿಸಲು ಒಪ್ಪದ ಬಿಜೆಪಿ ಚುನಾವಣೆಯ ನಂತರ ತನ್ನ ಮಿತ್ರ ಪಕ್ಷಗಳೊಂದಿಗೆ 'ಆಡಳಿತಕ್ಕಾಗಿ ರಾಷ್ಟ್ರೀಯ ಅಜೆಂಡಾ' ಅಂಗೀಕರಿಸಿದೆ. ಇದೇ ತನ್ನ ಆಡಳಿತದ ಆಧಾರ, ಇದು ಬಿಟ್ಟು ಬೇರೆ ಮರೆಮಾಚಿದ ಅಜೆಂಡಾ ಏನೂ ಇಲ್ಲ ಎಂದು ವಾಜಪೇಯಿಯವರು ವಿಶ್ವಾಸ ಮತದ ಮೇಲಿನ ಚರ್ಚೆಗೆ, ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆಯ ಮೇಲೆ ಚರ್ಚೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. ಜಗತ್ತಿನಲ್ಲಿರುವ ಎಲ್ಲದರ ಬಗ್ಗೆಯೂ ಭರವಸೆಗಳೇ ತುಂಬಿರುವ ಈ ಅಜೆಂಡಾ ದಲ್ಲಿ ನಿರ್ದಿಷ್ಟ ಅಂಶಗಳು ಏನೂ ಇಲ್ಲ. ಮುಖ್ಯವಾಗಿ ನಮ್ಮ ಸಮಾಜದ ಅತ್ಯಂತ ಶೋಷಿತ ವಿಭಾಗವಾದ ಕೃಷಿ ಕಾರ್ಮಿಕರು ಹಾಗೂ ಭೂಸುಧಾರಣೆಗಳ ಬಗ್ಗೆ ಪ್ರಸ್ತಾಪವೇ ಇಲ್ಲ(ಸಂಯುಕ್ತ ರಂಗದ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ನಿರ್ದಿಷ್ಟವಾಗಿ ಇವನ್ನು ಗುರುತಿಸಲಾಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಎಂದು ನೆನಪಿಸಿರುವ ಸುರ್ಜಿತ್ *'ಭರವಸೆಗಳನ್ನು ನೀಡುವಲ್ಲಿ ಬಿಜೆಪಿ ಕಾಂಗ್ರೆಸ್ಸಿಗಿಂತ ಸ್ವಲ್ಪವೂ ಹಿಂದೆ ಬಿದ್ದಿಲ್ಲ. ಅದೇ ರೀತಿ ಅವನ್ನೆಲ್ಲಾ ಕಾಲ ಕೆಳಗೆ ಹೊಸಕಿ ಹಾಕುವಲ್ಲಿಯೂ ಹಿಂದೆ ಬೀಳುವುದಿಲ್ಲ'* ಎಂದು ವ್ಯಂಗ್ಯವಾಡಿದ್ದಾರೆ.

'ರಾಷ್ಟ್ರೀಯ ಅಜೆಂಡಾ' ವೇ ತಮ್ಮ ಆಡಳಿತದ ಮೂಲಾಧಾರ ಎಂದು ನಂಬಿಸಲು ಶತಪ್ರಯತ್ನ ಪಟ್ಟ ವಾಜಪೇಯಿಯವರು ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸುತ್ತಾ ಆರ್.ಎಸ್.ಎಸ್. ನಂತಹ ವಿವಾದಾಸ್ಪದ ಸಂಘಟನೆಯನ್ನು ಹೊಗಳುವ, ಅದೊಂದು ಶಿಸ್ತು ಪಾಲಿಸುವ ಸಂಘಟನೆ ಎಂದು ಹೇಳುವ ಅಗತ್ಯವೇನಿತ್ತು? ಲಾಲ್‌ಕೃಷ್ಣ ಅಡ್ವಾಣಿಯವರು ಕೂಡಾ ತಾನು ಕಲಿತದ್ದೆಲ್ಲಾ ಈ ಸಂಘಟನೆಯಿಂದಲೇ ಎಂದು ಸಂಸತ್ತಿನಲ್ಲಿ ಹೇಳುವ ಅಗತ್ಯವೇನಿತ್ತು? ಈ ಇಬ್ಬರಲ್ಲದೆ ಇನ್ನೂ ಹಲವಾರು ಮಂತ್ರಿಗಳಿಗೂ ಆರ್.ಎಸ್.ಎಸ್.ಗೂ ಏನು ಸಂಬಂಧ ಎಂದು ಎಲ್ಲರಿಗೂ ಗೊತ್ತಿದ್ದದ್ದೇ ತಾನೆ? 'ವಿಶ್ವಾಸಮತ ಗೆದ್ದ ಸ್ವಲ್ಪದರಲ್ಲೇ ಬಂದಿರುವ ಈ ಮಾತುಗಳು ಧರ್ಮನಿರಪೇಕ್ಷತೆಯ ಬಗ್ಗೆ ಅವರ ಮಾತುಗಳೆಲ್ಲಾ ಬರೀ ಮೋಸ ಎಂಬುದನ್ನು ತೋರಿಸುತ್ತವೆ ಎಂದು ಸುರ್ಜಿತ್ ಟೀಕಿಸಿದ್ದಾರೆ.

ಸ್ವತಃ ಅವರ ರಾಷ್ಟ್ರೀಯ ಅಜೆಂಡಾವೇ 'ಬಿಜೆಪಿ ಮತ್ತು ಅದರ ಮಿತ್ರರು 12ನೇ ಲೋಕಸಭೆಗೆ ತಂತಮ್ಮ ಪ್ರಣಾಳಿಕೆಗಳ ಆಧಾರದಲ್ಲಿ ಸ್ಪರ್ಧಿಸಿದರು. ಆದರೆ ದೇಶದ ಆಡಳಿತಕ್ಕೆ ಸರಕಾರದ ರಚನೆಯ ವೇಳೆಗೆ ಒಂದು ರಾಷ್ಟ್ರೀಯ ಅಜೆಂಡಾವನ್ನು ಒಪ್ಪಲಾಗುವುದು ಎಂದು ನಿರ್ದಿಷ್ಟವಾಗಿ ಹೇಳಿದ್ದೆವು. ಆಯಾಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ಅವರವರ ದೀರ್ಘಕಾಲೀನ ಹಾಗೂ ಪ್ರಸ್ತುತ ಗುರಿಗಳಿರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಅದನ್ನು ಎಲ್ಲರೂ ಒಪ್ಪಬೇಕೆಂದೇನಿಲ್ಲ' ಎಂದು ಹೇಳಿದೆ. ಆದ್ದರಿಂದ ಬಿಜೆಪಿ ತನ್ನ ಪ್ರಣಾಳಿಕೆಗೆ ಬದ್ಧವಾಗಿದೆಯೆಂದೇ ಅರ್ಥ ಎಂದು ಸುರ್ಜಿತ್ ಹೇಳಿದ್ದಾರೆ.

ಅದೇ ರೀತಿ ಅದರ ಇತರ ಮಿತ್ರ ಪಕ್ಷಗಳೂ ಅವರವರ 'ಅಜೆಂಡಾ'ಗಳಿಗೆ ಬದ್ಧರಾಗಿದ್ದಾರೆ. ಆದ್ದರಿಂದಲೇ ಎಐಡಿಎಂಕೆಯ ಕೇಂದ್ರ ಮಂತ್ರಿ ಜಯಲಲಿತಾರ ಮೇಲೆ ಹಾಕಿರುವ ಕೇಸುಗಳು 'ರಾಜಕೀಯ ಪ್ರೇರಿತ' ಎನ್ನುತ್ತಾರೆ; ಜಯಲಲಿತಾ ಮಾತ್ರವಲ್ಲ, ತಮಿಳುನಾಡಿನಿಂದ ಬಂದ ಬಿಜೆಪಿ ಕೇಂದ್ರ ಮಂತ್ರಿಕೂಡಾ ಡಿಎಂಕೆ ಸರಕಾರದ ವಜಾದ ಬಗ್ಗೆ ಮಾತನಾಡುತ್ತಾರೆ. ಸಂಸತ್ತಿನಲ್ಲಿ ವಾಜಪೇಯಿಯವರು 356ನೇ ಕಲಮನ್ನು ಬಳಸುವುದಿಲ್ಲ ಎಂದು ಹೇಳಿದರೂ ಅದನ್ನು ಬಳಸಲು ಆಧಾರಗಳನ್ನು 'ಒದಗಿಸಿ' ಕೊಡುವುದಾಗಿ ಹೇಳುತ್ತಿದ್ದಾರೆ. ಅತ್ತ ಪೂರ್ವಭಾಗದ 13 ಸಂಸತ್ ಸದಸ್ಯರು ಮಮತಾ ಬ್ಯಾನರ್ಜಿಯವರ ನೇತೃತ್ವದಲ್ಲಿ ಒಂದು ಗುಂಪು ರಚಿಸಿಕೊಂಡು ಬಿಜೆಪಿ ಮೈತ್ರಿಕೂಟದಲ್ಲಿದ್ದರೂ 'ಸಕಾರಾತ್ಮಕ ಬೆಂಬಲ' ಕೊಡುವ ಬಗ್ಗೆ ಒತ್ತಿ ಹೇಳುತ್ತಿದ್ದಾರೆ!

'ಒಂದಂತೂ ಖಂಡಿತ. ವಿಶ್ವಾಸಮತದಲ್ಲಿ ಬಿಜೆಪಿಯ ಗೆಲುವಿನ ಅಂತರ ಅತ್ಯಲ್ಪ. ಮುಂಬರುವ ದಿನಗಳಲ್ಲಿ ಇದನ್ನು ಹೆಚ್ಚಿಸಿಕೊಳ್ಳಲು ಅದರ ಮುಖಂಡರು ತಮ್ಮ ಕೈಗೆ ಸಿಗುವ ಎಲ್ಲಾ ಸಾಧನಗಳನ್ನು ಬಳಸಿಕೊಳ್ಳುತ್ತಾರೆ. ಉತ್ತರ ಪ್ರದೇಶದಲ್ಲಿ ಬಳಸಿದ ಕುದುರೆ ವ್ಯಾಪಾರ ಮುಂತಾದ ಅನೀತಿಯುತ ವಿಧಾನಗಳನ್ನೂ ಬಳಸುತ್ತಾರೆ. ಆದರೂ ಕೂಡಾ ಅವರು ಡಂಗುರ ಸಾರುತ್ತಿರುವ ಸ್ಥಿರತೆಯನ್ನು ಕೊಡಲು ಸಾಧ್ಯವಿಲ್ಲ. ಬಿಜೆಪಿ ನೇತೃತ್ವದ ಕೂಟದ ಆಂತರಿಕ ಒತ್ತಡಗಳು ಸರಕಾರವನ್ನು ಉಳಿಯಗೊಡುವುದಿಲ್ಲ. ನಿಜವಾಗಿ ಈ ಸರಕಾರವನ್ನು ಅಸ್ತವ್ಯಸ್ತಗೊಳಿಸಲು ಹೊರಗಿನ ಒತ್ತಡಗಳು ಬೇಕಿಲ್ಲ. ತನ್ನದೇ ವಿರೋಧಾಭಾಸಗಳು ಎಳೆದಾಟಗಳು ಹಾಗೂ ಒತ್ತಡಗಳ ಭಾರದಲ್ಲಿ ಅದು ಕುಸಿಯಲಿದೆ' ಎಂದು ಸುರ್ಜಿತ್ ಹೇಳಿದ್ದಾರೆ.



ಬೆಂಗಳೂರಿನಲ್ಲಿ ಕಳೆದ ಎರಡು ತಿಂಗಳಿಂದ ಡಿವೈಎಫ್ಐ ನೇತೃತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಶುಲ್ಕ ವಿರೋಧಿ ಹೋರಾಟದ ಒಂದು ಘಟ್ಟವಾಗಿ ಏಪ್ರಿಲ್ 3 ರಂದು ಮುಖ್ಯಮಂತ್ರಿಗಳ ನಿವಾಸದ ಮುಂದೆ ನಡೆಸಿದ ಪ್ರತಿಭಟನೆಯ ದೃಶ್ಯಗಳು.ವರದಿ ಪುಟ 3.



ತ್ರಿಪುರಾ ಆರೋಗ್ಯ ಸಚಿವ ಬಿಮಲ್ ಸಿನ್ಹಾ ಘೋರ ಹತ್ಯೆ

ತ್ರಿಪುರಾದ ಆರೋಗ್ಯಮಂತ್ರಿ ಬಿಮಲ್ ಸಿನ್ಹಾ ಹಾಗೂ ಅವರ ಸೋದರ ವಿದ್ಯುತ್ ಅವರನ್ನು ಉಗ್ರಗಾಮಿಗಳು ಮಾರ್ಚ್ 31 ರಂದು ಗುಂಡಿಕ್ಕಿ ಘೋರವಾಗಿ ಹತ್ಯೆಗೈಯ್ದರು.

ಈ ಘಟನೆ ದಲಾಯಿ ಜಿಲ್ಲೆಯ ಕಮಲಾಪುರ್-ಅಂಬಾಸ್ಸಾ ರಸ್ತೆಯ ಅಭಂಗೀಯಲ್ಲಿ ಬೆಳಿಗ್ಗೆ 11-30 ಕ್ಕೆ ನಡೆದಿದೆ. ಸಚಿವರು ಕಾರಿನಿಂದ ಇಳಿದು ಹಳ್ಳಿಯ ಕಡೆ ಸಾಗುತ್ತಿದ್ದಂತೆ ಉಗ್ರಗಾಮಿಗಳು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಅವರ ಮೇಲೆ ಎರಗಿದರು. ಉಗ್ರಗಾಮಿಗಳ ಗುಂಡಿಗೆ ಸಚಿವರೊಬ್ಬರು ಬಲಿಯಾಗುತ್ತಿರುವುದು ತ್ರಿಪುರಾದ ಇತಿಹಾಸದಲ್ಲೇ ಇದು ಮೊದಲ ಪ್ರಕರಣವಾಗಿದೆ.

ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ(ಎನ್.ಎಲ್.ಎಫ್.ಟಿ) ದ ಉಗ್ರಗಾಮಿಗಳು ಈ ಹೇಯ ಕೃತ್ಯ ನಡೆಸಿದ್ದಾರೆ.

ರಂಗದ ಉಗ್ರಗಾಮಿಗಳು ಫೆಬ್ರವರಿ 9 ರಂದು ಕಾಮ್ರೇಡ್ ಬಿಮಲ್ ಸಿನ್ಹಾರ ಸೋದರ ವಿಕ್ರಮ್‌ರನ್ನು ಅಪಹರಿಸಿದ್ದರು. ಅವರ ಬಿಡುಗಡೆಗಾಗಿ ಅಪಾರ ಹಣ ನೀಡುವಂತೆ ಉಗ್ರರು ಒತ್ತಾಯಿಸುತ್ತಿದ್ದರು.

ವಿಕ್ರಮ್ ಬಗ್ಗೆ ಮಾಹಿತಿ ಪಡೆಯಲು ಹೋಗಿದ್ದ ವಿಮಲ್ ಸಿನ್ಹಾ ಮತ್ತು ವಿದ್ಯುತ್ ಅವರ ಮೇಲೆ ಹಠಾತ್ತನೆ ಎರಗಿದ ಉಗ್ರಗಾಮಿಗಳು ಗುಂಡು ಹಾರಿಸಿ ಇಬ್ಬರನ್ನೂ ಕೊಂದು ಹಾಕಿದರು.

ಸಿ.ಪಿ.ಐ.(ಎಂ) ಮುಖಂಡರೂ ಆಗಿದ್ದ ಬಿಮಲ್ ಸಿನ್ಹಾ ಅವರ ಹತ್ಯೆಯನ್ನು ಖಂಡಿಸಲು ರಾಜ್ಯದ ಎಡರಂಗ ನೀಡಿದ ಕರೆಯ ಮೇರೆಗೆ ಏಪ್ರಿಲ್ ಒಂದರಂದು ತ್ರಿಪುರಾ ಬಂದ್ ನಡೆಯಿತು. ಹತ್ಯೆ ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟನಾ ಮೆರವಣಿಗೆ, ಸಭೆಗಳು ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿರುವ ವರದಿಗಳು ಬಂದಿವೆ.

49 ವರ್ಷದ ಬಿಮಲ್ ಸಿನ್ಹಾ ಎಡರಂಗದ ಜನಪ್ರಿಯ ಮಂತ್ರಿಗಳಲ್ಲೊಬ್ಬರು. 1978 ರಿಂದ ಕಮಲಾಪುರ ಕ್ಷೇತ್ರದಿಂದ ಸತತ 5ನೇ ಬಾರಿಗೆ ಆಯ್ಕೆಯಾಗಿದ್ದರು.

70 ರ ದಶಕದಲ್ಲಿ ವಿದ್ಯಾರ್ಥಿ ಆಂದೋಲನದ ಮೂಲಕ ರಾಜಕೀಯ ಪ್ರವೇಶಿಸಿದ ವಿಮಲ್ ಸಿನ್ಹಾ ಕಾರ್ಮಿಕ ಆಂದೋಲನ ದುಡಿದರು. ಚಹಾ ಮತ್ತು ತೋಟ ಕಾರ್ಮಿಕರ ಹಾಗೂ ಗಡಿ ರಸ್ತೆ ಕಾರ್ಮಿಕರ ಸಂಘಟನೆಗಳಲ್ಲಿ ಮುಖಂಡರಾಗಿದ್ದರು. 1983 ರಲ್ಲಿ ಅಧಿಕಾರಕ್ಕೆ ಬಂದ ಎರಡನೇ ಎಡರಂಗ ಸರಕಾರದ ಅವಧಿಯಲ್ಲಿ ವಿಧಾನ ಸಭೆಯ ಸ್ಪೀಕರ್ ಆಗಿದ್ದರು. 1993 ರಲ್ಲಿ ಪುನಃ ಸ್ಪೀಕರ್ ಆದ ಅವರನ್ನು ನಂತರ 1994 ರಲ್ಲಿ ಆರೋಗ್ಯ ಮಂತ್ರಿಯನ್ನಾಗಿ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು. ಈ ಬಾರಿಯೂ ಕಮಲಾಪುರ ಕ್ಷೇತ್ರದಿಂದ ಗೆದ್ದ ಜನಪ್ರಿಯ ನೇತಾರ ಸಿನ್ಹಾ ಮತ್ತೆ ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿ ಖಾತೆಯ ಹೊಣೆಯನ್ನು ವಹಿಸಿಕೊಂಡಿದ್ದರು.

ರಾಜ್ಯದಲ್ಲಿ ಫೆಬ್ರವರಿಯಲ್ಲಿ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಎಡರಂಗ ಮತ್ತೆ ಮೂರನೇ ಎರಡು ಬಹುಮತ ದಿಂದ ಆಯ್ಕೆಯಾಗಿತ್ತು. ಈ ಗೆಲುವನ್ನು ಅರಗಿಸಿಕೊಳ್ಳಲಾಗದ ಹತಾಶ ಪ್ರತ್ಯೇಕತಾವಾದಿ ಶಕ್ತಿಗಳು ಕಾಂಗ್ರೆಸ್ ಟಿ.ಎನ್.ವಿ-ಟಿಯುಜೆಎಸ್ ಮೈತ್ರಿಕೂಟದ ಕುಮ್ಮಕ್ಕಿನಿಂದ ಎಡರಂಗ ಕಾರ್ಯಕರ್ತರು, ಅದರಲ್ಲೂ ವಿಶೇಷವಾಗಿ ಸಿಪಿಐ(ಎಂ) ಬೆಂಬಲಿಗರ ಮೇಲೆ ದಾಳಿಯನ್ನೇ ಹರಿಯಬಿಟ್ಟಿದ್ದು ಈಗಾಗಲೇ ಅನೇಕ ಜನರು ಮೃತಪಟ್ಟಿದ್ದಾರೆ. ಇದೀಗ ಹುತಾತ್ಮರ ಈ ಸಾಲಿಗೆ ಕಾಂ|| ಬಿಮಲ್ ಸಿನ್ಹಾ ಸೇರಿದ್ದಾರೆ.

ಅಖಿಲ ಭಾರತ ಪ್ಲಾಂಟೇಷನ್

ಪುಟ 8 ನೋಡಿ

ಪಶ್ಚಿಮ ಬಂಗಾಳ, ಒರಿಸ್ಸಾಗಳಲ್ಲಿ ಸುಂಟರಗಾಳಿ ಅನಾಹುತ

ಸಾಕಷ್ಟು ಪರಿಹಾರ, ನೆರವು ಒದಗಿಸಲು ಸಿಪಿಐ(ಎಂ) ಆಗ್ರಹ

ಮಾರ್ಚ್ 24, 1998 ರಂದು ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾಗಳಲ್ಲಿ ಅಪ್ಪಳಿಸಿದ ಸುಂಟರಗಾಳಿಯಿಂದ ಉಂಟಾಗಿರುವ ಸಾವು-ಅನಾಹುತಗಳ ಬಗ್ಗೆ ಸಿಪಿಐ(ಎಂ) ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಇದಕೆ ಬಲಿಯಾದ ಹಾಗೂ ಭಾರೀ ನಷ್ಟ ಅನುಭವಿಸಿದ ಕುಟುಂಬಗಳಿಗೆ ಪೊಲಿಟ್‌ಬ್ಯೂರೋ ತನ್ನ ಹಾರ್ದಿಕ ಸಹಾನುಭೂತಿ ವ್ಯಕ್ತಪಡಿಸಿದೆ.

ಈ ಸುಂಟರಗಾಳಿ ಅಪಾರ ಸಾವು-ನೋವು ಬಿಟ್ಟು ಹೋಗಿದೆ. 200 ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ, ನೂರಾರು ಮಂದಿ ಗಾಯಗೊಂಡಿದ್ದಾರೆ. ಇನ್ನೂ ನೂರಾರು ಮಂದಿಯ ಪತ್ತೆ ಸಿಕ್ಕಿಲ್ಲ. ಪಶ್ಚಿಮ ಬಂಗಾಳದ ಮಿಡ್ನಾಪುರ ಇದರಿಂದ ಭಾರೀ ನಷ್ಟ ಅನುಭವಿಸಿದೆ.

ಪಶ್ಚಿಮಬಂಗಾಳ ಮತ್ತು ಒರಿಸ್ಸಾದ ಸರಕಾರಗಳು ಪರಿಹಾರ ಮತ್ತು ರಕ್ಷಣೆಯ ಕೆಲಸ ಕೈಗೊಂಡಿವೆ. ಆದರೆ ರಾಜ್ಯ ಸರಕಾರಗಳ ಸೀಮಿತ ಸಂಪನ್ಮೂಲದಿಂದಾಗಿ ಪರಿಸ್ಥಿತಿ ಎದುರಿಸಲು ಇಷ್ಟೇ ಸಾಲುವುದಿಲ್ಲ. ಪ್ರಧಾನ ಮಂತ್ರಿಗಳು ಪ್ರಕಟಿಸಿದ ನೆರವು ಏನೇನೂ ಸಾಲದು. ತುರ್ತಾಗಿ ಈ ಎರಡು ರಾಜ್ಯಗಳಿಗೆ ಸಾಧ್ಯವಾದ ಎಲ್ಲಾ ಪರಿಹಾರ, ನೆರವು ಒದಗಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಇಂತಹ ಸಂದರ್ಭಗಳಲ್ಲೂ ಸಂಸತ್ ಸದಸ್ಯರ ಒಂದು ಪಕ್ಷಪಾತಪೂರ್ಣ ನಿಯೋಗವನ್ನು ಕಳಿಸಿ ಬಿಜೆಪಿ ನೇತೃತ್ವದ ಸರಕಾರ ಒಂದು ಮಾನವ ದುರಂತದಲ್ಲೂ ರಾಜಕೀಯ ಮಾಡಲು ಮುಂದಾದ್ದು ನಿಜವಾಗಿಯೂ ಆಶ್ಚರ್ಯ ಎಂದು ಖೇದ ವ್ಯಕ್ತಪಡಿಸಿರುವ ಪೊಲಿಟ್‌ಬ್ಯೂರೋ ತಕ್ಷಣ ಇದನ್ನು ತಿದ್ದಿಕೊಂಡು ಮಾನವ ದುರಂತದಲ್ಲಿ ಅಲ್ಪ ರಾಜಕೀಯದ ಆಟ ಆಡುವುದನ್ನು ತಪ್ಪಿಸಬೇಕು ಎಂದು ಕರೆ ನೀಡಿದೆ.

ಏ. 6-12, 1998




ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ಮಹಾಪತನಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಬ್ರಿಟಿಶರನ್ನು ಸಂಪೂರ್ಣವಾಗಿ ನಡುಗಿಸಿಬಿಟ್ಟ ಮತ್ತೊಂದು ಘಟನೆ ಫೆಬ್ರವರಿ 1946 ರಲ್ಲಿ ನಡೆಯಿತು.

ಫೆಬ್ರವರಿ 18, 1946. ಮುಂಬೈ ಬಂದರಿನಲ್ಲಿ ನಿಂತಿದ್ದ ಬ್ರಿಟಿಶ್ ಭಾರತೀಯ ನಾವಿಕ ಪಡೆಯ 'ಹಿಂದೂಸ್ತಾನ್' 'ತಲ್‌ವಾರ್' 'ಚಮಕ್' ಮತ್ತಿತರ ಯುದ್ಧ ಹಡಗುಗಳಲ್ಲಿ ಸಾಮಾನ್ಯ ಸೈನಿಕರು ಬಂಡೆದ್ದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಒಂದು ಕೇಂದ್ರೀಯ ಮುಷ್ಕರ ಸಮಿತಿ ಏರ್ಪಟ್ಟು ಅದು ತನ್ನ ಬೇಡಿಕೆಗಳನ್ನು ಮುಂದಿಟ್ಟಿತು - ನಾವಿಕರಿಗೆ ಸರಿಯಾದ ಆಹಾರ, ಸೇವಾ ಪರಿಸ್ಥಿತಿಯಲ್ಲಿ ಸುಧಾರಣೆ ಹಾಗೂ ನಾವಿಕರೊಂದಿಗೆ ಹೀನಾಯವಾಗಿ ವರ್ತಿಸಿದ ಕ್ಯಾಪ್ಟನ್ ಕಿಂಗ್ ವಜಾ, ಜೊತೆಗೆ ಆಝಾದ್ ಹಿಂದ್ ಸೇನೆ ಸೇರಿದಂತೆ ಎಲ್ಲಾ ರಾಜಕೀಯ ಬಂಧಿಗಳ ಬಿಡುಗಡೆ, ಇಂಡೋನೇಶ್ಯಾದಿಂದ ಸೇನಾಪಡೆಗಳ ವಾಪಸಾತಿ ಹಾಗೂ ಕ್ವಿಟ್‌ಇಂಡಿಯಾ ಘೋಷಣೆಗಳೂ ಈ ಹೇಳಿಕೆಯಲ್ಲಿದ್ದವು.

ವಾಸ್ತವವಾಗಿ ಇದಕ್ಕೆ ಕೆಲವು ದಿನಗಳ ಹಿಂದೆಯೇ ಇದರ ಮುನ್ಸೂಚನೆ ದೊರಕಿತ್ತು. ಎರಡನೇ ಮಹಾಯುದ್ಧದಲ್ಲಿ 20 ಲಕ್ಷಕ್ಕೂ ಹೆಚ್ಚು ಭಾರತೀಯ ಸೇನಾ ಪಡೆಗಳು ಹೋರಾಡಿದ್ದವು. ಈ ಯುದ್ಧದಲ್ಲಿ ಅವರು ಬ್ರಿಟಿಶರ ಸೋಲು ಮತ್ತು ಗೆಲುವು ಎರಡನ್ನೂ ಕಂಡಿದ್ದರು. ಅವರ ಸಾಹಸ ಮತ್ತು ಪುಕ್ಕಲುತನ ಎರಡನ್ನೂ ಕಂಡಿದ್ದರು. ಅವರು ಅಜೇಯರೇನಲ್ಲ ಎಂದು ಸ್ಪಷ್ಟವಾಗಿತ್ತು. ಅಲ್ಲದೆ ಭಾರತೀಯ ಸೈನಿಕರು ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳ ರಕ್ಷಣೆಗಾಗಿ ಹೋರಾಡುತ್ತಿದ್ದರು. ಆದರೆ ಈ ಹಕ್ಕನ್ನು ಬ್ರಿಟಿಶರು ತಮಗೆ ಕೊಟ್ಟಿಲ್ಲವಲ್ಲ ಎಂಬ ಅರಿವೂ ಅವರಲ್ಲಿ ಮೂಡಲಾರಂಭಿಸಿತು. ಜತೆಗೆ ಆಝಾದ್ ಹಿಂದ್ ಸೇನೆಯ ಸೈನಿಕರ ವಿಚಾರಣೆಯ ವಿರುದ್ಧ ದೇಶಾದ್ಯಂತ ಎದ್ದ ಪ್ರತಿಭಟನೆಯ ಅಲೆ ಅವರಲ್ಲೂ ದೇಶಪ್ರೇಮ ಜಾಗೃತಗೊಳಿಸಿತ್ತು. 'ತಲ್‌ವಾರ್' ಬ್ರಿಟಿಶ್ ಭಾರತೀಯ ನಾವಿಕ ಪಡೆಯ ತರಬೇತಿ ಕೇಂದ್ರವಿರುವ ಯುದ್ಧ ಹಡಗು. ಸಿಗ್ನಲ್ ವಿಭಾಗದ ಸೈನಿಕರು ಇತರ ನಾವಿಕರಿಗಿಂತ ಹೆಚ್ಚು ವಿದ್ಯಾವಂತರಾಗಿದ್ದರು. ರಾಜಕೀಯ ಪ್ರಜ್ಞೆ ಇತರರಿಗಿಂತ ಹೆಚ್ಚಿತ್ತು. 'ಕ್ವಿಟ್ ಇಂಡಿಯಾ' 'ಬ್ರಿಟಿಶರನ್ನು ಕೊಲ್ಲಿ' 'ಬ್ರಿಟಿಶ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ' ಇತ್ಯಾದಿ ಘೋಷಣೆಗಳು ಅಲ್ಲಲ್ಲಿ ಕೇಳಲಾರಂಭಿಸಿದವು. ಇದರಿಂದ ಕುಪಿತಗೊಂಡ ಹಡಗಿನ ಕ್ಯಾಪ್ಟನ್ ಕಿಂಗ್ ತನ್ನ ಎಂದಿನ ಹೊಲಸು ಭಾಷೆಯಲ್ಲಿ ನಾವಿಕರನ್ನು ಬೈದ. ಇದೇ ಈ ಬಂಡಾಯದ ಕಿಡಿಯಾಯ್ತು.



ಬಂಡಾಯದ ಪ್ರಮುಖಮುಖಂಡ ಬಿ.ಸಿ.ದತ್


18ರ ಬೆಳಿಗ್ಗೆ 8 ಕ್ಕೆ ಉಪಾಹಾರದ ಬಹಿಷ್ಕಾರದೊಂದಿಗೆ ಬಂಡಾಯ ಆರಂಭವಾಯಿತು. 1000 ಮಂದಿ ಭಾಗವಹಿಸಿದ್ದರು. ಮರುದಿನ ಇಡೀ ರಾಯಲ್ ಇಂಡಿಯನ್ ನೇವಿಯನ್ನು ಈ ಮುಷ್ಕರ ವ್ಯಾಪಿಸಿತು. ಸ್ವಲ್ಪ ದೂರದ ಕ್ಯಾಸಲ್ ಬ್ಯಾರಾಕ್‌ನಲ್ಲಿದ್ದ ನಾವಿಕರು 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆ ಕೂಗುತ್ತಾ 'ತಲವಾರ್' ನ ನಾವಿಕರ ನೆರವಿಗೆ ಧಾವಿಸಿದರು. ಮುಂಬೈಯಲ್ಲಿದ್ದ ಎಲ್ಲ ಹಡಗುಗಳ 20000 ನಾವಿಕರು ಬ್ರಿಟಿಶ್ ಬಾವುಟ ಯೂನಿಯನ್ ಜಾಕ್‌ನ್ನು ಇಳಿಸಿ ಕಾಂಗ್ರೆಸ್, ಮುಸ್ಲಿಂಲೀಗ್ ಹಾಗೂ ಕಮ್ಯುನಿಸ್ಟ್ ಪಕ್ಷದ ಬಾವುಟಗಳನ್ನು ಹಾರಿಸಿದರು. 20ನೇ ತಾರೀಕಿನಿಂದ ಕರಾಚಿ, ಕಲ್ಕತ್ತಾ, ಮದ್ರಾಸ್ ಮತ್ತು ಇತರ ಬಂದರುಗಳಲ್ಲಿ ನಿಂತಿದ್ದ ಒಟ್ಟು 74 ಹಡಗುಗಳಲ್ಲಿ, 24 ನಾವಿಕ ಸಂಸ್ಥೆಗಳಲ್ಲಿ ಮುಷ್ಕರ ನಡೆಯಿತು.



ಕಾರ್ಮಿಕರು ವಿದ್ಯಾರ್ಥಿಗಳು ನಾವಿಕರ ಬೆಂಬಲಾರ್ಥ ಮುಂಬೈ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮಿಲಿಟರಿ ಮತ್ತು ಪೋಲೀಸರೊಂದಿಗೆ ಸೆಣಸಾಡಿದರು. ಕಮ್ಯುನಿಸ್ಟ್ ಪಕ್ಷ, ಫಾರ್ವರ್ಡ್‌ಬ್ಲಾಕ್, ಆರ್.ಎಸ್.ಪಿ. ಮತ್ತಿತರ ಎಡಪಕ್ಷಗಳು ಹಾಗೂ 'ಕ್ವಿಟ್‌ಇಂಡಿಯಾ' ಹೋರಾಟದ ಧೀರೆ ಅರುಣಾ ಅಸಫ್ ಅಲಿ ಬಂಡೆದ್ದ ನಾವಿಕರಿಗೆ ಬೆಂಬಲ ನೀಡಿದ್ದು, ಇಂಕ್ವಿಲಾಬ್ ಜಿಂದಾಬಾದ್‌ನೊಂದಿಗೆ 'ಹಿಂದೂ - ಮುಸ್ಲಿಂ ಒಂದಾಗಿ' ಎಂಬ ಘೋಷಣೆಯೂ ಮೊಳಗಿತು. ಎಐಟಿಯುಸಿ ನಾವಿಕರೊಡನೆ ಸೌಹಾರ್ದ ವ್ಯಕ್ತಪಡಿಸಲು ಫೆಬ್ರವರಿ 22 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು. ಬ್ರಿಟಿಶ್ ಸರಕಾರ ಲಷ್ಕರಿ ಶಾಸನ ಸೇನಾ ಟ್ಯಾಂಕರುಗಳಿಂದ ಕಾರ್ಮಿಕರ ಮೇಲೆ ಧಾಳಿ ಮಾಡಿತು. ಎರಡು ದಿನಗಳ ಈ ಬೀದಿ ಸಮರದಲ್ಲಿ 500 ಜನ ಸತ್ತರು. ಕಮ್ಯುನಿಸ್ಟ್ ಮಹಿಳಾ ಮುಖಂಡರಾಗಿದ್ದ **ಕಮಲ್ ಧೋಂಡೆ** ಮುಂಬೈ ಬೀದಿಯಲ್ಲಿ ಬ್ರಿಟಿಶ್ ಗುಂಡುಗಳಿಗೆ ಬಲಿಯಾದರು. **ಕುಸುಮ್ ರಣದಿವೆ**ಯವರಿಗೆ ಕಾಲಿಗೆ ಗುಂಡು ನಾಟಿತು. **ಅಹಲ್ಯಾ ರಣದಿವೆ**(ನಂತರ ರಂಗ್ಣೇಕರ್) ಸ್ವಲ್ಪದರಲ್ಲಿ ತಪ್ಪಿಸಿಕೊಂಡರು. ಕಾರ್ಮಿಕರು ಅಡ್ಡ ಗೋಡೆಗಳನ್ನು ನಿರ್ಮಿಸಿ ಬ್ರಿಟಿಶ್ ಸೈನಿಕರೊಂದಿಗೆ ಸೆಣಸಿದರು.



ಕಮಲ್ ಧೋಂಡೇ



ಶ್ರೀಪಾದ್

ಭಾರತೀಯ ನಾವಿಕರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರಿಂದ ಮಾರ್ಗದರ್ಶನ ನಿರೀಕ್ಷಿಸಿದ್ದರು. ಆದರೆ ಕಾಂಗ್ರೆಸ್ ಮುಖಂಡ ವಲ್ಲಭಭಾಯಿ ಪಟೇಲ್ ಹಾಗೂ ಮುಸ್ಲಿಂ ಲೀಗ್ ಮುಖಂಡ ಜಿನ್ನಾರವರಿಂದ ಬಂದ ಮಾರ್ಗದರ್ಶನವೆಂದರೆ 'ಬ್ರಿಟಿಶರಿಗೆ ಶರಣಾಗಿ' ಫೆಬ್ರವರಿ 23 ರಂದು ಕೇಂದ್ರ ಮುಷ್ಕರ ಸಮಿತಿ ಮುಷ್ಕರವನ್ನು ಹಿಂತೆಗೆದುಕೊಳ್ಳುವುದಾಗಿ ಸಾರಿತು. ಈ ಪ್ರಕಟಣೆಯ ಕೊನೆಯ ಸಾಲುಗಳು ಮಾರ್ಮಿಕವಾಗಿದ್ದವು. 'ನಾವು ಬ್ರಿಟಿಶ್ ಅಧಿಕಾರಿಗಳಿಗೆ ಶರಣಾಗುತ್ತಿಲ್ಲ, ಭಾರತೀಯ ಜನತೆಗೆ ಶರಣಾಗುತ್ತಿದ್ದೇವೆ. ನಮ್ಮ ಜನತೆಗೆ ನಮ್ಮದೊಂದು ಕೊನೆಯ ಮಾತು: ನಮ್ಮ ಮುಷ್ಕರ ನಮ್ಮ ದೇಶದ ಜೀವನದಲ್ಲಿ ಒಂದು ಚಾರಿತ್ರಿಕ ಘಟನೆ, ಮೊದಲ ಬಾರಿಗೆ ಸೇನಾ ಪಡೆಗಳಲ್ಲಿನವರ ರಕ್ತ ಹಾಗೂ ಜನರ ರಕ್ತ ಒಂದು ಸಮಾನ ಉದ್ದೇಶಕ್ಕಾಗಿ ಒಟ್ಟಿಗೇ ಹರಿಯಿತು. ಸೇನಾ ಪಡೆಗಳಲ್ಲಿರುವ ನಾವಿದನ್ನು ಎಂದೂ ಮರೆಯುವುದಿಲ್ಲ. ನೀವು, ನಮ್ಮ ಸೋದರ - ಸೋದರಿಯರು ಕೂಡಾ ಮರೆಯಲಾರಿರಿ ಎಂದು ನಮಗೆ ಗೊತ್ತಿದೆ. ನಮ್ಮ ಮಹಾನ್ ಜನತೆ ಚಿರಾಯುವಾಗಲಿ. ಜೈ ಹಿಂದ್'

ನಿಜಕ್ಕೂ ಇದು ಬ್ರಿಟಿಶರನ್ನು ಸಂಪೂರ್ಣ ಅಲುಗಾಡಿಸಿಬಿಟ್ಟ ಘಟನೆಯಾಗಿತ್ತು. ಫೆಬ್ರವರಿ 19 ರಂದೇ ಬ್ರಿಟಿಶ್ ಪ್ರಧಾನ ಮಂತ್ರಿ ಅ್ಯಟ್ಲಿಯವರು ಅಧಿಕಾರದ ಸಂಪೂರ್ಣ ವರ್ಗಾವಣೆ ಕುರಿತು ಮಾತುಕತೆ ನಡೆಸಲೆಂದು ಕ್ಯಾಬಿನೆಟ್ ಆಯೋಗವೊಂದನ್ನು ಬೇಗನೇ ಭಾರತಕ್ಕೆ ಕಳಿಸಲಾಗುವುದು ಎಂದು ಸಾರಿದರು. ಆದರೆ ಅತ್ತ ಶರಣಾದ ಸಾವಿರಾರು ನಾವಿಕರನ್ನು ಮಿಲಿಟರಿ ಜೈಲುಗಳಲ್ಲಿ ಬಂಧನದಲ್ಲಿಡಲಾಯಿತು. ಕೋರ್ಟ್ ಮಾರ್ಶಲ್‌ಗಳು ನಡೆದವು. ಅವರ ಮುಖಂಡರನ್ನು ಸಿಲುಕಿಸಿ ಹಾಕುವಂತೆ ನಾವಿಕರ ಮೇಲೆ ಒತ್ತಡ ಹಾಕಲಾಯಿತು. ಆದರೆ ಯಾರೂ ಅಪ್ರೂವರ್ ಆಗಲಿಲ್ಲ. ನೂರಾರು ಮಂದಿಯನ್ನು ನಾವಿಕ ಪಡೆಯಿಂದ ಬರ್ಖಾಸ್ತು ಮಾಡಲಾಯಿತು. ಸ್ವತಂತ್ರ ಭಾರತವೂ ಈ ವೀರ ಸೈನಿಕರೊಂದಿಗೆ ವೀರೋಚಿತವಾಗಿ ವರ್ತಿಸಲಿಲ್ಲ, ಅವರಿಗೆ ಸ್ವಾತಂತ್ರ್ಯ ಹೋರಾಟಗಾರರ ಸ್ಥಾನ ನೀಡಲಿಲ್ಲ.

(ಮುಂದುವರಿಯುವುದು)

ಈಗ ಬಿಜೆಪಿ ಛಾಪಿನ ಉದಾರೀಕರಣ

ಕೇಂದ್ರದ ಬಿಜೆಪಿ ಸರ್ಕಾರ ಈಗ ಸಂಸತ್ತಿನ ವಿಶ್ವಾಸ ಮತ ಪಡೆದಿದೆ. ಈ ವಿಶ್ವಾಸ ಮತದ ಜೊತೆಗೇ ಆಯಸ್ಸು (ಎಷ್ಟು ದಿನ?) ಪಡೆದಿರುವ ಈ ಸರ್ಕಾರ ತನ್ನ ಉದಾರೀಕರಣದ ನೀತಿಗಳನ್ನು ಜ್ಯಾರಿಗೆ ತರುವ ತರಾತುರಿಯನ್ನು ತೋರಿಸುತ್ತಿದೆ. ಸ್ವದೇಶಿ ಎಂಬ ದೊಡ್ಡ ಹಣೆಪಟ್ಟಿಯನ್ನು ತಗುಲಿಸಿಕೊಂಡಿರುವ ಈ ನೀತಿಗಳು ಎಂತಹ ಸ್ವದೇಶಿ, ಯಾವ ಸ್ವದೇಶಿ (ಇಲ್ಲಾ ಪರದೇಶಿ?) ಸಾಧಿಸುತ್ತವೆ ಎಂಬುದನ್ನು ಕಾದು ನೋಡಬೇಕು.

ಜನಪ್ರಿಯತೆ ಪಡೆಯಲು ಈ ಸರ್ಕಾರ ಅಂತರ್ರಚನಾ ಸೌಕರ್ಯಗಳಿಗೆ ಇಂಬು ನೀಡುವ ಮಾತನ್ನು ಮೊದಲಿಗೆ ಆಡಿದೆ. ಅಲ್ಲದೆ ರಾಜ್ಯಗಳಿಗೆ ತಮ್ಮ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಸ್ವಾತಂತ್ರ್ಯ ನೀಡುವ ಮಾತನ್ನು ಆಡಿದೆ. ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿ ವಿದ್ಯುತ್ತಿನಂತಹ ಕ್ಷೇತ್ರದಲ್ಲಿ 1500 ಕೋಟಿ ರೂಪಾಯಿಗಳವರೆಗೆ ವಿದೇಶೀ ಹೂಡಿಕೆಯ ಬಗ್ಗೆ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವನ್ನು ಪಡೆಯಲಿವೆಯಂತೆ. ಇಲ್ಲಿ ಮುಖ್ಯವಾದದ್ದೆಂದರೆ ಕೇಂದ್ರದ ಅನುಮೋದನೆ ಇಲ್ಲದೆ ಯಾವ ವಿದೇಶೀ ಹೂಡಿಕೆದಾರ ಕಂಪನಿ ರಾಜ್ಯಗಳಲ್ಲಿ ಇಷ್ಟು ದೊಡ್ಡ ಮೊತ್ತದ ಹೂಡಿಕೆ ಮಾಡಲು ಮುಂದು ಬರುತ್ತವೆ ಎಂಬುದೇ ಮುಖ್ಯ ಪ್ರಶ್ನೆ. ಹಾಗೆ ಪ್ರಜಾಸತ್ತಾತ್ಮಕ ಸಂಪ್ರದಾಯಗಳಿಗೆ ಹೆಚ್ಚಿನ ಬೆಲೆ ನೀಡದ ಬಿಜೆಪಿ ಇಷ್ಟನ್ನು ನಿಜವಾಗಿ ಜಾರಿಗೆ ತರುತ್ತದೊ ಎಂಬುದು ಸಂಶಯದ ವಿಷಯ.

ಆಂತರಿಕ ಉದಾರೀಕರಣದ ವೇಗವನ್ನು ತೀವ್ರ ಗೊಳಿಸುವುದಾಗಿ ಬಿಜೆಪಿ ಹೇಳಿಕೊಂಡಿದೆ. ಬಿಜೆಪಿಯ ಸರ್ಕಾರ ಸ್ಥಾಪನೆಯಾಗುವುದರಲ್ಲಿ ಅಪಾರ ನೆರವು ನೀಡಿದ ದೇಶೀ ಬಂಡವಾಳಿಗರನ್ನು ಬಿಜೆಪಿ ಕಡೆಗಣಿಸಲಾದೀತೆ? ಹಾಗೂ ಅವರು ಬಿಜೆಪಿಗಾಗಿ ಮಾಡಿದ ವೆಚ್ಚವನ್ನು ಭರಿಸಿಕೊಳ್ಳಲು ಎಲ್ಲ ಅನುಕೂಲ ಮಾಡಿಕೊಡುವುದು ಈ ಬಿಜೆಪಿಗೆ ಕರ್ತವ್ಯವೆನಿಸಿರಬಹುದು. ಆದ್ದರಿಂದ ದೇಶೀ ಉದ್ದಿಮೆಗಳನ್ನು ಎಲ್ಲ ಬೆಳವಣಿಗೆ ತಡೆವ ಸರ್ಕಾರಿ ಹತೋಟಿಗಳಿಂದ ಮುಕ್ತಗೊಳಿಸುತ್ತೇವೆ ಎಂದು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಹೇಳಿದ್ದಾರೆ.

ಇದಲ್ಲದೆ ವ್ಯಾಪಾರಿ ಸಂಸ್ಥೆಗಳೊಂದಿಗೆ ನಿಕಟವಾಗಿದ್ದು ಕೆಲಸಮಾಡುವ ಮಾತನ್ನು ಅವರು ಆಡಿದ್ದಾರೆ. ಬಿಜೆಪಿಯ ಸಮಾಜವಾದಿ ಮಿತ್ರರಾದ ಜಾರ್ಜ್ ಫರ್ನಾಂಡಿಸ್ ತರಹದವರು ಈ ವ್ಯಾಪಾರಿ ಸಂಸ್ಥೆಗಳನ್ನು ದೂರವಿಡುವ ಮಾತನ್ನಾಡಿದ್ದರು.

ಪೇಟೆಂಟ್ ವಿಷಯದಲ್ಲಿ ಈ ಸರ್ಕಾರದ ನಿಲುವನ್ನು ನೋಡಿ. ಅರಿಶಿನದಂತಹ ವಸ್ತುಗಳ ಮೇಲೆ ಬೇರೆ ಯಾರಾದರೂ ಪೇಟೆಂಟ್ ಪಡೆದರೆ ಅಥವಾ ಬಾಸ್ಮತಿ ಅಕ್ಕಿಯ ಮೇಲೆ ವಿದೇಶೀಯರು ಪೇಟೆಂಟ್ ಪಡೆದರೆ ಧ್ವನಿಯೆತ್ತುವುದು ಸರಿ. ಆದರೆ ಇವಕ್ಕೆಲ್ಲ ನಿಜವಾದ ಪರಿಹಾರವೆಂದರೆ ಎಲ್ಲರಿಗೂ ಮೊದಲು ಭಾರತವೇ ಜಾಗತಿಕ ಮಟ್ಟದ ಪೇಟೆಂಟನ್ನು ಪಡೆಯುವುದು. ನನ್ನ ಸರ್ಕಾರ ಹೊಸ ಆರ್ಥಿಕ ವ್ಯವಸ್ಥೆಯನ್ನು ಆ ದೃಷ್ಟಿಯಿಂದಲೇ ನೋಡುವುದು ಎಂದಿದ್ದಾರೆ ವಾಜಪೇಯಿಯವರು.

ಬಹುಶಃ ವಾಜಪೇಯಿಯವರು ಭಾರತದ ಎಲ್ಲ ಭಾರತ ಮೂಲದ ವಸ್ತುಗಳಿಗೆ ಪೇಟೆಂಟ್ ಪಡೆವ ವಿಚಾರ ಹೊಂದಿದ್ದಾರೆಂದು ಕಾಣುತ್ತದೆ.

ಭಾರತದ ಮಾವು, ನೆಲ್ಲಿ, ನೇರಳೆ, ನದಿ, ಆಕಾಶ, ಸಮುದ್ರ ಇತ್ಯಾದಿಗಳಿಗೆಲ್ಲ ಜಾಗತಿಕ ಮಟ್ಟದ ಪೇಟೆಂಟ್‌ಗಳನ್ನು ಎಲ್ಲರಿಗೂ ಮೊದಲು ಪಡೆವ ವಿಚಾರ ಮಾಡುತ್ತಿರಬಹುದು. ಬಹಳ ತಮಾಷೆಯಾಗಿದೆಯಲ್ಲವೆ?

○

ಕನಸಿನ ಗಂಟು ಕೈಗೆ ಬಾರದೇ ಹೋದ ಕತೆ

ಹಿಂದಿನ ಸಂಯುಕ್ತರಂಗ ಸರ್ಕಾರದ ಕನಸಿನ ಬಜೆಟ್‌ಅನ್ನು ಪಿ. ಚಿದಂಬರಂ ಎಂಬ ಹಣಕಾಸು ಮಂತ್ರಿ ಮಂಡಿಸಿದ್ದರು. ದೇಶದ ಮಧ್ಯಮ ವರ್ಗ, ಬಂಡವಾಳಶಾಹಿ ವರ್ಗ ಕನಸುಗಳ ಸರಮಾಲೆಯನ್ನೇ ಹೆಣೆದರು. ಭಾರತದ ಎಲ್ಲಾ ಆರ್ಥಿಕ ಸಮಸ್ಯೆಗಳು ಮುಗಿದೇ ಹೋದುವೇನೋ ಎಂಬಂತೆ ಇವರೆಲ್ಲ -ನಮ್ಮ ಸಮೂಹ ಮಾಧ್ಯಮಗಳು ಸೇರಿ - ಹುಯಿಲೆಬ್ಬಿಸಿದರೂ ಎಡ ಪಕ್ಷಗಳು ಅದರಲ್ಲೂ ಸಿ.ಪಿ.ಐ.(ಎಂ) ಆ ಬಜೆಟ್ಟು ದೇಶದ ಜನತೆಗೆ ನೋವನ್ನೇ ತಂದು ಕೊಡುವುದು ಎಂದರೆ ಇವರೆಲ್ಲ ತಮಾಷೆ ಮಾಡಿದರು.

ಇಂದು ಬಿ.ಜೆ.ಪಿ.ಯ ಸರ್ಕಾರ ಮಧ್ಯಂತರ ಬಜೆಟ್‌ನ್ನು ಮಂಡಿಸಿದೆ. ಈ ಬಿ.ಜೆ.ಪಿ.ಯ ಸರ್ಕಾರಕ್ಕೆ ತನ್ನ ಹಿಂದಿನ ಸರ್ಕಾರಗಳೆಲ್ಲ ದೇಶವನ್ನು ಹಾಳುಗೆಡವಿದ್ದವು ಎಂಬ ಪ್ರಚಾರದ ತೆವಲು ತೀರಿಸಿ ಕೊಳ್ಳಬೇಕು. ಇದು ನಿಜ. ಆದರೆ ಚಿದಂಬರಂ ಅವರ ಕನಸಿನ ಗಂಟು ಕನಸಿನ ಗಂಟೇ ಆಗಿ ಉಳಿದು ಕೈಗೆ ಬಾರದೇ ಹೋದದ್ದೂ ಅಷ್ಟೇ ನಿಜ.

ತೆರಿಗೆ ದರಗಳನ್ನು ಇಳಿಸಿದರೆ ಜನ ತಂತಾನೇ ಮುಂದೆ ಬಂದು ಪ್ರಾಮಾಣಿಕವಾಗಿ ತೆರಿಗೆ ತೆರುತ್ತಾರೆ ಹೀಗೆ ತೆರಿಗೆ ತೆರುವವರ ಸಂಖ್ಯೆ ಹೆಚ್ಚುವುದರಿಂದ ತೆರಿಗೆ ಸಂಗ್ರಹಣೆ ಹೆಚ್ಚಾಗುತ್ತದೆ ಎಂದು ಆ ಕನಸಿನ ಬಜೆಟ್ ವಾದಿಸಿತ್ತು. ಅಂತೆಯೇ ತೆರಿಗೆಯ ದರಗಳನ್ನು ಕಡಿಮೆಮಾಡಲಾಯಿತು. ಅಲ್ಲದೆ ಕಪ್ಪು ಹಣದ ಖೂಳರಿಗೆ ಕ್ಷಮಾದಾನ ನೀಡುವ ವಿಡಿಐಎಸ್ ಎಂಬ ಯೋಜನೆಯನ್ನೂ ಈ ಬಜೆಟ್ ಜಾರಿಗೆ ತಂತು. ಈ ಯೋಜನೆ ಯಶಸ್ವಿಯಾಯಿತು ಎಂದು ಹೇಳಿಕೊಳ್ಳಲಾಯಿತು. ಹೊರಬಂದಿರುವ ಕಪ್ಪು ಹಣಕ್ಕಿಂತ ಒಳಗೆ ಉಳಿದಿರುವುದೇ ಹೆಚ್ಚು ಎಂದು ಹೇಳಲಾಗುತ್ತಿದೆ. ಆ ಮಾತು ಬೇರೆ.

ಈಗ ಕೇಂದ್ರದ ಕಂದಾಯ ಸಂಗ್ರಹಣೆಯಲ್ಲಿ ಶೇ 12.6 ರಷ್ಟು ಕೊರತೆ ಇದೆಯೆಂಬುದು ಗೊತ್ತಾಗಿದೆ. ಅಂದು ಬಜೆಟ್ಟನ್ನು ಕನಸಿನ ಬಜೆಟ್ಟು ಎಂದು ಹೊಗಳಿದ್ದ ಬಂಡವಾಳಿಗರು ಇಂದು ಅದನ್ನು ಟೀಕಿಸತೊಡಗಿದ್ದರು. ಬಂಡವಾಳಿಗ ರಾಹುಲ್ ಬಜಾಜ್‌ರಂತವರು ಚಿದಂಬರಂ ಅವರಿಗೆ ದೂರದೃಷ್ಟಿ ಇಲ್ಲದೇ ಹೋದದ್ದರಿಂದ ಇಂದು ಔದ್ಯಮಿಕ ಕ್ಷೇತ್ರದಲ್ಲಿ ಹಾಗೂ ಒಟ್ಟಾರೆ ಆರ್ಥಿಕದಲ್ಲಿ ಹಿಂಜರಿತವುಂಟಾಗಿದೆ ಎಂದು ಟೀಕಿಸಿದ್ದಾರೆ.

ಬಿಜೆಪಿಯ ಸರ್ಕಾರ ಇಂತಹ ಅನಾರೋಗ್ಯಕರ ಬೆಳವಣಿಗೆಯನ್ನು ತಡೆದು ಆರ್ಥಿಕವನ್ನು ಭದ್ರಗೊಳಿಸುವ ವಿಚಾರ ಮಾಡುವ ಬದಲು ಅದೇ ನೀತಿಗಳನ್ನು ಮುಂದುವರಿಸುವ ತನ್ನ ಇಂಗಿತವನ್ನು ತೋರಿದೆ. ಅದೇ ಸಮಯದಲ್ಲಿ ಪಿ.ಚಿದಂಬರಂ ಅವರ ನೀತಿಯ ವೈಫಲ್ಯವನ್ನು ತೋರಿ ರಾಜಕೀಯ ಲಾಭ ಪಡೆದುಕೊಳ್ಳುವ ದುಷ್ಟ ಹೇತುವನ್ನೂ ಹೊರಹಾಕಿದೆ.

ಮತ್ತೆ ಸಾರ್ವಜನಿಕ ವಲಯದ ಉದ್ದಿಮೆಗಳ ಮಾರಾಟವನ್ನು ಸಂಪನ್ಮೂಲದ ಒಂದು ಮುಖ್ಯ ಮೂಲವಾಗಿ ಬಿಜೆಪಿ ಪರಿಗಣಿಸಿದೆ. ಇದರಿಂದಲೇ ಬಿಜೆಪಿ ಎಂತಹ ಆರ್ಥಿಕವನ್ನು ಬೆಳಸಬಯಸುತ್ತದೆ ಎಂಬುದು ಗೊತ್ತಾಗಿಬಿಡುತ್ತದೆ.

ಕೇಂದ್ರ ಸರ್ಕಾರದ ಹಣಕಾಸು ಮಂತ್ರಿ ಯಶವಂತ ಸಿನ್ಹಾ ಮಂಡಿಸಿದ ಮಧ್ಯಂತರ ಬಜೆಟ್ಟಿನ ಮುಖ್ಯಾಂಶಗಳು

- *ವಿಡಿಐಎಸ್‌ನ 7594 ಕೋಟಿ ರೂಪಾಯಿಗಳು ರಾಜ್ಯಗಳಿಗೆ ಹರಿಯುವುದು(ಇದು ಸಂಯುಕ್ತ ರಂಗ ಸರ್ಕಾರವೇ ನಿರ್ಧರಿಸಿದ್ದು)*
- *ರಾಜ್ಯಗಳಿಗೆ ನೂರು ಕೋಟಿ ರೂಪಾಯಿಗಳ ಆರ್ಥಿಕ ನೆರವು.*
- *ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲಗಳ ಹಂಚಿಕೊಳ್ಳುವಿಕೆಯನ್ನು ಪರಿಣಾಮಕಾರಿಯಾಗಿ ಬದಲಾಯಿಸಲು ಸಂವಿಧಾನ ತಿದ್ದುಪಡಿ ಮಸೂದೆ ತರುವುದು.*
- *ಈಗಿರುವ ತೆರಿಗೆ ರಚನೆ ಮುಂದುವರಿಯುವುದು*
- *ಮುಂದಿನ ಹಣಕಾಸು ವರ್ಷದಲ್ಲಿ ಹಣಕಾಸು ಕೊರತೆ ಒಟ್ಟುತ್ಪಾದನೆಯ ಶೇ 6.1 ರಷ್ಟು*
- *ತೆರಿಗೆ ಸಂಗ್ರಹಣೆಯಲ್ಲಿ ಶೇ 12.6 ರಷ್ಟು ಕೊರತೆ(ಅಂದಾಜಿಗಿಂತ)*
- *ಶೇರು ಮಾರಾಟದ ಸ್ವೀಕೃತಿಯಲ್ಲಿ ದೊಡ್ಡ ಕೊರತೆ.*
- *ಸಾರ್ವಜನಿಕ ವಲಯದ ಮಾರಾಟವನ್ನು ತೀವ್ರಗೊಳಿಸುವುದು.*
- *ಆರ್ಥಿಕ ಸುಧಾರಣೆಗಳನ್ನು ವಿಸ್ತೃತಗೊಳಿಸುವುದು ಮತ್ತು ವೇಗಗೊಳಿಸುವುದು.*
- *ಯೋಜನೆಗೆ ಬಜೆಟ್ ಬೆಂಬಲ 64461 ಕೋಟಿ ರೂಪಾಯಿಗಳಷ್ಟು. 1998-99 ರ ವಾರ್ಷಿಕ ಯೋಜನೆಯ ಬಜೆಟ್ ಬೆಂಬಲದ ಪುನರ್ವಿಮರ್ಶೆ ಮಾಡುವುದು.*
- *ಕೃಷಿ ಮತ್ತು ಉದ್ದಿಮೆಗಳಿಗೆ ಚಾಲನೆ ನೀಡಲಾಗುವುದು ರಫ್ತನ್ನು ಪೂರ್ಣ ಪ್ರಮಾಣದ ಬಜೆಟ್ಟಿನಲ್ಲಿ ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು ಮತ್ತು ದೊಡ್ಡ ಪ್ರಮಾಣದ ವಿದೇಶೀ ಹೂಡಿಕೆ ಹರಿದುಬರುವಂತೆ ಪ್ರೋತ್ಸಾಹ ನೀಡಲಾಗುವುದು.*
- *ಪೂರ್ಣಾವಧಿ ಬಜೆಟ್ ಹಣಕಾಸು ವ್ಯವಸ್ಥೆ ಮತ್ತು ಅಂತರ್ರಚನಾ ಸೌಲಭ್ಯಗಳನ್ನು ಸುಧಾರಿಸುವದು. ಹಣಕಾಸು ಶಿಸ್ತನ್ನು ಸಾಧಿಸುವುದು.*
- *ಸರ್ಕಾರದ ಖರ್ಚನ್ನು ಹಿಡಿತದಲ್ಲಿಡಲಾಗುವುದು.*



ಐ.ಎಂ.ಎಫ್ ಧಣಿಯ ಒಳತಂತ್ರ

ಐ.ಎಂ.ಎಫ್. ಈಗ ತನ್ನ ಸಂವಿಧಾನದಲ್ಲಿ ತಿದ್ದುಪಡಿ ತಂದು ಅದರಿಂದ ತಾನು ಸಾಲ ನೀಡುವ ಎಲ್ಲ ದೇಶಗಳು ಸ್ಥಳೀಯ ಮತ್ತು ರಾಷ್ಟ್ರೀಯ ಅಡೆತಡೆಗಳನ್ನು ತೆಗೆದು ಹಾಕಲು ಬಯಸಿದೆಯಂತೆ. ವಿದೇಶೀಯರು ಜಮೀನು ಹೊಂದುವುದು ಅಥವಾ ಹೂಡಿಕೆ ಮಾಡುವುದರ ಮೇಲಿನ ಪ್ರತಿಬಂಧಗಳನ್ನು ಈ ತಿದ್ದುಪಡಿ ತೆಗೆದು ಹಾಕಲು ಒತ್ತಡ ಹೇರುತ್ತದೆ.

ಐ.ಎಂ.ಎಫ್.ನ ನೀತಿ ರೂಪಿಸುವ ಮಧ್ಯಂತರ ಸಮಿತಿ ಈ ಬಗ್ಗೆ ಮುಂದಿನ ತಿಂಗಳು ನಿರ್ಧಾರ ಕೈಗೊಳ್ಳಲಿದೆಯಂತೆ. ಐ.ಎಂ.ಎಫ್ ನ ಈ ನಿರ್ಧಾರಕ್ಕೆ ಅಮೇರಿಕದ ಆಡಳಿತದ ಬೆಂಬಲ ಇದೆಯಂತೆ. ಆದರೆ ಅಮೇರಿಕದ ಕಾಂಗ್ರೆಸ್‌ನಲ್ಲಿ ಇದಕ್ಕೆ ವಿರೋಧವಿದೆಯಂತೆ.

ಈ ತಿದ್ದುಪಡಿಯಲ್ಲಿ ಬಂಡವಾಳ ಖಾತೆಯ ಪರಿವರ್ತನೀಯತೆಯೂ ಸೇರಿದೆ. ಬಹುರಾಷ್ಟ್ರೀಯ ಕಂಪನಿಗಳ ಹೂಡಿಕೆಗಳ ಮೇಲಿರುವ ಎಲ್ಲಾ ಪ್ರತಿಬಂಧಗಳನ್ನು ತೆಗೆದು ಹಾಕುವಂತೆ ಒತ್ತಡವನ್ನು ಅದು ಹೇರಲಿದೆ.

ಸಾಮ್ರಾಜ್ಯಶಾಹಿಗಳ ಗುರಿಗಳನ್ನು ಸಾಧಿಸಲು ಐ.ಎಂ.ಎಫ್ ಎಂತಹ ಸಾಧನವಾಗಿ ಕೆಲಸ ಮಾಡುತ್ತದೆ ಎಂಬುದಕ್ಕೆ ಇದಕ್ಕಿಂತ ಪುರಾವೆ ಬೇಕೆ?

ಬಳಕೆ ವಸ್ತುಗಳ ಕ್ಷೇತ್ರದಲ್ಲಿ ವಿದೇಶೀ ನೇರ ಹೂಡಿಕೆಯ ಪುನರ್ ವಿಮರ್ಶೆ

ಬಿಜೆಪಿಯ ಸರ್ಕಾರದ ಸ್ವದೇಶಿ ನೀತಿಯ ಪ್ರಕಾರ ಬಳಕೆ ವಸ್ತುಗಳ ವಲಯದಲ್ಲಿ ವಿದೇಶೀ ನೇರ ಹೂಡಿಕೆಗೆ ಅವಕಾಶವಿಲ್ಲ. ಆದ್ದರಿಂದ ಅದು ಇಲ್ಲಿಯವರೆಗೆ ಬಂದಿರುವ ವಿದೇಶೀ ನೇರ ಹೂಡಿಕೆಯನ್ನು ಪುನರ್ವಿಮರ್ಶಿಸುವುದಾಗಿ ಹೇಳಿದೆ.

ಅದರ ಈ ಪುನರ್ವಿಮರ್ಶೆಯ ಅಂಶಗಳು ಈ ಕೆಳಗಿನಂತಿವೆ.

- ಈವರೆಗೆ ಬಳಕೆ ವಸ್ತುಗಳ ವಲಯಕ್ಕೆ ಬಂದಿರುವ ವಿದೇಶೀ ನೇರ ಹೂಡಿಕೆಯನ್ನು ವಿಮರ್ಶಿಸುವುದು.
- ಬಹುರಾಷ್ಟ್ರೀಯ ಕಂಪನಿಗಳು ತಮ್ಮ ರಫ್ತ ಭರವಸೆಗಳನ್ನು ಪೂರೈಸಿವೆಯೊ ಇಲ್ಲವೊ ಎಂಬುದನ್ನು ಖಾತರಿಪಡಿಸಿ ಕೊಳ್ಳುವುದು ಮುಖ್ಯವಾಗಿದೆ. ಆಟೋ (ಮೋಟಾರು ವಾಹನಗಳು) ತಂಪು ಪಾನೀಯಗಳು ಮತ್ತು ಮಾದಕ ಪಾನೀಯಗಳ ಕಂಪನಿಗಳಿಗೆ ಹೆಚ್ಚಿನ ಗಮನ. ಒಂದು ಅಂದಾಜಿನ ಪ್ರಕಾರ ಕಳೆದ 3-4 ವರ್ಷಗಳಲ್ಲಿ ಸುಮಾರು 15000 ಕೋಟಿ ರೂಪಾಯಿಗಳ ಆಮದು ಸುಂಕ ರಿಯಾಯಿತಿ ನೀಡಲಾಗಿದೆ. ಇದರಿಂದ ತಕ್ಕ ಲಾಭ ದೇಶಕ್ಕೆ ಆಗಿದೆಯೇ ಎಂಬುದನ್ನು ಪರೀಕ್ಷಿಸುವುದು.

ಈ ಕಂಪನಿಗಳು ಎಷ್ಟು ರಫ್ತ ಮಾಡಿವೆ ಎಂಬ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಲಭ್ಯವಿಲ್ಲ.

ಇಂತಹ ಪುನರ್‌ವಿಮರ್ಶೆ ಆಗ ಬೇಕಾದದ್ದೇ. ಆದರೆ ಬಿ.ಜೆ.ಪಿ.ಗೆ ಇದನ್ನು ಮಾಡುವ ಪ್ರಾಮಾಣಿಕತೆ ಇದೆಯೇ ಎಂಬುದು ಪ್ರಶ್ನೆ. ಈಗಾಗಲೇ ಅಯೋಧ್ಯೆಯ ಕಡೆಗೆ ಗಮನ ಹರಿಸಿರುವ ಸರ್ಕಾರಕ್ಕೆ ಇಂತಹ ಮುಖ್ಯ ಕೆಲಸಗಳ ಬಗ್ಗೆ ಗಮನ ಹರಿಸುವ ವ್ಯವಧಾನ ಇರಲಿಕ್ಕಿಲ್ಲ. ಬರೀ ರಾಜಕೀಯ ಕಸರತ್ತಿಗಾಗಿ ಪ್ರಚಾರ ಮಾತ್ರ ಈ ಮಾತುಗಳಿರಬಹುದು ಅಲ್ಲವೇ?

ಕರ್ನಾಟಕದಲ್ಲಿ ಕಳೆದವಾರ

ಮಾರ್ಚ್ 27, 1998

- ರಾಜ್ಯ ಸರ್ಕಾರ ಆಸ್ಪತ್ರೆಗಳಿಗೆ ಔಷಧಿ ಖರೀದಿ ಮತ್ತು ಪೂರೈಕೆಯಲ್ಲಿ ಅನಿಯಮಿತತೆ ಬಗ್ಗೆ ತನಿಖೆಗೆ ಆದೇಶ.
- ವಿದ್ಯುತ್ ಯೋಜನೆಗಳ ಜಾರಿಯಲ್ಲಿ ವಿಳಂಬದಿಂದಾಗಿ ಒಟ್ಟು ವೆಚ್ಚ ದ್ವಿಗುಣಗೊಳಿಸುತ್ತಿರುವುದರಿಂದ ರಾಜ್ಯದ ವಿದ್ಯುತ್ ಉತ್ಪಾದನೆ ಪ್ರಗತಿಗೆ ದೊಡ್ಡ ಅಡ್ಡಿ ಎಂದು ಕೆ.ಪಿ.ಸಿ.ಎಲ್. ಮ್ಯಾನೇಜಿಂಗ್ ಡೈರಕ್ಟರ್

ಮಾರ್ಚ್ 28, 1998

- ರಾಜ್ಯ ಆಡಳಿತ ನ್ಯಾಯ ಮಂಡಳಿ ರದ್ದು, ಇನ್ನು ಮುಂದೆ ಸರ್ಕಾರಿ ಸೇವಾ ವಿಷಯದ ವ್ಯಾಜ್ಯಗಳಿಗೆ ನೇರವಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.
- ಕೆಇಬಿಯ ವಿವಿಧ ಯೋಜನೆಗಳಿಗೆ ಅಗತ್ಯವಿರುವ ಹಣವನ್ನು ಸಾಲವಾಗಿ ಪಡೆಯಲು ಇರುವ ಗರಿಷ್ಟ ಮಿತಿಯನ್ನು 1400 ಕೋಟಿ ರೂನಿಂದ 1750 ಕೋಟಿ ರೂ.ಗೇರಿಸುವ ಪ್ರಸ್ತಾವನೆಗೆ ವಿಧಾನಸಭೆ ಅನುಮೋದನೆ.

ಮಾರ್ಚ್ 28, 1998

- ಹೆಚ್.ಡಿ.ದೇವೇಗೌಡರು ತೆರವು ಮಾಡಿರುವ ರಾಜ್ಯಸಭಾ ಸ್ಥಾನಕ್ಕೆ ಪ್ರೊ. ಎ.ಲಕ್ಷ್ಮಿಸಾಗರ್ ಜನತಾದಳ ಅಭ್ಯರ್ಥಿ.

ಮಾರ್ಚ್ 30, 1998

- ವಿಸ್ತರಿತ ಬಜೆಟ್ ಅಧಿವೇಶನ ಮುಗಿದ ಮೇಲೆ ಮೇ 15 ರ ಹೊತ್ತಿಗೆ ಸಂಪುಟವನ್ನು ಪುನರ್ರಚಿಸಲಾಗುವುದು ಎಂದು ಮುಖ್ಯಮಂತ್ರಿಗಳು.
- ಔಷಧಿಗಳಿಗೆ ಕೇಂದ್ರ ಸರಕಾರ ನಿಗದಿಪಡಿಸಿದ ಬೆಲೆ ಹೆಚ್ಚಿಸಿ ಔಷಧಿ ಕಂಪನಿಗಳು ನಡೆಸುತ್ತಿರುವ ಶೋಷಣೆಯ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸುವುದಾಗಿ ವಿಧಾನ ಸಭೆಯಲ್ಲಿ ಪ್ರಕಟಣೆ.

ಮಾರ್ಚ್ 31, 1998

- ನಗರ ಪ್ರದೇಶಗಳಲ್ಲಿ ಎರಡು ಗಂಟೆಗಳ ಕಾಲ ಲೋಡ್‌ಶೆಡ್ಡಿಂಗ್ ಎಂದು ವಿದ್ಯುತ್‌ಖಾತೆ ರಾಜ್ಯ ಸಚಿವ. ಆದರೆ ಮಹಾರಾಷ್ಟ್ರದಿಂದ ವಿದ್ಯುತ್ ಪೂರೈಕೆ ಆಗುತ್ತಿರುವುದರಿಂದ ಸದ್ಯಕ್ಕೆ ಇದು ಇಲ್ಲ ಎಂದು ಕೆ.ಇ.ಬಿ.
- ಚಿಕ್ಕೋಡಿ ಬಳಿ ಹರಿಜನ ಕೇರಿಗೆ 400 ಸವರ್ಣೀಯರ ಧಾಳಿ.

ಏಪ್ರಿಲ್ 1, 1998

- ಹಾಲಿನ ದರ ಲೀಟರಿಗೆ 50 ಪೈಸೆ ಏರಿಕೆ
- ಬಡ ಕುಟುಂಬಗಳಿಗೆ 6 ಲಕ್ಷ ಹಸಿರು ಕಾರ್ಡ್ ವಿತರಿಸಲು ಬಜೆಟ್‌ನಲ್ಲಿ 36 ಕೋಟಿ ರೂ. ನೀಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು.
- ಏಳು ನೂತನ ಜಿಲ್ಲಾ ಪಂಚಾಯತುಗಳು ಅಸ್ತಿತ್ವಕ್ಕೆ - ತಿಂಗಳೊಳಗೆ ಇವುಗಳ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಸಲಾಗುವುದೆಂದು ಗ್ರಾಮೀಣಾಭಿವೃದ್ಧಿ ಸಚಿವರು.

ಏಪ್ರಿಲ್2, 1998

- ರಾಜ್ಯದ ವೈದ್ಯಕೀಯ ಕಾಲೇಜುಗಳ ಉಪನ್ಯಾಸಕರಿಗೆ ಈ ವರ್ಷದಿಂದ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವರು.

ಬೀದರ್ ರೈತರ ಜೀಪ್ ಜಾಥಾ: ಆತ್ಮಹತ್ಯೆಯ ಹೇಡಿತನ ಬೇಡ-ಹೋರಾಟದ ಬದುಕು ಬೇಕು

ಬೀದರ್ ಜಿಲ್ಲೆಯ ಹತ್ತಿ, ತೊಗರಿ, ಕಡಲೆ ಮುಂತಾದ ಬೆಳೆಗಾರರು ನಷ್ಟ ಅನುಭವಿಸಿ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬಾಲ್ಕಿ ತಾಲೂಕಾದ ಸಿದ್ದೇಶ್ವರ ಗ್ರಾಮದ ರೈತರಿಗೆ ಪರಿಹಾರ ನೀಡುವಂತೆ ಒತ್ತಾಯಿಸುವ 10 ಬೇಡಿಕೆಗಳನ್ನಿಟ್ಟು ಕರ್ನಾಟಕ ಪ್ರಾಂತ ರೈತ ಸಂಘದ ಘಟಕ ಮಾರ್ಚ್ 22 ರಂದು ಜೀಪ್ ಜಾಥಾ ಸಂಘಟಿಸಿತ್ತು.

ಜೀಪ್ ಜಾಥಾ ಉದ್ಘಾಟಿಸಿದ 'ಬೀದರ್ ಕೀ ಅವಾಜ್' ಪತ್ರಿಕೆಯ ಸಂಪಾದಕರಾದ ಖಾಲಿ ಅರಸಾದ್ ಆಲಿ ಮಾತನಾಡಿ, ರೈತರೆಲ್ಲ ಒಗ್ಗೂಡಿ, ರೈತರ ಬಗ್ಗೆ ಕಾಳಜಿ ವಹಿಸದ ಸರ್ಕಾರವನ್ನು ಬಡಿದೆಬ್ಬಿಸಬೇಕೆಂದು ಕರೆ ನೀಡಿದರು. ಪ್ರಾಸ್ತಾವಿಕ ಭಾಷಣ ಮಾಡಿದ ಜಿಲ್ಲಾ ಕಾರ್ಯದರ್ಶಿ ಸಂಗ್ರಾಮ್ ಮಾತನಾಡಿ ಇಲ್ಲಿಯವರೆಗೆ ಅಧಿಕಾರ ನಡೆಸಿದ ಎಲ್ಲಾ ಸರ್ಕಾರಗಳು ರೈತರ ಹಿತರಕ್ಷಣೆ ಮಾಡುವಲ್ಲಿ ವಿಫಲವಾಗಿರುವುದೆ ರೈತರು ಆತ್ಮಹತ್ಯೆಯತ್ತ ಹೊರಟಿರುವುದು ಎಂದರು. ರೈತರು ಆತ್ಮಹತ್ಯೆಯಂತಹ ಹೇಡಿತನದಿಂದ ಹೊರಬಂದು ಸಂಘಟನೆ-ಹೋರಾಟದ ಮೂಲಕ ಆತ್ಮವಿಶ್ವಾಸದ ಬದುಕು ಸಾಗಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಗ್ರಾಮದ ಹಿರಿಯರಾದ ಕಾಳೆಪ್ಪ ಸೀತಾರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪಬ್ಲಿಕ್ ಪತ್ರಿಕೆ ಸಂಪಾದಕ ಗಂದರ್ವ, ಎಂ.ಎಸ್.ಮನೋಹರ್ ಶಶಿಧರ್ ಸೀತಾ ಮಾತನಾಡಿದರು. ಸಂಗ್ರಾಮ್ ಬೋಸ್ಲೆ ಉಪಸ್ಥಿತರಿದ್ದರು.



ಇದೇ ಸಂದರ್ಭದಲ್ಲಿ ನೂರಾರು ಗ್ರಾಮಸ್ಥರು ಜಾಥಾಕ್ಕೆ ಶುಭಕೋರಿದರು. ಜಾಥಾವು ರೈತರು ಆತ್ಮಹತ್ಯೆ ಮಾಡಿಕೊಂಡ ಹಳ್ಳಿಗಳಲ್ಲಿ ಸಂಚರಿಸಿ, ವಿಭಾಗಾಧಿಕಾರಿ ಕಚೇರಿ ಮುಂದೆ ನಡೆಯುವ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆ ನೀಡಿತು.

ಅಭಿವೃದ್ಧಿ ಶುಲ್ಕ ವಿರೋಧಿಸಿ ಮುಖ್ಯಮಂತ್ರಿ ಮನೆ ಮುಂದೆ ಉಗ್ರ ಪ್ರತಿಭಟನೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅಭಿವೃದ್ಧಿ ಶುಲ್ಕ ವಿರೋಧಿಸಿ ಮುಖ್ಯಮಂತ್ರಿಗಳ ಮನೆಯ ಮುಂದೆ ಸಾವಿರಾರು ನಾಗರೀಕರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಗರದ ಹೊರ ವಲಯದಲ್ಲಿರುವ ವಿವಿಧ ಬಡಾವಣೆಗಳ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸಂಘಟಿಸಿದ ಈ ಹೋರಾಟದಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ನಾಗರೀಕರು ಹಾಗೂ ಯುವಜನರು ಭಾಗವಹಿಸಿದ್ದರು.

ಸರ್ಕಾರದ ಪರವಾಗಿ ಮಾನ್ಯ ಬಂಧಿಖಾನೆ ಸಚಿವರಾದ ಶ್ರೀ ವಿ.ಸೋಮಣ್ಣನವರು ಮನವಿಯನ್ನು ಸ್ವೀಕರಿಸಿ ಅಭಿವೃದ್ಧಿ ಶುಲ್ಕ ಪಾವತಿಗೆ ಗಡುವು ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವುದಾಗಿ ಹೇಳಿದರು. ನಂತರ ನಗರ ಸಭೆಗಳ ವ್ಯಾಪ್ತಿಯಲ್ಲಿ 30-40 ಸೈಟಿಗೆ ವಿಧಿಸಿರುವ ಪ್ರತಿ ಚದರ ಗಜಕ್ಕೂ 100 ರೂ. ಅಭಿವೃದ್ಧಿ ಶುಲ್ಕವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಈ ಸಂಬಂಧವಾಗಿ ಏಪ್ರಿಲ್ 7 ರಂದು ಮುಖಂಡರೊಂದಿಗೆ ಮಾತುಕತೆ ನಡೆಸುವುದಾಗಿ ಆಶ್ವಾಸನೆ ನೀಡಿದ್ದಾರೆ.

ಹೋರಾಟಗಾರರನ್ನು ಉದ್ದೇಶಿಸಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಮಾತನಾಡಿ ಸರ್ಕಾರದ ಪರವಾಗಿ ವಿ.ಸೋಮಣ್ಣನವರಿಗೆ ಮನವಿ ನೀಡಿದ್ದೇವೆ. ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನಾಗರೀಕರ ಅಹವಾಲನ್ನು ಬಗೆಹರಿಸಬೇಕೆಂದು ಒತ್ತಾಯಿಸಿದರು. ಸರ್ಕಾರ ಈ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ನಾಗರೀಕರನ್ನು ಸಂಘಟಿಸಿ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳನ್ನು ಪಿಕೆಟಿಂಗ್ ಮಾಡಿಸುವುದಾಗಿ ಎಚ್ಚರಿಕೆ ನೀಡಿದರು. ನಗರದ ಸಮಾರಂಭಕ್ಕೆ ಬರುವ ಮಂತ್ರಿಗಳನ್ನು ಪಿಕಟಿಂಗ್ ಮಾಡುವ ಹೋರಾಟಕ್ಕೆ ಮುಂದಾಗಬೇಕಾಗುತ್ತದೆಂದು ತಿಳಿಸಿದರು.,

ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಈ ಸರ್ಕಾರ ಕಿವುಡು ಸರ್ಕಾರ ಜನರ ಸಮಸ್ಯೆ ಕೇಳಿಸುವುದಿಲ್ಲ. ಜನರು ಹೆಚ್ಚಿನ ಹೋರಾಟಕ್ಕೆ ತಯಾರಾಗಬೇಕು. ಈ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ನಡೆಸಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಅಭಿವೃದ್ಧಿ ಶುಲ್ಕ ಖಂಡಿತ ಕಡಿಮೆಯಾಗಲೇಬೇಕೆಂದು ಒತ್ತಾಯಿಸಿದರು.,

ಪ್ರಾರಂಭದಲ್ಲಿ ಯುವಜನ ಸಂಘಟನೆಯ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಈ ಹೋರಾಟವನ್ನು ಬೆಂಬಲಿಸಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯವರಾದ ಕಾಂ. ಪಿ.ಜಗನ್ನಾಥ್ ರವರು ಬೆಂಬಲಿಸಿ ಜನಸಾಮಾನ್ಯರ ಮೇಲೆ ಹೊರೆಯಾಗಿರುವ ಈ ಅಭಿವೃದ್ಧಿ ಶುಲ್ಕವನ್ನು ಕಡಿಮೆ ಮಾಡಬೇಕೆದು ಸರ್ಕಾರವನ್ನು ಒತ್ತಾಯಿಸಿದರು.

ಬಡಹಂಚು ಕಾರ್ಮಿಕನ ಮೇಲೆ ಗುಂಪು ಹಲ್ಲೆಗೆ ಖಂಡನೆ

ಹೊನ್ನಾವರ: ಮಾರ್ಚ್ 28 ರಂದು ವೆಂಕಟಾಪುರ ಬಿಟ್ಕೋ ಹಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡಿ ಮನೆಗೆ ಮರಳುತ್ತಿದ್ದ ಬಡ ಹಂಚಿನ ಕಾರ್ಮಿಕನಾದ ಬೈರಾ ನಾಯ್ಕನ ಮೇಲೆ ಸಂಘಟನಾ ವೈಯಕ್ತಿಕ ದ್ವೇಷದಿಂದ ಕಾರ್ಖಾನೆ ಕಾರ್ಮಿಕರಾದ ನಾಗಪ್ಪ ಕುಳ್ಳಾ ನಾಯ್ಕ ಶ್ರೀಧರ ದೇವಾಡಿಗ ಸಾಲಿಮನೆ ನಾಗಪ್ಪ ಎನ್ನುವವರು ಸ್ಥಳೀಯ ಕೆಲವು ವ್ಯಕ್ತಿಗಳಾದ ಶಿಕಾರಿ ಅಂಚೆ ಕಚೇರಿ ಕೆಲಸಗಾರನಾದ ಜಗನ್ನಾಥ್ ಮೊಗೇರ ಶಿವರಮಾ ದೇವಾಡಿಗ, ವೆಂಕಟರಮಣ ಮೊಗೇರ ಇನ್ನಿತರ 15 ಜನರೊಂದಿಗೆ ಒಮ್ಮೆಲೆ ಮಾರಕಾಸ್ತ್ರದಿಂದ ಕಲ್ಲು ಬಡಿಗೆ ಇಟ್ಟಿಗೆ ತುಂಡಿನಿಂದ ಎದೆ ಬೆನ್ನಿನ ಮೇಲೆ ಗುದ್ದಿ ಮಾರಣಾಂತಿಕ ಪೆಟ್ಟನ್ನು ಕೊಟ್ಟು ಸತ್ತನೆಂದು ತಿಳಿದು ಓಡಿ ಹೋದರು. ನಂತರ ಕೆಲವು ಜನ ಬಿದ್ದಿರುವುದನ್ನು ನೋಡಿ ಭಟ್ಕಳ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಗೆ ಒಳಪಡಿಸಿದರು. ಇದಕ್ಕೆ ತದ್ವಿರುದ್ಧವಾಗಿ ತಾವೇ ಹಲ್ಲೆ ಮಾಡಿ ಬೈರಾ ನಾಯ್ಕ ಮತ್ತು ಕೆಲವು ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಲ್ಲದೆ ನಮಗೆ ಹೊಡೆದಿದ್ದಾರೆಂದು ಗುಲ್ಲು ಹಬ್ಬಿಸಿರುವುದು ವಿಷಾದನೀಯ ಸಂಗತಿ. ಅಮಾನವೀಯ ರೀತಿಯಲ್ಲಿ ಕೇವಲ ಸಂಘಟನಾ ವೈಯಕ್ತಿಕ ದ್ವೇಷದಿಂದ ಈ ರೀತಿ ಗೂಂಡಾ ಪ್ರವೃತ್ತಿ ಆಗುತ್ತಿರುವುದನ್ನು ಹಂಚಿನ ಕಾರ್ಮಿಕರ ಜಿಲ್ಲಾ ಸಮಿತಿ ಖಂಡಿಸಿದೆ.

ಕಾರ್ಖಾನೆಯ ಒಳಗೆ ಯಾವುದೇ ಕಾರ್ಮಿಕ ವಿವಾದವಿದ್ದಲ್ಲಿ ಆಡಳಿತ ಮಂಡಳಿ ಗಮನಕ್ಕೆ ತರುವುದನ್ನು ಬಿಟ್ಟು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಈ ರೀತಿ ಕೃತ್ಯ ನಡೆಸಿರುವುದು ನಿಜಕ್ಕೂ ಖೇದಕರ. ಈ ಬಗ್ಗೆ ಜಿಲ್ಲಾ ಆಡಳಿತ, ಪೋಲೀಸ್ ವರಿಷ್ಠಾಧಿಕಾರಿಗಳು ಈ ಬಗ್ಗೆ ಸಮಗ್ರ ತನಿಖೆ ನಡೆಸಿ ನ್ಯಾಯ ತೀರ್ಮಾನ ಮಾಡಿ ಭಯ ಮುಕ್ತ ವಾತಾವರಣ ನಿರ್ಮಿಸಬೇಕೆಂದು ಜಿಲ್ಲಾ ಸಮಿತಿ ಮನವಿ ಮಾಡಿದೆ.

ಒಂದು ವೇಳೆ ಸದ್ರೀ ಘಟನೆಯಲ್ಲಿ ಭಾಗವಹಿಸಿದ ತಪ್ಪಿತಸ್ಥರನ್ನು ತೀವ್ರ ಶಿಕ್ಷೆಗೆ ಒಳಪಡಿಸದಿದ್ದಲ್ಲಿ ಸಂಘವು ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಿದೆ ಎಂದು ಸಂಘವು ತಿಳಿಸಿದೆ.

ಸಿಐಟಿಯು ಘಟಕ ರಚನೆ


ಹೊನ್ನಾವರ: ಹೊನ್ನಾವರ ತಾಲೂಕಿನ ಹಳದಿಪುರ ವಿಕಾಸ್ ಟೈಲ್ಸ್ ಪ್ರೈವೆಟ್ ಲಿಮಿಟೆಡ್‌ನ ನೂರಾರು ಕಾರ್ಮಿಕರು ಸಿಐಟಿಯು ಸಂಘಟನೆಗೆ ಸದಸ್ಯರಾಗಿ ಇತ್ತೀಚಿಗೆ ನಡೆದ ಸರ್ವಸದಸ್ಯರ ಸಭೆಯಲ್ಲಿ ಕಾರ್ಖಾನೆ ಸಮಿತಿ ರಚಿಸಲಾಯಿತು.

ಸುರೇಶ ನಾಯ್ಕ(ಅಧ್ಯಕ್ಷರಾಗಿ), ಮಂಜು ಭಂಡಾರಿ(ಕಾರ್ಯದರ್ಶಿಯಾಗಿ) ಸರ್ವಾನುಮತದಿಂದ ಆಯ್ಕೆಯಾದರು ಸಭೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾ. ಕೆ.ಶಂಕರ, ಟಿ.ಎಸ್.ನಾಯ್ಕ ತಿಲಕಗೌಡ ಮತ್ತು ಸುಭಾಸ ಕೊಪ್ಪಿಕರ ಉಪಸ್ಥಿತರಿದ್ದರು.

ಖಾಯಂ ವೈದ್ಯರನ್ನು ನೇಮಿಸಲು ಆಗ್ರಹ

ಮಂಗಳೂರು: ಕುಪ್ಪೆಪದವು ಗ್ರಾಮ ಪಂಚಾಯತು ವ್ಯಾಪ್ತಿಯ ಸರಕಾರಿ ಆರೋಗ್ಯಕೇಂದ್ರವು ಬಡರೋಗಿಗಳಿಗೆ ಆಶಾದೀಪವಾಗಿದ್ದರೂ ಕಳೆದ ಜುಲೈ ನಿಂದ ವೈದ್ಯರಿಲ್ಲದೆ ಉಪಯೋಗಕ್ಕೆ ಬಾರದ ಆರೋಗ್ಯ ಕೇಂದ್ರವಾಗಿದೆ. ಇಲ್ಲಿಗೆ ಕೂಡಲೇ ಖಾಯಂ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕೆಂದು ಮಾರ್ಚ್ 25 ರಂದು ದ.ಕ.ಜಿಲ್ಲಾ ಪಂಚಾಯತು ಅಧ್ಯಕ್ಷರು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಯವರನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್) ಕುಪ್ಪೆಪದವು ಘಟಕ ಆಗ್ರಹಿಸಿದೆ. ಓರ್ವ ಫಾರ್ಮರ್ ಸಿಸ್ಟರ್‌ರನ್ನು ಖಾಯಂ ಇರುವಂತೆ ನೇಮಿಸಬೇಕು ಮತ್ತು ಮುತ್ತೂರು ಗ್ರಾಮವನ್ನು ಕೂಡ ಸಬ್‌ಸೆಂಟರ್ ಮಾಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕಾಂ. ಇ.ಎಂ.ಎಸ್. ಲಾಲ್‌ಸಲಾಮ್



ವಿಜಾಪುರ: ಭಾರತ ಕಮ್ಯುನಿಸ್ಟ್ ಪಾರ್ಟಿ ಮಾರ್ಕ್ಸ್‌ವಾದಿ ಹಾಗೂ ಭಾರತ ಕಮ್ಯುನಿಸ್ಟ್ ಪಾರ್ಟಿಯ ಸಭೆಯು ಪಿ.ಎಸ್.ಪಾಟೀಲ ಅಧ್ಯಕ್ಷತೆಯಲ್ಲಿ ಜರುಗಿ ಉಭಯ ಪಾರ್ಟಿಗಳ ಅನೇಕ ಕಾರ್ಯಕರ್ತ ದುಃಖ ಸಾಗರದಲ್ಲಿ ಪಿ.ಎಸ್.ಪಾಟೀಲರು ಇಎಂಎಸ್ ರವರು ಬಾಂಬೆಯಲ್ಲಿ ನಡೆದ ಅಧಿವೇಶನದಲ್ಲಿ ಹಾಗೂ ಬಿಜಾಪುರಕ್ಕೆ ಭೇಟಿ ನೀಡಿದಾಗ ಅವರ ಅನುಭವಗಳನ್ನು ವಿಶ್ಲೇಷಿಸಿದರು. 'ಇಎಂಎಸ್ ಎಂದೇ ಪ್ರಸಿದ್ಧರಾದ ನಂಬೂದಿರಿಪಾಡ್ ರವರು ಅಖಿಲಭಾರತದಲ್ಲಿ ಕಾಂಗ್ರೆಸ್ ಬಿರುಗಾಳಿಯನ್ನು ಸದೆಬಡಿದು 1957 ರಲ್ಲಿ ಏಷ್ಯಾ ಖಂಡದಲ್ಲಿಯೇ ಪ್ರಥಮ ಬಾರಿಗೆ ಚುನಾವಣೆಯಲ್ಲಿ ಗೆದ್ದು ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಸರಕಾರ ರಚಿಸಿ ಮುಖ್ಯಮಂತ್ರಿಯಾದ ಹೆಗ್ಗಳಿಕೆ ಇಎಂಎಸ್ ರವರಿಗೆ ಸಲ್ಲುತ್ತದೆ. 109 ಪುಸ್ತಕಗಳಲ್ಲಿ ಸಮಾಜವಾದದ ತಿರುಳನ್ನು ತಮ್ಮ ಪುಸ್ತಕದಲ್ಲಿ ಬರೆದು ಪ್ರಕಟಿಸಿ ಜನ ಜಾಗೃತಿಗೊಳಿಸಿದ್ದಾರೆ. ಇಎಂಎಸ್‌ರವರ ಆದರ್ಶ, ಸರಳ ಜೀವನ ಅಳವಡಿಸಿ ಕಮ್ಯುನಿಸ್ಟ್ ಪಕ್ಷಗಳು ಬೆಳವಣಿಗೆಹೊಂದಬೇಕು ಎಂದು ಕರೆ ಕೊಟ್ಟರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಲ್.ಕೆ.ಚಂಚಲಕರ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ, ಪ್ರಕಾಶ್ ಹೆಟ್ಟಿನಹಳ್ಳಿ, ವಿ.ಎಂ.ಸೊನ್ನದ, ಎಂ.ಎ. ಮೊಕಾಶಿ, ಸುರೇಖಾ ರಜಪೂತ, ಮನ್ನುಸಾಬ ಕಲಾದಗಿ, ಭೀಮಶಿ ಕೌಜಲಗಿ, ಜನಿವಾರ, ಮಳಸಿದ್ದ ನಾಯಕೋಡಿ, ಎ.ಆರ್.ಕೊಡಗಿ ಮುಂತಾದವರು ಮಾತನಾಡಿದರು.

ಎಪಿಎಂಸಿ ಯಾರ್ಡ್‌ನಿಂದ ಮೆರವಣಿಗೆ ಹೊರಟು, ಮುಖ್ಯಬೀದಿಗಳಿಂದ ಹಾಯ್ದು ಗಾಂಧಿವೃತ್ತದಲ್ಲಿ ಇಎಂಎಸ್ ನಂಬೂದರಿಪಾಡ್ ಅಮರ್‌ರಹೆ, ಕಮ್ಯುನಿಸ್ಟ್ ಪಾರ್ಟಿ ಜಿಂದಾಬಾದ್, ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಯೊಂದಿಗೆ ಅಗಲಿದ ನಾಯಕನಿಗೆ ಅಂತಿಮ ಲಾಲ್ ಸಲಾಮದೊಂದಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಗೌರಿಬಿದನೂರು: ಗೌರಿಬಿದನೂರು ತಾಲ್ಲೂಕು ಸಿಪಿಐ(ಎಂ) ಪಕ್ಷದ ಸದಸ್ಯರು ಮತ್ತು ಬೆಂಬಲಿಗರು ಗೌರವ ಪೂರ್ವಕವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಕೋಲಾರ ಜಿಲ್ಲಾ ಕಾರ್ಯದರ್ಶಿ ಹಾಗೂ ಬಾಗೇಪಲ್ಲಿ ಶಾಸಕರು ಜಿ.ವಿ.ಶ್ರೀರಾಮರೆಡ್ಡಿ ಕಾಂ. ಇಎಂಎಸ್‌ರ ಹೋರಾಟ ಅವರ ಜೀವನ ಹಾದಿಯ ಗುರಿಯನ್ನು ಸಭೆಯಲ್ಲಿ ವಿವರಿಸಿದರು ಮತ್ತು 1998 ಲೋಕಸಭಾ ಚುನಾವಣೆಯಲ್ಲಿ ಪರಿಚಯವಾದ ಕಾರ್ಯಕರ್ತರಿಗೆ ಸಿಪಿಐ(ಎಂ) ಪಕ್ಷದ ಸೈದ್ಧಾಂತಿಕ ವಿಷಯಗಳ ಬಗ್ಗೆ ಮತ್ತು ಗೌರಿಬಿದನೂರು ತಾಲ್ಲೂಕು ಪಕ್ಷವನ್ನು ಬಲಿಷ್ಠವಾಗಿ ಕಟ್ಟುವುದು ಹೇಗೆಂದು ವಿವರವಾಗಿ ತರಬೇತಿಯಲ್ಲಿ ತಿಳಿಸಿದರು. ತರಬೇತಿ ಶಿಬಿರದಲ್ಲಿ ಸುಮಾರು 200 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದರು. ತರಬೇತಿ ಶಿಬಿರ ಬೆಳಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಡೆಯಿತು. ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ಕೋಲಾರ ಜಿಲ್ಲಾ ಸಮಿತಿ ಸದಸ್ಯ ಕಾಂ. ವಿ.ಶ್ರೀನಿವಾಸಕರ್ಣ ಮೊದಲಿಗೆ ಸ್ವಾಗತ ಕೋರಿದರು. ಜಿಲ್ಲಾ ಸಮಿತಿ ಸದಸ್ಯ ಸಿದ್ದಗಂಗಪ್ಪ ವಂದನೆಗಳನ್ನು ಹೇಳಿದರು.

ಬಂಟ್ವಾಳ: ಕಾಂ. ಇಎಂಎಸ್‌ರ ನಿಧನ ವಾರ್ತೆ ತಿಳಿದ ಬಂಟ್ವಾಳದಲ್ಲಿ ಅತೀವ ಶೋಕ ವ್ಯಕ್ತಪಡಿಸಲಾಯಿತು.

ಕೆಂಬಾವುಟವನ್ನು ಅರ್ಧಕ್ಕೆ ಇಳಿಸಲಾಯಿತು. ನೂರಾರು ಮಂದಿ ಸಿಪಿಐ(ಎಂ) ಸದಸ್ಯರೂ, ಹಿತೈಷಿಗಳೂ ಕಪ್ಪು ಬ್ಯಾಡ್ಜ್ ಧರಿಸಿ ಕಾಮ್ರೇಡ್ ಇಎಂಎಸ್‌ರ ಭಾವಚಿತ್ರಕ್ಕೆ ಹೂಹಾರ ಹಾಕಿ ಅರ್ಧಕ್ಕೆ ಕಟ್ಟಿದ ಕೆಂಬಾವುಟ ಹಿಡಿದು ಬಂಟ್ವಾಳ ಬಡ್ಡಕಟ್ಟೆಯಿಂದ ಮಹಾಲಿಂಗೇಶ್ವರ ದೇವಸ್ಥಾನದವರೆಗೆ ಮೌನ ಮೆರವಣಿಗೆ ನಡೆಸಿದರು.

ನಂತರ ನಡೆದ ಶೋಕಸಭೆಯಲ್ಲಿ ಕಾಂ. ಬಿ.ವಾಸುಗಟ್ಟಿ, ಬಿ.ನಾರಾಯಣ ಬಿ.ಹೂವಯ್ಯ ಬಂಗೇರರು ಮಾತನಾಡಿದರು.

ಭಟ್ಕಳ: ಮಾವಿನ ಕುರ್ವೆ ಹಂಚಿನ ಕಾರ್ಖಾನೆ ಕಾರ್ಮಿಕರು ತುರ್ತಾಗಿ ಸಭೆ ಸೇರಿ ಸಂತಾಪ ಸೂಚನೆ ಸಭೆ ನಡೆಸಿದರು. ಹಂಚಿನ ಕಾರ್ಖಾನೆ ಕಾರ್ಮಿಕ ಧುರೀಣ ತಿಲಕಗೌಡ ಮತ್ತು ಸಿಪಿಐ(ಎಂ) ಭಟ್ಕಳ ತಾಲೂಕಾ ಮುಖಂಡರಾದ ಕಾಂ|| ಸುಭಾಸ ಕೊಪ್ಪಿಕರ ಇಎಂಎಸ್‌ರ ಕಾರ್ಯಸಾಧನೆ ಕುರಿತು ಮಾತನಾಡಿದರು.

ಹೊನ್ನಾವರ ಪಕ್ಷದ ಕಛೇರಿಯಲ್ಲಿ ಸಂಜೆ ಸಭೆ ಸೇರಿ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

12ನೇ ಲೋಕಸಭಾಧ್ಯಕ್ಷರ ಚುನಾವಣೆ ಬಿಜೆಪಿಯ 'ಸರ್ವಸಮ್ಮತಿ'ಯ ಮಾತು ಎಂತಹ ಢೋಂಗಿತನದ್ದೆಂದು ಆರಂಭದಲ್ಲೇ ಸಾಬೀತು ಮಾಡಿದ್ದಲ್ಲದೆ ನಾಯ್ಡುರಂತವರ 'ಸಮಾನ ದೂರ'ದ ಮಾತು ಕೂಡಾ ಅಷ್ಟೇ ಮೋಸದ್ದು ಎಂದು ತೋರಿಸಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಭಾರತದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಒಂದು ವಿಶ್ಲೇಷಣೆ - ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್‌ರವರಿಂದ.

- ಹರ್ಕಿಶನ್‌ಸಿಂಗ್ ಸುರ್ಜಿತ್

ಸ್ಪೀಕರ್ ಚುನಾವಣೆ ಮತ್ತು ಸಂಯುಕ್ತ ರಂಗ

ಈ ಚುನಾವಣೆಗಳಲ್ಲಿ ಬಿಜೆಪಿಗೆ ದೊರೆತದ್ದು 25% ಮತ, ಅವರ ಚುನಾವಣಾ ಮೈತ್ರಿ ಕೂಟಕ್ಕೆ ಒಟ್ಟಾಗಿ ಸಿಕ್ಕಿದ್ದು 37% ಅಂದರೆ 63% ಅವರ ವಿರುದ್ಧ ಮತ ನೀಡಿದರು. ಸೀಟುಗಳ ಲೆಕ್ಕದಲ್ಲೂ ವಾಜಪೇಯಿಯವರು ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದು 240 ಹೆಸರುಗಳು. ಅಂದರೆ ಪೂರ್ಣ ಬಹುಮತಕ್ಕೆ 30 ಸೀಟುಗಳು ಕಮ್ಮಿ. ಜಯಲಲಿತಾರವರು ಬಿಜೆಪಿಯ ಬಗ್ಗೆ ಕಟುಟೀಕೆ ಮಾಡಿದ ಮೇಲೂ ಅವರನ್ನು ಹಾಗೂ ಅವರ ಮಿತ್ರರನ್ನು ತಮ್ಮ ಕಡೆ ಮಾಡಿಕೊಂಡ ಮೇಲೂ ಸೀಟುಗಳ ಸಂಖ್ಯೆ 264 ತಲುಪಿತಷ್ಟೆ. ಆದರೂ ಕೊನೆಗೂ ರಾಷ್ಟ್ರಪತಿಗಳು ವಾಜಪೇಯಿಯವರನ್ನು ಸರಕಾರ ರಚಿಸಲು ಆಹ್ವಾನಿಸಿದ್ದು ತನ್ನ ಪಕ್ಷ ತಟಸ್ಥವಾಗಿರುತ್ತದೆ ಎಂದು ತೆಲುಗುದೇಶಂನ ಅಧ್ಯಕ್ಷ ಚಂದ್ರಬಾಬು ನಾಯ್ಡು ತಿಳಿಸಿದ ಮೇಲೆಯೇ.

ಶ್ರೀಯುತ ನಾಯ್ಡುರವರು ಏನೇ ಸಬೂಬು ಕೊಡಬಹುದು. ಅದು ಬಿಜೆಪಿಯೊಂದಿಗೆ ಅವರ ಸಂಬಂಧಗಳ ಆರಂಭವಾಗಿತ್ತಷ್ಟೇ. ಅವರು ಬಿಜೆಪಿ ಮತ್ತು ಕಾಂಗ್ರೆಸ್ಸಿನಿಂದ ಸಮಾನ ದೂರ ಇರುತ್ತೇವೆ ಎಂದರು. ಈ ಸಮಾನ ದೂರ ಎಂದರೆ ಏನು ಎಂದು ಆಮೇಲಿನ ಘಟನೆಗಳಿಂದ ಸ್ಪಷ್ಟವಾಯಿತು. ಅವರು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ರಚನೆಯಾಗುವುದರಲ್ಲಿ ಭಾಗಿಯಾದರು. *(ಸುರ್ಜಿತ್‌ರವರು ಈ ಲೇಖನ ಬರೆದ ಮೇಲೆ ಆ ಸರಕಾರವನ್ನು ಉಳಿಸುವುದರಲ್ಲಿಯೂ ಭಾಗಿಯಾದರು-ಅನು)* ಇದು ಅವರೇ ಸಂಯೋಜಕರಾಗಿರುವ ಸಂಯುಕ್ತ ರಂಗದ ನೀತಿಗಳಿಗೆ ಸಂಪೂರ್ಣ ವಿರುದ್ಧವಾದದ್ದು.

ಎಲ್ಲರಿಗೂ ತಿಳಿದಿರುವಂತೆ 1996 ರಲ್ಲಿ ಸಂಯುಕ್ತ ರಂಗವನ್ನು ರಚಿಸಿದ್ದು ಬಿಜೆಪಿ ಅಧಿಕಾರಕ್ಕೆ ಬರುವ ಅಪಾಯವನ್ನು ತಪ್ಪಿಸಲು. ಚುನಾವಣಾ ಪೂರ್ವ ಮೈತ್ರಿಗಳಿಲ್ಲದ ಹಲವು ಪಕ್ಷಗಳು ಬಿಜೆಪಿಯನ್ನು ದೂರವಿಡಲು ಚುನಾವಣಾ ನಂತರದ ಮೈತ್ರಿ ಮಾಡಿಕೊಂಡವು.

1998 ರ ಚುನಾವಣೆಗಳ ನಂತರ ಈ ಅಪಾಯ ಇನ್ನಷ್ಟು ಹೆಚ್ಚಿತು, ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ ಅಗತ್ಯ ಇನ್ನೂ ಹೆಚ್ಚಿತು. ಈ ಹಂತದಲ್ಲೇ ತೆಲುಗುದೇಶಂ ಪಕ್ಷ ಬಿಜೆಪಿಯೊಂದಿಗೆ ಹೋಗಲು ನಿರ್ಧರಿಸಿತು.

ಮಾರ್ಚ್ 6ರ ಸಭೆಯಲ್ಲಿ ಸಂಯುಕ್ತ ರಂಗದ ಎಲ್ಲಾ ಅಂಗಪಕ್ಷಗಳು ತೆಲುಗುದೇಶಂನ ಈ ನಿಲುವಿನ ವಿರುದ್ಧ ಒಂದು ಸಮಾನ ನಿಲುವು ತಳೆದವು. ಮಾರ್ಚ್ 10 ರ ಸಭೆಯಲ್ಲೂ ಹೀಗೆ ಆಯಿತು. ಒಂದು ವಿಶ್ವಾಸ ಠರಾವಿನ ಸಂದರ್ಭದಲ್ಲಿ ಸಾಮಾನ್ಯವಾಗಿ ಪ್ರತಿಪಕ್ಷಗಳು ಅದರ ವಿರುದ್ಧ ಮತ ನೀಡುತ್ತವೆಎಂದು ಚಂದ್ರಬಾಬು ನಾಯ್ಡುರವರಿಗೆ ಹೇಳಲಾಯಿತು. ಅದು ನಾಯ್ಡುರವರಿಗೆ ಕಸಿವಿಸಿಯುಂಟು ಮಾಡಿತು.



ಏಷ್ಯನ್ ಏಜ್ ಪತ್ರಿಕೆಯಲ್ಲಿ ಮಾಯಾ ಕಾಮತ್ ಅವರ ವ್ಯಂಗ್ಯ

ಐಕ್ಯತೆಗಾಗಿ ತಲೆಬಾಗಿದೆವು

ಸಂಯುಕ್ತ ರಂಗ ಮೊದಲ ಜಂಟಿ ಚುನಾವಣಾ ಸಭೆ ನಡೆದದ್ದು ಹೈದರಾಬಾದಿನಲ್ಲಿ. ಈ ಸಭೆಯಲ್ಲಿ ಕೋಮುವಾದಿ ಅಪಾಯ ಹಾಗೂ ಕಾಂಗ್ರೆಸ್ ಪಕ್ಷ ಎರಡರ ವಿರುದ್ಧವೂ ಘೋಷಣೆಗಳನ್ನು ಎತ್ತಲಾಯಿತು. ಸಂಯುಕ್ತ ರಂಗ ಹಲವು ರಾಜ್ಯಗಳಲ್ಲಿ ನೇರವಾಗಿ ಕಾಂಗ್ರೆಸ್‌ನ್ನೇ ಎದುರಿಸುತ್ತಿತ್ತು. ಆದ್ದರಿಂದ ಸಂಯುಕ್ತ ರಂಗ ಮೂರನೇ ಪರ್ಯಾಯವನ್ನು ಮುಂದಿಡಲು ಪ್ರಯತ್ನಿಸುತ್ತಿತ್ತು.

ಸಂಯುಕ್ತ ರಂಗ ಒಂದು ಸಂಪೂರ್ಣ ಸಮರೂಪದ ಘಟಕ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅದರಲ್ಲಿರುವ ಎಡಪಕ್ಷಗಳು, ಪ್ರಾದೇಶಿಕ ಪಕ್ಷಗಳು ಹಾಗೂ ರಾಷ್ಟ್ರೀಯ ಪಕ್ಷಗಳು ಹಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿವೆ. ವಿಶೇಷವಾಗಿ ಆರ್ಥಿಕ ನೀತಿಗಳ ಬಗ್ಗೆ ಎಡಪಕ್ಷಗಳಿಗೆ ಭಿನ್ನಾಭಿಪ್ರಾಯವಿದೆ ಎಂದು ನಾಯ್ಡುರವರಿಗೆ ತಿಳಿದಿದೆ. ಆದರೆ ದೇಶ ಎದುರಿಸುತ್ತಿದ್ದ ನಿರ್ದಿಷ್ಟ ಸನ್ನಿವೇಶದಲ್ಲಿ ನಮ್ಮ ವಿಚಾರಗಳನ್ನು ನಾವು ಹೇರಲಿಲ್ಲ-ರಂಗದ ಐಕ್ಯತೆಗಾಗಿ ಹೀಗೆ ಮಾಡಿದೆವು.

ಮಾರ್ಚ್ 1997 ರಲ್ಲಿ ಕಾಂಗ್ರೆಸ್ ಬೆಂಬಲವನ್ನು ಹಿಂತೆಗೆದುಕೊಂಡು ಸಂಯುಕ್ತ ರಂಗ ಒಂದು ಬಿಕ್ಕಟ್ಟು ಎದುರಿಸಿದಾಗ ಕಾಂಗ್ರೆಸ್(ಐ)ನ ಒತ್ತಡ ತಂತ್ರಗಳಿಗೆ ತಲೆಬಾಗಬಾರದು, ದೇವೇಗೌಡರನ್ನು ತೆಗೆಯಲು ಒಪ್ಪಬಾರದು ಎಂದು ಎಡಪಕ್ಷಗಳು ಆಗ್ರಹ ಪಡಿಸಿದ್ದವು. ಶ್ರೀಯುತ ನಾಯ್ಡುರವರೂ ಆರಂಭದಲ್ಲಿ ಇದೇ ಅಭಿಪ್ರಾಯ ಹೊಂದಿದ್ದರು. ಆದರೆ ನಂತರ ಮನಸ್ಸು ಬದಲಿಸಿ ಅವರೂ ಹೊಸ ಚುನಾವಣೆಗಳಿಗೆ ಹೋಗುವುದು ಬೇಡ ಎಂದು ಅಭಿಪ್ರಾಯ ಪಟ್ಟರು. ಎಡಪಕ್ಷಗಳಿಗೆ ಇದು ಸಂಪೂರ್ಣವಾಗಿ ಒಪ್ಪಿಗೆಯಿಲ್ಲದಿದ್ದರೂ ಬಹುಮತಕ್ಕೆ ತಲೆಬಾಗಿದೆವು. ಏಕೆಂದರೆ ರಂಗದ ಐಕ್ಯತೆ ನಮಗೆ ಮುಖ್ಯವಾಗಿತ್ತು.

ಜೈನ್ ಆಯೋಗದ ಪ್ರಶ್ನೆಯ ಮೇಲೆ ಹೊಸದೊಂದು ಬಿಕ್ಕಟ್ಟು ಬಂದಾಗಲೂ ಸಂಯುಕ್ತ ರಂಗ ತನ್ನ ಒಗ್ಗಟ್ಟನ್ನು ಕಾಪಾಡಿಕೊಂಡಿತು.

ಈ ಹಿನ್ನೆಲೆಯಲ್ಲಿ ಸಂಯುಕ್ತ ರಂಗವನ್ನು ಬಿಡುವ ತೆಲುಗುದೇಶಂ ನಿರ್ಣಯ ಅದು ಈ ರಂಗದ ರಚನೆಯಲ್ಲಿ ವಹಿಸಿದ ಪಾತ್ರಕ್ಕೆ ಅನುಗುಣವಾಗಿಲ್ಲ. ಇದು ಕೇವಲ ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿದಲೆಕ್ಕಾಚಾರದಿಂದಷ್ಟೇ ಕೈಗೊಂಡ ನಿರ್ಣಯ.

ಸ್ಪೀಕರ್ ಆಯ್ಕೆಯ ಪ್ರಶ್ನೆ

ಕಳೆದ ಬಾರಿ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಒಟ್ಟಾಗಿ ಅಭ್ಯರ್ಥಿಯನ್ನು ನಿಲ್ಲಿಸಿದ್ದವು. ಬಿಜೆಪಿ ಅದನ್ನು ಒಪ್ಪಲೇಬೇಕಾಯಿತು ಎಂಬುದು ನಾಯ್ಡುರವರಿಗೆ ನೆನಪಿರಬಹುದು. ಪಿ.ಎ.ಸಂಗ್ಮಾರವರು ಸರ್ವಸಮ್ಮತಿಯ ಅಭ್ಯರ್ಥಿಯಾದದ್ದು ಹಾಗೆ. ಈ ಬಾರಿಯ ಸನ್ನಿವೇಶದಲ್ಲಿ ಸಂಗ್ಮಾರವರನ್ನು ಸರ್ವಸಮ್ಮತಿ ಅಭ್ಯರ್ಥಿಯಾಗಿ ಮಾಡುವುದು ಸಾಧ್ಯವಿದ್ದಂತೆ ಕಂಡಿತು. ಈಗಿನ ಲೋಕಸಭೆಯಲ್ಲಿ ಸುಮಾರು 40 ಪಕ್ಷಗಳಿರುವುದನ್ನು ನೋಡಿದರೆ ನಿಷ್ಪಕ್ಷಪಾತದಿಂದ ಸದನದ ಕಲಾಪ ನಡೆಸುವುದು ಕಷ್ಟಕರ ಕೆಲಸ. ಅಲ್ಲದೆ ಉತ್ತರ ಪ್ರದೇಶದಲ್ಲಿ ಸ್ಪೀಕರ್ ಕೇಸರಿನಾಥ್ ತ್ರಿಪಾಠಿಯವರ ಪಕ್ಷಪಾತಪೂರ್ಣ ಪಾತ್ರವನ್ನು ನೋಡಿದ ಮೇಲೆ ಯಾವುದೇ ಬಿಜೆಪಿ ಅಭ್ಯರ್ಥಿಯನ್ನು ಒಪ್ಪುವುದು ಅಸಾಧ್ಯವಾಗಿತ್ತು. ತ್ರಿಪಾಠಿಯವರು 5 ತಿಂಗಳು ಕಾಲ ಕಾದ ನಂತರ ಪಕ್ಷದ ವಿಪ್‌ನ್ನು ಉಲ್ಲಂಘಿಸಿದ 12 ಬಿಎಸ್‌ಪಿ ಶಾಸಕರ ಬಗ್ಗೆ ತೀರ್ಪು ಕೊಟ್ಟರು. ಹಾಗೆ ವಿಳಂಬ ಮಾಡಿ ತೀರ್ಪು ಕೊಡುವಾಗಲೂ ಕ್ರಮ-ನಿಯಮಗಳಿಗೆ ಅವರು ಎಳ್ಳಷ್ಟು ಮರ್ಯಾದೆ ನೀಡಲಿಲ್ಲ. ಬಿಎಸ್‌ಪಿಯ ಸಂವಿಧಾನದಲ್ಲಿ ತನ್ನ ಚುನಾಯಿತ ಸದಸ್ಯರಿಗೆ ವ್ಹಿಪ್ ನೀಡುವ ವ್ಯವಸ್ಥೆಯಿಲ್ಲವಾದ್ದರಿಂದ ಅದು ಅನೂರ್ಜಿತ, ಆದ್ದರಿಂದ ಬಿಎಸ್‌ಪಿ ಶಾಸಕರ ಪಕ್ಷಾಂತರ ಪ್ರಶ್ನೆಯೇ ಇಲ್ಲ! - ಇದು ಅವರ ತರ್ಕ. ಬಿಜೆಪಿಯೂ ಸೇರಿದಂತೆ ಎಷ್ಟು ಪಕ್ಷಗಳ ಸಂವಿಧಾನದಲ್ಲಿ ಈ ಅಂಶ ಇದೆಯೋ ಅವರಿಗೇ ಗೊತ್ತು.

ಇರಲಿ! ಈ ಐದು ತಿಂಗಳ ಕಾಲ ಕಲ್ಯಾಣ್ ಸಿಂಗ್ ಇನ್ನಷ್ಟು ಬಿಎಸ್‌ಪಿ ಶಾಸಕರನ್ನು ಸೆಳೆದು ಒಟ್ಟು ಸಂಖ್ಯೆ ಮೂರನೇ ಒಂದಕ್ಕಿಂತ ಹೆಚ್ಚಾಗಿ ಪಕ್ಷಾಂತರ-ನಿಷೇಧ ಕಾನೂನಿನ ಅಂಶದಿಂದ ತಪ್ಪಿಸಿಕೊಳ್ಳಲು ಸಾಧ್ಯವೋ ಎಂದು ಈ ಸ್ಪೀಕರ್ ಕಾದಿದ್ದರು. ಉತ್ತರ ಪ್ರದೇಶದ ಈ ಅನುಭವದ ಹಿನ್ನೆಲೆಯಲ್ಲಿ 12ನೇ ಲೋಕಸಭೆಯಂತಹ ಸದನದಲ್ಲಿ ಸ್ಪೀಕರ್‌ನ ಸ್ಥಾನ ನಿರ್ಣಾಯಕ.

ಚಂದ್ರಬಾಬು ನಾಯ್ಡುರವರು ಬೇರೆ ಯಾವುದಾದರೂ ಹೆಸರು ಸೂಚಿಸಿದ್ದರೆ ಅದನ್ನು ಪರಿಶೀಲಿಸಲು ಸಂಯುಕ್ತ ರಂಗ ಘಟಕಗಳು ಸಿದ್ಧವಿದ್ದವು. ಅಂತಹ ಅಭ್ಯರ್ಥಿ ಗೆಲ್ಲುವಂತೆ ಸಂಯುಕ್ತ ರಂಗ ಮಾಡಬಹುದಿತ್ತು. ಆದರೆ ಆರಂಭದಿಂದಲೇ ನಾಯ್ಡು ತನ್ನ ವಾದಕ್ಕೆ ಅಂಟಿಕೊಂಡು ಒಂದಿಂಚೂ ಕದಲಲು ಸಿದ್ಧರಿರಲಿಲ್ಲ. ಅವರು ಆ ಬಗ್ಗೆ ಆಗಲೇ ನಿರ್ಣಯಕ್ಕೆ ಬಂದಿದ್ದರು ಎಂಬುದು ಸ್ಪೀಕರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆಯ ಎರಡು ಗಂಟೆಗಳ ಮೊದಲು ಬಯಲಿಗೆ ಬಂತು.

ಬಿಜೆಪಿಯ ಮೋಸ

'ಸರ್ವಸಮ್ಮತಿ' ಬಿಜೆಪಿಗೆ ಕೇವಲ ಬಾಯುಪಚಾರದ ಮಾತು ಎಂದು ಸ್ಪೀಕರ್ ಪ್ರಶ್ನೆಯಲ್ಲಿ ಸಂಪೂರ್ಣ ಬಯಲಾಗಿದೆ. ಮೊದಲು ಸ್ಪೀಕರ್ ಆಳುವ ಕೂಟದಿಂದಲೇ ಇರಬೇಕು ಎಂದು ಹೇಳುತ್ತಿದವರು ನಂತರ ಸಂಗ್ಮಾರನ್ನು ಸರ್ವಸಮ್ಮತ ಅಭ್ಯರ್ಥಿಯಾಗಿ ಒಪ್ಪುವ ಹಾಗೆ ಕಾಣುತ್ತಿತ್ತು. ಸಂಗ್ಮಾರವರಿಗೂ 'ನೀವು ನಮಗೆ ಒಪ್ಪಿಗೆ' ಎಂಬಂತಹ ಅರ್ಥ ಬರುವಂತೆ ಅವರು ಹೇಳಿದ್ದರು. ಚಂದ್ರಬಾಬು ರವರೂ ಕೂಡಾ ತಟಸ್ಥನಾಗಿರುತ್ತೇನೆ ಎಂದು ಪುನರುಚ್ಚರಿಸುತ್ತಲೇ, ಸರ್ವಸಮ್ಮತಿ ಬಂದರೆ ಕಾಂಗ್ರೆಸ್ಸಿಗನನ್ನು ಒಪ್ಪಲೂ ತಾನು ಸಿದ್ಧ ಎಂಬ ಇಂಗಿತ ವ್ಯಕ್ತಪಡಿಸಿದ್ದರು.

ಕೊನೆಗೆ, ತನಗೆ ಬಹುಮತ ಗಳಿಸಲು ಸಾಧ್ಯವಿಲ್ಲ ಎಂದು ಬಿಜೆಪಿಗೆ ಸ್ಪಷ್ಟವಾದಾಗ ತೆಲುಗುದೇಶಂ ಪಕ್ಷದೊಂದಿಗೆ ಅದು ಒಂದು ವ್ಯವಹಾರ ಕುದುರಿಸಿತು. 'ಸರ್ವಸಮ್ಮತ ಅಭ್ಯರ್ಥಿ'ಯ ಬಗ್ಗೆ ಪ್ರಕಟಣೆ ಹೊರಡಿಸಿದ ಮೇಲೂ ಯಾರು ಆ ಅಭ್ಯರ್ಥಿ ಎಂದು ಶ್ರೀಯುತ ಅಡ್ವಾಣಿಯವರಿಗೂ ಗೊತ್ತಿದ್ದಂತಿರಲಿಲ್ಲ. ಸಂಯುಕ್ತ ರಂಗ-ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವ ಯಾವುದೇ ಅಭ್ಯರ್ಥಿ ಅವರಿಗೆ ಒಪ್ಪಿಗೆ ಯಾಗಿತ್ತು. ಬಾಲಯೋಗಿಯವರೊಂದಿಗೆ 12 ಅಮೂಲ್ಯ ಮತಗಳು ಬರುತ್ತವೆ, ತಮ್ಮ ಅಲ್ಪಮತವನ್ನು ಬಹುಮತಕ್ಕೆ ಬದಲಿಸಿಕೊಳ್ಳಬಹುದು ಎಂಬುದಷ್ಟೇ ಅವರ ಲೆಕ್ಕಾಚಾರ. ತನ್ನ ಚೌಕಾಶಿ ಸ್ಥಾನವನ್ನು ತೆಲುಗುದೇಶಂ ತನಗಾಗಿ ಮಾತ್ರವಲ್ಲ, ಬಿಜೆಪಿಯನ್ನು ಉಳಿಸಲಿಕ್ಕಾಗಿಯೂ ಬಳಿಸಿತು.

> ಬಾಲಯೋಗಿಯವರೊಂದಿಗೆ ೧೨ ಅಮೂಲ್ಯ ಮತಗಳು ಬರುತ್ತವೆ, ತಮ್ಮ ಅಲ್ಪಮತವನ್ನು ಬಹುಮತಕ್ಕೆ ಬದಲಿಸಿಕೊಳ್ಳಬಹುದು ಎಂಬುದಷ್ಟೇ ಬಿಜೆಪಿ ಲೆಕ್ಕಾಚಾರ. ತನ್ನ ಚೌಕಾಶಿ ಸ್ಥಾನವನ್ನು ತೆಲುಗುದೇಶಂ ತನಗಾಗಿ ಮಾತ್ರವಲ್ಲ, ಬಿಜೆಪಿಯನ್ನು ಉಳಿಸಲಿಕ್ಕಾಗಿಯೂ ಬಳಿಸಿತು.

ಸಂಯುಕ್ತ ರಂಗವನ್ನು ಒಡೆಯಲು ಭಾರೀ ಪ್ರಯತ್ನ ಮಾಡುತ್ತಿದ್ದ ಬಿಜೆಪಿ ಇಷ್ಟರ ಮಟ್ಟಿಗೆ ಯಶಸ್ಸು ಪಡೆಯುವಂತಾದ್ದು ದುರಾದೃಷ್ಟಕರ. ಆಗಲೂ ನಾಯ್ಡುರವರು ವಿಶ್ವಾಸಮತ ಕುರಿತಂತೆ ತಾವು ತಟಸ್ಥರಾಗಿರುವುದಾಗಿ ಹೇಳಿದ್ದರು. ಆದರೆ ಅವರು ಹಿಡಿದ ದಾರಿ ಅವರನ್ನು ಬಿಜೆಪಿಯ ಮಡಿಲಿಗೇ ಒಯ್ಯುತ್ತದೆ ಎಂಬುದು ಸ್ಪಷ್ಟ - ನೇರವಾಗಿಯೋ, ಪರೋಕ್ಷವಾಗಿಯೊ ಎಂಬುದು ಬೇರೆ ಮಾತು. *(ಮಾರ್ಚ್ 28 ರಂದು ಇದು ನಿಜವಾಯಿತು-ಅನು)* ಟಿಡಿಪಿ ತಮ್ಮ ಮಂತ್ರಿಮಂಡಳವನ್ನು ಸೇರಬಹುದೆಂದು ಅಡ್ವಾಣಿ ಆಗಲೇ ಹೇಳಿದ್ದಾರೆ.

ಚಂದ್ರಬಾಬು ನಾಯ್ಡುರವರು ತಮ್ಮನ್ನು ಸಂಯುಕ್ತ ರಂಗವನ್ನು ಅಸ್ತವ್ಯಸ್ತಗೊಳಿಸುವ ಅಸ್ತ್ರವನ್ನಾಗಿ ಮಾರ್ಪಡಿಸಲು ತಾವೇ ಅವಕಾಶ ಕಲ್ಪಿಸಿಕೊಟ್ಟರು. ರಂಗ ಬಿಡುತ್ತಿರುವುದು ತಾನು ಮಾತ್ರವೇ ಅಲ್ಲ ಎಂದು ನಂಬಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ತಾನೆ ಮುಂದೆ ನಿಂತು ನೇರವಾಗಿ ರಚಿಸಿದ ರಂಗವನ್ನು ಬಿಡುವಂತೆ ನ್ಯಾಶನಲ್ ಕಾನ್ಫರೆನ್ಸ್ ಮತ್ತು ಎಜಿಪಿ ಮೇಲೆ ಪ್ರಭಾವ ಬೀರಲು, ಹೊಸದೊಂದು ರಂಗವನ್ನು ರಚಿಸಲು ಅವರು ಪ್ರಯತ್ನಿಸಿದ್ದಾರೆ. ಈ ರಂಗ ಬಿಜೆಪಿ ನೇತೃತ್ವದ ಸರಕಾರಕ್ಕೆ ಪ್ರಶ್ನೆ ಆಧಾರಿತ ಬೆಂಬಲ ನೀಡುತ್ತದಂತೆ. ಅವರ ಅಂದಾಜೇನೆಂದರೆ ಈ ಹೊಸ ರಂಗ ಬಿಜೆಪಿಗೆ ನೆರವಾಗುವ ತನ್ನ ಪ್ರಯತ್ನಗಳನ್ನು ಮರೆಮಾಚುವ ಒಂದು ಸಾಧನವಾಗಬಹುದೆಂದು. ಫರೂಕ್ ಅಬ್ದುಲ್ಲಾರ ಮಗನಿಗೆ ಕೇಂದ್ರ ಮಂತ್ರಿಮಂಡಲದಲ್ಲಿ ಒಂದು ಸಚಿವಸ್ಥಾನ ನೀಡಲಾಗುವುದು ಎಂಬ ವದಂತಿಯಿದೆ.

ನ್ಯಾಷನಲ್ ಕಾನ್ಫರೆನ್ಸ್ ಬೆಂಬಲ ಹೇಗೆ ಸಾಧ್ಯ

ನ್ಯಾಶನಲ್ ಕಾನ್ಫರೆನ್ಸ್ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರಕಾರವನ್ನು ಸೇರುವುದು ಜಮ್ಮು-ಕಾಶ್ಮೀರದ ರಾಜಕೀಯ ಸನ್ನಿವೇಶದ ಮೇಲೆ ಏನು ಪರಿಣಾಮ ಬೀರಬಲ್ಲದು ಎಂಬುದನ್ನು ಅವರು ಪರಿಗಣಿಸಿದಂತಿಲ್ಲ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ನಿರಂತರವಾಗಿ ಉಗ್ರಗಾಮಿಗಳ ವಿರುದ್ಧ ಹೋರಾಟದಲ್ಲಿ, ಕಾಶ್ಮೀರದ ಜನಗಳ ವಿಶಿಷ್ಟ ಸ್ವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ, 370 ನೇ ಕಲಮನ್ನು ಉಳಿಸಿಕೊಳ್ಳುವಲ್ಲಿ, ರಾಜ್ಯಕ್ಕೆ ಸಾಧ್ಯವಾದಷ್ಟು ಹೆಚ್ಚು ಸ್ವಾಯತ್ತತೆ ಪಡೆಯುವಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ಗೆ ಬೆಂಬಲ ನೀಡುತ್ತಾ ಬಂದಿವೆ, ಆ ಪಕ್ಷದ ಮಹತ್ವದ ಪಾತ್ರವನ್ನು ಎತ್ತಿ ಹಿಡಿಯುತ್ತಾ ಬಂದಿವೆ. 370ನೇ ಕಲಮನ್ನು ರದ್ದುಗೊಳಿಸಬೇಕೆನ್ನುವ, ರಾಜ್ಯಗಳಿಗೆ ಗರಿಷ್ಠ ಸ್ವಾಯತತ್ತೆ ನೀಡುವುದನ್ನು ವಿರೋಧಿಸುವ ಒಂದು ಪಕ್ಷದೊಂದಿಗೆ ನಾಶನಲ್ ಕಾನ್ಫರೆನ್ಸ್ ಹೇಗೆ ತಾನೇ ಸೇರಿಕೊಳ್ಳಲು ಸಾಧ್ಯ? ಬಿಜೆಪಿ ಕಡೆಗೆ ವಾಲಿದರೆ ನ್ಯಾಶನಲ್ ಕಾನ್ಫರೆನ್ಸ್ ಕಾಶ್ಮೀರಿ ಜನಗಳಿಂದ ಮಾತ್ರವಲ್ಲ, ದೇಶದ ಇತರರಿಂದಲೂ ದೂರವಾಗುತ್ತದೆ.

'ಮುಸ್ಲಿಂ ಕಾನ್ಫರೆನ್ಸ್' ಪಕ್ಷವನ್ನು 'ನ್ಯಾಶನಲ್ ಕಾನ್ಫರೆನ್ಸ್' ಎಂದು ಪರಿವರ್ತಿಸಿದ ಮೇಲೆ ಆ ಪಕ್ಷ ಕಾಶ್ಮೀರ ಕಣಿವೆಯಲ್ಲಿ ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿ ದೇಶದಲ್ಲಿನ ಪ್ರಜಾಪ್ರಭುತ್ವ ಆಂದೋಲನವನ್ನು ಬಲಪಡಿಸಿದೆ. ಇದರಲ್ಲಿ ಈ ಪಕ್ಷಕ್ಕೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಜನಾಭಿಪ್ರಾಯದ ಬೆಂಬಲ ಸದಾ ದೊರಕಿದೆ. ಬಹುಶಃ ಈಗ ಫಾರೂಕ್ ಅಬ್ದುಲ್ಲಾರಿಗೆ ದೊಡ್ಡ ಬಂಡವಾಳಿಗರ ಮಾಧ್ಯಮದಿಂದ ದೊಡ್ಡ ಪ್ರಚಾರ ಸಿಗಬಹುದು. ಆದರೆ ನಾಯ್ಡುರವರು ಪುಸಲಾಯಿಸಿದ್ದಕ್ಕೆ ಒಪ್ಪಿದ್ದು ಸರಿಯೋ ತಪ್ಪೋ ಎಂದು ಪರೀಕ್ಷೆಯ ಸಮಯ ಬಂದಾಗಲಷ್ಟೇ ತಿಳಿ ಯುತ್ತದೆ. ಫಾರೂಕ್ ಅಬ್ದುಲ್ಲಾರು ತಮಗೆ ತೋಚಿದಂತೆ ಕೈಗೊಂಡ ನಿರ್ಧಾರದಿಂದ ಅವರ ಪಕ್ಷದ ಸಹಯೋಗಿ ಗಳಿಗೆ ಸಿಟ್ಟು ಬಂದಿದೆ. ಪಕ್ಷದ ಹಿರಿಯ ಮುಖಂಡ ಸೈಫುದ್ದೀನ್ ಸೋಝ್ ಈ ಪ್ರಕಟಣೆಯನ್ನು ಟೀಕಿಸಿದ್ದಾರೆ. *(ವಿಶ್ವಾಸ ಠರಾವಿನಲ್ಲಿ ತಟಸ್ಥವಾಗಿರುವುದಾಗಿ ಹೇಳಿ ನಂತರ ಬಿಜೆಪಿ ಪರ ಮತ ಚಲಾಯಿಸಿ ತಮಗೆ ಮೋಸ ಮಾಡಿದ್ದಾರೆ ಎಂದು ಈಗಾಗಲೇ ನ್ಯಾಶನಲ್ ಕಾನ್ಫರೆನ್ಸ್ ಎಂ.ಪಿ.ಯೊಬ್ಬರು ಖೇದ ವ್ಯಕ್ತಪಡಿಸಿದ್ದಾರೆ - ಅನು)*

ಅದೇ ರೀತಿ ಎಜಿಪಿ ಬಿಜೆಪಿ ಸರ್ಕಾರಕ್ಕೆ 'ಪ್ರಶ್ನೆ-ಆಧಾರಿತ ಬೆಂಬಲ' ಕೊಡುವಂತೆ ಮಾಡಲು ತೆಲುಗುದೇಶಂ ಪ್ರಯತ್ನಿಸುತ್ತಿದೆ. ತನ್ನ ಅಲ್ಪ-ಸಂಖ್ಯಾತ-ವಿರೋಧಿ ನಿಲುವನ್ನು ಬಿಟ್ಟುಕೊಟ್ಟು ಎಜಿಪಿ ಅಸ್ಸಾಂನಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳೊಂದಿಗೆ ಸೇರಿಕೊಂಡಿತ್ತು. ಇದರಿಂದಲೇ ಅದು ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ಪಡೆಯಲು ಸಾಧ್ಯವಾಗಿತ್ತು. ಈಗ ಅದು ಬಿಜೆಪಿಯೊಂದಿಗೆ ಹೋಗುವುದಾದರೆ ಅಲ್ಪಸಂಖ್ಯಾತರನ್ನು ದೂರಮಾಡಿಕೊಂಡು ಮತ್ತೆ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳನ್ನು ಬಲಪಡಿಸುವಂತಹ ಸ್ಥಿತಿ ಏರ್ಪಡಬಹುದು. ಅಸ್ಸಾಮಿಯೇತರ ಹಿಂದೂ ಜನಸಂಖ್ಯೆ ಬಿಜೆಪಿಯ ಹಿಂದೆ ಹೋಗುತ್ತದೆ, ಅಲ್ಪಸಂಖ್ಯಾತರು ಕಾಂಗ್ರೆಸ್‌ನ ಹಿಂದೆ ಹೋಗುತ್ತಾರೆ.

➡

'ಬಿಜೆಪಿಗೆ ಮತ್ತೆ ಈ ಹಿಂದೆ ಬಡಿದೆಬ್ಬಿಸಿದ ಹಳೆಯ ಭಾವನೆಗಳ ಮೊರೆ ಹೋಗುವುದಲ್ಲದೆ ಬೇರೆ ದಾರಿ ಉಳಿಯುವುದಿಲ್ಲ.

ರಂಗದ ಭವಿಷ್ಯ

ಆದರೆ ಇವೆಲ್ಲಾ ಪ್ರಯತ್ನಗಳು ಸಂಯುಕ್ತ ರಂಗವನ್ನು ಅವಸಾನಗೊಳಿಸುವುದಂತೂ ದೂರವಿರಲಿ, ದುರ್ಬಲ ಗೊಳಿಸುವುದೂ ಸಾಧ್ಯವಿಲ್ಲ. ಚುನಾವಣೆಗಳಲ್ಲಿ ಸಂಯುಕ್ತ ರಂಗಕ್ಕೆ ಹಿನ್ನಡೆಯಾಗಿದೆ ಎಂಬುದರಲ್ಲಿ ಏನೂ ಸಂದೇಹವಿಲ್ಲ. ಆದರ ಕಾರಣಗಳ ಬಗ್ಗೆ ನಾವಿಲ್ಲಿ ಪರಿಶೀಲಿಸುತ್ತಿಲ್ಲ. ಆದರೆ ಸಂಯುಕ್ತ ರಂಗದ ಘಟಕ ಪಕ್ಷಗಳು ದೇಶದ ವಿಭಿನ್ನ ಪ್ರದೇಶಗಳಲ್ಲಿ ಈಗಲೂ ಪ್ರಭಾವಹೊಂದಿವೆ. ಎಡ ಪಕ್ಷಗಳು ಸುಮಾರಾಗಿ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿವೆ. ಸಮಾಜವಾದಿ ಪಕ್ಷವೂ ತನ್ನ ಸಂಖ್ಯೆ ಹೆಚ್ಚಿಸಿಕೊಂಡಿದೆ. ಮತಗಳಿಕೆ ಶೇಕಡವೂ ಹೆಚ್ಚಿದೆ. ಸಂಯುಕ್ತ ರಂಗದ ಸಾಧ್ಯತೆಗಳು ಇನ್ನೂ ಖಾಲಿಯಾಗಿಲ್ಲ. ಭಾರತದ ಬಹುಪಾಲು ಜನ ಜಾತ್ಯಾತೀತ ಭಾವನೆಯವರು, ಬಿಜೆಪಿ ಅಧಿಕಾರಕ್ಕೆ ಬರುವ ವಿನಾಶಕಾರಿ ಪರಿಣಾಮಗಳನ್ನು ಅವರು ಅರಿಯಬಲ್ಲರು.

ಅಲ್ಲದೆ ಬಿಜೆಪಿ ಮೈತ್ರಿಕೂಟದೊಳಗೆ ಅಸಂಗತತೆಗಳು ತುಂಬಿವೆ. ಹಲವು ಜಾತ್ಯಾತೀತ ಪಕ್ಷಗಳು ಕೇವಲ ತಮ್ಮ ಸಂಕುಚಿತ ಚುನಾವಣಾ ಗುರಿಸಾಧನೆಗಾಗಿ ಬಿಜೆಪಿಯೊಂದಿಗೆ ಕೈ ಮಿಲಾಯಿಸಿವೆ. ಆದ್ದರಿಂದ ಅವುಗಳ ನಡುವಿನ ವಿರೋಧಾಭಾಸಗಳು ಮೇಲಕ್ಕೆದ್ದು ಬರುವುದು ಖಂಡಿತ. ಬಹಳ ವರ್ಷಗಳ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಕೂಡಾ ಸುಲಭವಾಗಿ ಮತ್ತೆ ವಿಶ್ವಾಸ ಗಳಿಸಿಕೊಳ್ಳಲು ಸಾಧ್ಯವಾಗದು. ಕಾಂಗ್ರೆಸ್ ತನ್ನ ಧೋರಣೆಗಳನ್ನು ಬದಲಿಸಿಕೊಳ್ಳುತ್ತದೆ ಎಂಬ ನಿರೀಕ್ಷೆಯೂ ಅರ್ಥವಿಲ್ಲದ್ದು. ಆದ್ದರಿಂದ ಈಗಲೂ ಒಂದು ಪರ್ಯಾಯವಾಗಿ ಸಂಯುಕ್ತ ರಂಗದ ಸಾಧ್ಯತೆಗಳು ಇನ್ನೂ ಇವೆ. ಭಾರತದ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಸ್ತುತತೆ ಇದೆ ನಿಜ. ಏಕೆಂದರೆ ಅವು ಪ್ರಾದೇಶಿಕ ಆಕಾಂಕ್ಷೆಗಳನ್ನು, ಆ ಮೂಲಕ ನಮ್ಮ ರಾಜಕಾರಣದ ಒಕ್ಕೂಟ ರಚನೆಯನ್ನು ಬಲಪಡಿಸುವ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತವೆ. ಆದರೆ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪಕ್ಷಗಳ ಸ್ಥಾನ ತಗೊಳ್ಳುತ್ತವೆ ಎಂಬುದು ಕೇವಲ ಭ್ರಮೆ.

ಈಗಾಗಲೇ ಆರ್.ಎಸ್.ಎಸ್.,

> **ಬಿಜೆಪಿ ಮೈತ್ರಿಕೂಟದೊಳಗೆ ಅಸಂಗತತೆಗಳು ತುಂಬಿವೆ. ಕಾಂಗ್ರೆಸ್ ತನ್ನ ಧೋರಣೆಗಳನ್ನು ಬದಲಿಸಿಕೊಳ್ಳುತ್ತದೆ ಎಂಬ ನಿರೀಕ್ಷೆಯೂ ಅರ್ಥವಿಲ್ಲದ್ದು. ಆದ್ದರಿಂದ ಈಗಲೂ ಒಂದು ಪರ್ಯಾಯವಾಗಿ ಸಂಯುಕ್ತ ರಂಗದ ಸಾಧ್ಯತೆಗಳು ಇನ್ನೂ ಇವೆ.**

ವಿ.ಹೆಚ್.ಪಿ., ಭಜರಂಗ ದಳ ದೇವಸ್ಥಾನ ಕಟ್ಟುವ, ಕಾಶಿ ಮತ್ತು ಮಥುರಾಗಳ ಮೇಲೆ ದಾವೆ ಹಾಕುವ ತಮ್ಮದೇ ಅಜೆಂಡಾವನ್ನು ಮುಂದೊಡ್ಡಲು ದೃಢ ನಿರ್ಧಾರ ಮಾಡಿರುವುದಾಗಿ ಸಾರಿವೆ. ದೇವಸ್ಥಾನ ಕಟ್ಟುವ ಕೆಲಸವನ್ನು ಮುಂದೂಡಿದ್ದೇವಷ್ಟೇ ಎನ್ನುತ್ತಿದ್ದಾರೆ. ಈ ಮೈತ್ರಿಕೂಟವನ್ನು ಅವರು ತಮ್ಮನ್ನು ಬಲಪಡಿಸಿಕೊಳ್ಳಲು ಆ ಮೂಲಕ ತಮ್ಮ ಭವಿಷ್ಯದ ಯೋಜನೆಗಳನ್ನು ಈಡೇರಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಕಳೆದ ಕೆಲವು ವರ್ಷಗಳಿಂದ ಆರ್.ಎಸ್.ಎಸ್. - ಬಿಜೆಪಿ ಮೆಲ್ಲ- ಮೆಲ್ಲಗೆ ಎಲ್ಲಾ ರಂಗಗಳಲ್ಲಿ ತೂರಿ ಕೊಂಡಿದ್ದಾರೆ. ಇದನ್ನು ವಿಫಲ ಗೊಳಿಸಬೇಕು.

ಬಿಜೆಪಿಗೆ ಏನೇ ಭ್ರಮೆಯಿದ್ದರೂ, ಸ್ಥಿರತೆ ನೀಡಲಂತೂ ಅದಕ್ಕೆ ಸಾಧ್ಯವಾಗದು. 'ರಾಷ್ಟ್ರೀಯ ಅಜೆಂಡಾ'ದ ಘೋಷಿತ ಅಂಶಗಳೇನೇ ಇದ್ದರೂ ಅವರ ಪ್ರಣಾಳಿಕೆಯಲ್ಲಿ ವಿವರಿಸಿದಂತಹ ಮರೆಮಾಡಿದ ಅಜೆಂಡಾವನ್ನು ಅನುಸರಿಸಲು ಅವರು ಪ್ರಯತ್ನಿಸುತ್ತಾರೆ. ಮುಂಬರುವ ದಿನಗಳಲ್ಲಿ ಬಿಜೆಪಿಗೆ ನೀಡಿದ ಸಚಿವ ಖಾತೆಗಳನ್ನು ಭಾರತದ ಜಾತ್ಯಾತೀತ ಚೌಕಟ್ಟನ್ನು ದುರ್ಬಲಗೊಳಿಸಲು ಬಳಸಲಾಗುವುದು.

ಈ ಪ್ರಯತ್ನಗಳನ್ನು ಸಾಮೂಹಿಕ ಹೋರಾಟಗಳು ಹಾಗೂ ಆಂದೋಲನಗಳ ಮೂಲಕ ಪ್ರತಿರೋಧಿಸಲೇಬೇಕು. ಕಳೆದೆರಡು ವರ್ಷಗಳಲ್ಲಿ ಎಡಪಕ್ಷಗಳು ತಮ್ಮನ್ನು ಜನ-ವಿರೋಧಿ ನೀತಿಗಳಿಂದ ದೂರವಿರಿಸಿಕೊಂಡರೂ ಆರ್ಥಿಕ ಧೋರಣೆಗಳ ವಿರುದ್ಧ, ಧರ್ಮ ನಿರಪೇಕ್ಷತೆಯ ರಕ್ಷಣೆಗಾಗಿ ಸಾಕಷ್ಟು ಪ್ರತಿರೋಧ ಒಡ್ಡಿರಲಿಲ್ಲ, ಸಂಯುಕ್ತ ರಂಗದ ಅಂಗಪಕ್ಷಗಳಲ್ಲಿ ಎಲ್ಲವೂ ಪ್ರಗತಿಪರ ಧೋರಣೆಗಳನ್ನು - ವಿಶೇಷವಾಗಿ ಆರ್ಥಿಕ ರಂಗದಲ್ಲಿ - ತಳೆಯುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಪ್ರಸ್ತುತ ರಾಜಕೀಯ ಸನ್ನಿವೇಶದ ಒತ್ತಾಯಗಳು ಹಾಗೂ ಈಗಿರುವ ವರ್ಗ ಬಲಾಬಲದಿಂದಾಗಿ ಸಂಯುಕ್ತ ರಂಗ ಹುಟ್ಟಿಕೊಂಡಿತು. ವಿಭಿನ್ನ ಧೋರಣೆಗಳಿಗೆ ಪ್ರತಿರೋಧ ಒಡ್ಡಬೇಕಾದರೆ ಸೂಕ್ತ ಐಕ್ಯತೆ ಬೇಕು, ಭಾರತದ ವಿವಿಧ ಜನವಿಭಾಗಗಳನ್ನು - ಕಾರ್ಮಿಕ ವರ್ಗ, ಕೃಷಿ ಕೂಲಿಕಾರರು, ರೈತರು, ಯುವಜನ, ಮಹಿಳೆಯರು, ವಿದ್ಯಾರ್ಥಿಗಳು ಇತ್ಯಾದಿಗಳನ್ನು ಈ ಮೈತ್ರಿಕೂಟ ನೀಡಿದ ಜನಪ್ರಿಯ ಭರವಸೆಗಳ ಈಡೇರಿಕೆಗಾಗಿ ಅಣಿನೆರೆಸಬೇಕು. ಈ ದಿಕ್ಕಿನಲ್ಲಿ ವಿವಿಧ ಮಟ್ಟಗಳಲ್ಲಿ ಎಡ ಪ್ರಜಾಸತ್ತಾತ್ಮಕ ಹಾಗೂ ಧರ್ಮನಿರಪೇಕ್ಷ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ಶಕ್ತಿಯುತವಾದ ಪ್ರಯತ್ನಗಳು ನಡೆಯಬೇಕಾಗಿದೆ. ಇದರಲ್ಲಿ ಎಡಪಕ್ಷಗಳು ಮಹತ್ವದ ಪಾತ್ರ ವಹಿಸಬೇಕಾಗಿದೆ. ○

ಬಿಜೆಪಿಯ 'ಸರ್ವಸಮ್ಮತಿ'ಯೂ, ನಾಯ್ಡುರವರ 'ಸಮಾನದೂರ'ವೂ

ಮಾರ್ಚ್ ೨೩ ರಂದು ಚಂದ್ರಬಾಬು ನಾಯ್ಡುರವರು ಬಿಜೆಪಿ ಬೆಂಬಲದಿಂದ ತಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದರೊಂದಿಗೆ ಸಂಯುಕ್ತ ರಂಗದಿಂದ ಟಿಡಿಪಿ ಹೊರಬರುವುದಾಗಿ ಸಾರಿದರು. ಅದೇ ದಿನ 'ಸಂಯುಕ್ತ ರಂಗ'ಕ್ಕೆ ಬರೆದ ಪತ್ರದಲ್ಲಿ ತನ್ನ ಬೆನ್ನ ಹಿಂದೆ ರಂಗ ನಿರ್ಧಾರ ಕೈಗೊಂಡಿದ್ದರಿಂದ ನನಗೆ ನೋವಾಗಿದೆ ಎಂದು ಆಪಾದಿಸಿದರು. ಇದಕ್ಕೆ 'ಸಂಯುಕ್ತ ರಂಗ' ದ ಪರವಾಗಿ ಅದರ ಅಧ್ಯಕ್ಷ ದೇವೇಗೌಡರು ಮಾರ್ಚ್ ೫ ರಂದು ಬರೆದ ಪತ್ರದಲ್ಲಿ ಚುನಾವಣಾ ನಂತರದ ಬೆಳವಣಿಗೆಗಳನ್ನು ಪರಿಶೀಲಿಸುತ್ತಾ ನಿಜವಾಗಿ ಸಂಯುಕ್ತ ರಂಗದ ಬೆನ್ನ ಹಿಂದೆ ನಿರ್ಣಯ ಕೈಗೊಂಡು ನೋವುಂಟು ಮಾಡಿದವರು ಸ್ವತಃ ನಾಯ್ಡುರವರೇ ಅಲ್ಲವೇ ಎಂದು ಪ್ರಶ್ನಿಸಿದ್ದರು. ದೇಶದ ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಇದೆ ಪ್ರಶ್ನೆ ಕೇಳುತ್ತಿದ್ದಾರೆ. ಈ ಕೆಳಗಿನ ಘಟನಾವಳಿಗಳು ಅವರ ಈ ಉತ್ತರ ನೀಡುತ್ತವೆ.

ಮಾರ್ಚ್ 6: ಚುನಾವಣಾ ನಂತರದ ಪರಿಸ್ಥಿತಿಗಳ ಚರ್ಚೆಗೆ ಹಾಗೂ ಕ್ರಮಗಳಿಗಾಗಿ ಸಂಯುಕ್ತ ರಂಗದ ಮುಖಂಡರ ಸಮಿತಿಯ ಸಭೆ.

ಮಾರ್ಚ್ 10: ಚಂದ್ರಬಾಬು ನಾಯ್ಡು ಕರೆದ ಸಭೆಯಲ್ಲಿ ಮುಂದುವರಿದ ತೀವ್ರ ಚರ್ಚೆ-ಮುಖ್ಯವಾಗಿ ಬಿಜೆಪಿ ಹಾಗೂ ಕಾಂಗ್ರೆಸ್‌ನಿಂದ 'ಸಮಾನ ದೂರ'ದಲ್ಲಿ ನಿಲ್ಲುವ ನಾಯ್ಡುರವರ ನಿಲುವಿನ ಬಗ್ಗೆ. ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಆಂಧ್ರದಲ್ಲೂ ಹೆಚ್ಚುತ್ತಿರುವ ಕೋಮುವಾದಿ ಅಪಾಯದ ಹಿನ್ನೆಲೆಯಲ್ಲಿ ತಮ್ಮ ನಿಲುವನ್ನು ಮರು ಪರಿಶೀಲಿಸಲು ಅವರಿಗೆ ಎಲ್ಲರ ಆಗ್ರಹ. ಮಾರ್ಚ್ 16 ರಂದು ಸಭೆ ಸೇರಿ ಈ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರಲು ನಾಯ್ಡು ಸೇರಿದಂತೆ ಎಲ್ಲರ ಒಪ್ಪಿಗೆ.

ಮಾರ್ಚ್ 15: ಚಂದ್ರಬಾಬು ನಾಯ್ಡುರವರು ಟಿಡಿಪಿ ಸದಸ್ಯರು ತಟಸ್ಥರಿರುವುದಾಗಿ ರಾಷ್ಟ್ರಪತಿಗಳಿಗೆ ಹೇಳಿರುವುದರಿಂದ ವಾಜಪೇಯಿಯವರನ್ನು ಪ್ರಧಾನಮಂತ್ರಿಯಾಗಿ ನೇಮಿಸಲಾಗಿದೆ ಎಂದು ರಾಷ್ಟ್ರಪತಿ ಭವನದ ಹೇಳಿಕೆಯಲ್ಲಿ ಪ್ರಸ್ತಾಪ. ಸಂಯುಕ್ತ ರಂಗ ಬೆನ್ನಹಿಂದೆ ಕೈಗೊಂಡ ತೀರ್ಮಾನ ಎಂದು ಅಸಮಾಧಾನ.

ಮಾರ್ಚ್ 16: ವಿಧಾನಸಭೆಯ ಕಲಾಪಗಳಿರುವುದರಿಂದಾಗಿ ಪೂರ್ವ ನಿರ್ಧರಿತ ಸಭೆಗೆ ತನ್ನ ಹಿರಿಯ ಸಹೋದ್ಯೋಗಿಗಳನ್ನಾದರೂ ಕಳಿಸುತ್ತೇನೆಂದು ನಾಯ್ಡು ಹೇಳಿದ್ದರೂ ಸಂಯುಕ್ತ ರಂಗದ ಮುಖಂಡರ ಸಭೆಗೆ ಟಿಡಿಪಿ ಪ್ರತಿನಿಧಿ ಬರಲೇ ಇಲ್ಲ. ಸಭೆ ಮುಂದೂಡಿಕೆ. ಮಾರ್ಚ್ 23 ರಂದು ಸಂಸತ್ ಅಧಿವೇಶನ ಆರಂಭವಾಗುವುದರಿಂದ ಮಾರ್ಚ್ 22 ರಂದು ಸಭೆ ಸೇರಲು ನಿರ್ಧಾರ. ಈ ಎಲ್ಲಾ ಕಲಾಪಗಳ ಬಗ್ಗೆ ನಾಯ್ಡುರವರಿಗೆ ಅಂದೇ ಐ.ಕೆ.ಗುಜ್ರಾಲ್‌ರವರಿಂದ ಮಾಹಿತಿ.

ಮಾರ್ಚ್ 17: ನಾಯ್ಡುರವರನ್ನು ಸಂಪರ್ಕಿಸಲು ಸಂಯುಕ್ತರಂಗ ಮುಖಂಡರಿಂದ ಹಲವು ಬಾರಿ ಪ್ರಯತ್ನ. ಹೆಚ್ಚಿನ ಬಾರಿ ಅಯಶಸ್ವಿ.

ಮಾರ್ಚ್ 21: ಸಂಯುಕ್ತ ರಂಗದ ಅಧ್ಯಕ್ಷರಿಂದ ನಾಯ್ಡು ಸಂಪರ್ಕ. ಮುಂದಿನ ಭಾನುವಾರವಾದ್ದರಿಂದ ವಿಧಾನಸಭೆಗಳ ಕಲಾಪಗಳು ಇಲ್ಲದಿರುವುದರಿಂದ ಸಂಯುಕ್ತ ರಂಗದ ಮುಖಂಡರ ಸಭೆಗೆ ಬರಬೇಕಾಗಿ ದೇವೇಗೌಡರ ಕೇಳಿಕೆ.

ಮಾರ್ಚ್ 22: ಸಂಯುಕ್ತ ರಂಗ ಮುಖಂಡರ ಸಭೆ. ನಾಯ್ಡು ಬರಲಿಲ್ಲ. ಲೋಕಸಭಾ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ಸಿನ ಸಂಗ್ಮಾರವರನ್ನು ಬೆಂಬಲಿಸಬೇಕೆಂದು ಮತ್ತೆ ಇಂಗಿತ. ಸರ್ವಸಮ್ಮತಿಯ ಅಭ್ಯರ್ಥಿಯಿದ್ದರೆ ಟಿಡಿಪಿ ಬೆಂಬಲಿಸುವುದಾಗಿಯೂ, ಸ್ಪರ್ಧೆಯಿದ್ದರೆ ತಟಸ್ಥರಾಗಿರುವುದಾಗಿಯೂ ನಾಯ್ಡುರವರ ಬಹಿರಂಗ ಹೇಳಿಕೆ.

ಮಾರ್ಚ್ 23: ಬೆಳಿಗ್ಗೆ 9 ಗಂಟೆ ನೀವು ಸರ್ವಸಮ್ಮತಿಯ ಅಭ್ಯರ್ಥಿಯಾಗಲಿರುವಿರಿ ಎಂದು ಸಂಗ್ಮಾಗೆ ಪಾರ್ಲಿಮೆಂಟರಿ ಖಾತೆಯ ಬಿಜೆಪಿ ಮಂತ್ರಿಗಳು. ಬೆಳಿಗ್ಗೆ 11 ಗಂಟೆ ಲೋಕಸಭಾಧ್ಯಕ್ಷ ಸ್ಥಾನಕ್ಕೆ ಟಿಡಿಪಿ ಅಭ್ಯರ್ಥಿಯನ್ನು ನಿಲ್ಲಿಸಲು ಬಿಜೆಪಿಯೊಂದಿಗೆ ಒಪ್ಪಂದವಾಗಿದೆ ಯೆಂದು ನಾಯ್ಡು ಪ್ರಕಟಣೆ. ಬಾಲಯೋಗಿಯವರ ನಾಮಪತ್ರ ಸಲ್ಲಿಕೆ. ಸಂಯುಕ್ತ ರಂಗದಿಂದ ಹೊರ ಬಂದಿರುವುದಾಗಿ ನಾಯ್ಡು ಪ್ರಕಟಣೆ. ಸಂಯುಕ್ತ ರಂಗಕ್ಕೆ ಅಪಾದನೆ ಪತ್ರ. ನ್ಯಾಶನಲ್ ಕಾನ್ಫರೆನ್ಸ್, ಎಜಿಪಿಯನ್ನು ಜತೆಗದೊಯ್ದು ಪ್ರತ್ಯೇಕ ರಂಗ ರಚಿಸುವ ಪ್ರಯತ್ನ.

ಮಾರ್ಚ್ 24: ಬಿಜೆಪಿ ಕೂಟದ ಬೆಂಬಲದಿಂದ ಟಿಡಿಪಿ ಅಭ್ಯರ್ಥಿ ಲೋಕಸಭಾಧ್ಯಕ್ಷರಾಗಿ ಆಯ್ಕೆ.

ಮಾರ್ಚ್ 25: ನಾಯ್ಡುರವರ ಆಪಾದನೆಗಳನ್ನೆಲ್ಲಾ ನಿರಾಕರಿಸಿದ ಸಂಯುಕ್ತ ರಂಗದ ಅಧ್ಯಕ್ಷರ ಪತ್ರದಲ್ಲಿ ಸಂಯುಕ್ತ ರಂಗ ತ್ಯಜಿಸಿದ್ದಕ್ಕಾಗಿ ವಿಷಾದ.

ಮಾರ್ಚ್ 27: 'ಟಿಡಿಪಿಯೊಂದಿಗೆ' ತಾವೂ ವಿಶ್ವಾಸಮತದಲ್ಲಿ ಗೈರು ಹಾಜರಿರುವುದಾಗಿ ನ್ಯಾಶನಲ್‌ಕಾನ್ಫರೆನ್ಸ್.

ಮಾರ್ಚ್ 28: 'ತಟಸ್ಥತೆ', 'ಗೈರು ಹಾಜರಿ'ಯ ಮಾತನ್ನು ಮುರಿದು ಬಿಜೆಪಿ ಕೂಟಕ್ಕೆ ಟಿಡಿಪಿಯ ಬೆಂಬಲ ಹಾಗೂ ನ್ಯಾಶನಲ್ ಕಾನ್ಫರೆನ್ಸ್ ಗೈರು ಹಾಜರಿಯಿಂದಾಗಿ 274-261 ಮತಗಳಲ್ಲಿ ವಾಜಪೇಯಿ ಸರಕಾರಕ್ಕೆ ವಿಶ್ವಾಸ ಮತ ○

ಗೊತ್ತುಗುರಿಗಳಿಲ್ಲದ ಕರ್ನಾಟಕದ ಬಜೆಟ್

ಕರ್ನಾಟಕದ ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು 1998-99 ರ ಸಾಲಿನ ಬಜೆಟನ್ನು ಮಂಡಿಸಿದ್ದಾರೆ. ಈ ಬಜೆಟ್ಟಿಗೆ ಗೊತ್ತು ಗುರಿಗಳಿಲ್ಲ ಎಂಬುದು ಇದನ್ನು ನೋಡಿದ ಯಾರಿಗಾದರೂ ಸ್ಪಷ್ಟವಾಗಿಬಿಡುತ್ತದೆ.

ಲೋಕಸಭಾ ಚುನಾವಣೆಗಳಲ್ಲಿ ರಾಜ್ಯದ ಜನತೆಯ ಸಿಟ್ಟು ತಿರಸ್ಕಾರವನ್ನು ಎದುರಿಸಬೇಕಾಗಿ ಬಂದ ಮತ್ತು ಮುಂದಿನ ವರ್ಷದಲ್ಲಿ ರಾಜ್ಯದ ವಿಧಾನ ಸಭಾ ಚುನಾವಣೆಗಳನ್ನು ಎದುರಿಸಬೇಕಾದ ಜನತಾ ದಳದ ಸರ್ಕಾರ ಜನರ ಸಮಸ್ಯೆಗಳ ಬಗ್ಗೆ ಚಿಂತಿಸಿ ಅವುಗಳ ಪರಿಹಾರಕ್ಕೆ ತುಂಬು ಮನಸ್ಸಿನ ಪ್ರಯತ್ನವನ್ನು ಮಾಡಬೇಕಾಗಿತ್ತು. ಈ ಪ್ರಯತ್ನಗಳ ಪ್ರತಿಫಲನ ಈ ಬಜೆಟ್ಟಿನಲ್ಲಿ ಆಗಬೇಕಾಗಿತ್ತು. ಆದರೆ ಜನರ ಸಮಸ್ಯೆಗಳನ್ನು ಪರಿಹರಿಸುವ ಕಾತರ ಈ ಬಜೆಟ್ಟಿನಲ್ಲಿ ಕಾಣಿಸುವುದೇ ಇಲ್ಲ.

ಸರ್ಕಾರ ಏನೇನು ಮಾಡಬಹುದಾಗಿತ್ತು ಎಂದು ಹಾಗೇ ಒಂದು ಪಟ್ಟಿ ಮಾಡ ಹೊರಟರೆ ಜನರು ದಿನನಿತ್ಯ ಬಳಸುವ ಅನೇಕ ವಸ್ತುಗಳು ತುಟ್ಟಿಯಾಗಿವೆ, ನಿರುದ್ಯೋಗ ಹೆಚ್ಚಾಗಿದೆ, ಕೃಷಿಯ ಬೆಳವಣಿಗೆ ಕುಂಠಿತವಾಗಿದೆ- ಹಣಕಾಸು ಮಂತ್ರಿಗಳೇ ಒಪ್ಪಿಕೊಂಡಿರುವಂತೆ ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕುಸಿತವುಂಟಾಗಿದೆ- ಹೀಗೆ ಈ ಎಲ್ಲವುಗಳ ದಿಕ್ಕನ್ನು ಬದಲಿಸಿದರೆ ಜನತೆಗೆ ಪರಿಹಾರ ಒದಗಿಸಿದಂತಾಗುತ್ತಿತ್ತು.

ಆದರೆ ವಿಶ್ವಬ್ಯಾಂಕು ತೋರಿಸಿದ ದಿಕ್ಕಿನ ಗಾಢವಾದ ಛಾಪು ಕಾಣಿಸುವ ಈ ಬಜೆಟ್ಟು ಈ ಯಾವುದೇ ತರಹದ ಪರಿಹಾರಗಳನ್ನು ಜನರಿಗೆ ಒದಗಿಸುವ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಸುಮಾರು 230 ಕೋಟಿ ರೂಪಾಯಿಗಳ ಹೆಚ್ಚಿನ ತೆರಿಗೆಯನ್ನು ಜನರ ಮೇಲೆ ಹೇರಿಯೂ ಜನ ಸಾಮಾನ್ಯರಿಗೆ ಅವಶ್ಯವಾದ ಪರಿಹಾರಗಳಿಲ್ಲ. ಹರಿಜನ ಗಿರಿಜನರ ಬಗ್ಗೆ ಬಹಳ ಮಾತುಗಳಿವೆ. ಆದರೆ ಕೃಷಿಕಾರ್ಮಿಕರ ಸ್ಥಿತಿ ಸುಧಾರಿಸುವ ಬಗ್ಗೆ ಏನೂ ಇಲ್ಲ. ಪಡಿತರ ಕಡಿತ ತೆಗೆಯುವ ಪ್ರಯತ್ನವೂ ಇಲ್ಲ.

ಉದ್ಯೋಗಗಳನ್ನು ಹೆಚ್ಚಿಸುವ ಬದಲು ರಾಜ್ಯ ಸರ್ಕಾರದ ಖಾಲಿ ಹುದ್ದೆಗಳನ್ನು ಶೈತ್ಯೀಕರಿಸಲಾಗಿದೆ. ಅಂದರೆ ಈ ಹುದ್ದೆಗಳಿಗೆ ನೇಮಕಾತಿಗಳಿಲ್ಲ. ನೌಕರಿಗಳಲ್ಲಿ 5% ಕಡಿತದ ಬೆದರಿಕೆಯನ್ನು ಹಾಕಿದೆ! ದಿನ ಬಳಕೆಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡುವ ಬದಲು ಸೀಮೆಎಣ್ಣೆ, ಬಿಸ್ಕಿಟುಗಳು,ಸಾಬೂನು, ಸ್ಟೀಲ್ ಪಾತ್ರೆಗಳು ಇತ್ಯಾದಿಗಳ ಮೇಲೆ ಶೇ 8 ರಿಂದ ಶೇ 10 ರಷ್ಟು ತೆರಿಗೆಗಳನ್ನು ಹೆಚ್ಚಿಸಲಾಗಿದೆ.

ಕೇಂದ್ರ ಬಜೆಟ್ಟಿನಲ್ಲಿ ಕಳೆದ ವರ್ಷವೇ ಘೋಷಿಸಲಾದ ಅಂತರ್ರಚನಾ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ಕಾರ್ಪೊರೇಷನ್ ಸ್ಥಾಪಿಸಲು ಎರಡು ವರ್ಷಗಳ ಕಾಲ ರಾಜ್ಯದಾದ್ಯಂತ ಅಂತರ್ರಚನಾ ಸೌಲಭ್ಯಗಳ ಸೆಸ್‌ಅನ್ನು ವಿಧಿಸಲಾಗಿದೆ. ಈ ಕಾರ್ಪೊರೇಷನ್ ರಸ್ತೆ, ಸೇತುವೆ ಇತ್ಯಾದಿಗಳಲ್ಲಿ ಹಣ ಹೂಡಲಿದೆಯಂತೆ.

ಕೃಷಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡುವ ಅವಶ್ಯಕತೆ ಇದ್ದೇ ಇದೆ. ಈಗ ರಾಜ್ಯದ ಕೃಷಿ ಉತ್ಪಾದನೆಯೇ ಕುಸಿಯುತ್ತಿರುವ ಈ ಸಂದರ್ಭದಲ್ಲಿ ಈ ಅವಶ್ಯಕತೆ ಇನ್ನು ಹೆಚ್ಚಾಗಿದೆ ಆದರೆ ಈ ಸಾಲಿನ ಬಜೆಟ್ ದೊಡ್ಡ ನೀರಾವರಿ ಯೋಜನೆಗಳಿಗೆ ಹಣ ತೆಗೆದಿರಿಸಿ ಸಣ್ಣ ನೀರಾವರಿಗೆ ಅತಿ ಕಡಿಮೆ ಹಣ ತೆಗೆದಿರಿಸಿದೆ. ಈ ಹಣ ರಾಜ್ಯದ ಎಲ್ಲ ಕೆರೆ ಕಟ್ಟೆಗಳ ಹೂಳೆತ್ತಲೂ ಸಾಕಾಗುವುದಿಲ್ಲ. ರಾಜ್ಯದ ಬಹುತೇಕ ಕೆರೆ ಕಟ್ಟೆಗಳಲ್ಲಿ ಹೂಳು ತುಂಬಿದ್ದ ಈ ಹೂಳನ್ನು ತೆಗಯದೆ ಕೆರೆ ಕಟ್ಟೆಗಳು ಹೆಚ್ಚಿನ ನೀರಾವರಿಯನ್ನು ಸಾಧ್ಯ ಗೊಳಿಸಲಾರವು. ಹೀಗಿರುವಾಗ ಈ ಉದ್ದೇಶಕ್ಕೆ ಹಣ ತೆಗೆದಿರಿಸಲೇ ಬೇಕಾಗಿತ್ತು. ಇದಲ್ಲದೆ ಅಂತರ್ಜಲ ಸಂಪನ್ಮೂಲಗಳ ಬಳಕೆಯನ್ನು ಹೆಚ್ಚಿಸುವುದು ಮತ್ತು ಅವುಗಳ ಬಳಕೆಯನ್ನು ಹೆಚ್ಚು ವೈಜ್ಞಾನಿಕಗೊಳಿಸುವ ಪ್ರಯತ್ನ ಅತ್ಯವಶ್ಯವಾಗಿ ಆಗಬೇಕಾದದ್ದು. ಈ ದಿಕ್ಕಿನಲ್ಲೂ ಹೆಚ್ಚಿನ ಆಸ್ಥೆಯನ್ನು ಬಜೆಟ್ ತೋರಿಸಿಲ್ಲ.

ಇವಕ್ಕೆಲ್ಲ ಸಂಪನ್ಮೂಲಗಳ ಕೊರತೆ ಇದೆ ಎಂಬ ಒಂದೇ ಮಾತಿನ ಉತ್ತರ ಬರಬಹುದು. ಆದರೆ ಇದು ಹಸಿ ಸುಳ್ಳು. ಯಾಕೆಂದರೆ ಶ್ರೀಮಂತರ ಮೇಲೆ ತೆರಿಗೆ ಹೇರುವ ಪ್ರಯತ್ನವನ್ನೇ ಮಾಡಲಾಗಿಲ್ಲ. ಬೆಂಗಳೂರಿನ ಸುತ್ತ ಕೃಷಿ-ವ್ಯವಹಾರದಲ್ಲಿ ತೊಡಗಿಸುವ ಹಲವು ಕಂಪನಿಗಳಿವೆ. ಹೂಗಾರಿಕೆ ಮತ್ತು ಇತರ ಉಚ್ಚ ತಂತ್ರಜ್ಞಾನದ ಕೃಷಿಯಲ್ಲಿ ರಫ್ತು ಕೃಷಿಯಲ್ಲಿ ತೊಡಗಿರುವ ಹಲವು ಕಂಪನಿಗಳಿವೆ. ಗ್ರಾನೈಟ್ ಉದ್ಯಮ ಮದ್ಯ ಉದ್ಯಮಗಳಿವೆ. ಇವೆಲ್ಲವುಗಳ ಮೇಲೆ ತೆರಿಗೆ ಹೇರುವ ಪ್ರಯತ್ನಗಳನ್ನು ಸರ್ಕಾರ ಮಾಡಬಹುದಾಗಿತ್ತು. ಬೆಂಗಳೂರಿನ ಸುತ್ತ ಮತ್ತು ಇತರೆಡೆ ಫಾರ್ಮ್ ಹೌಸ್‌ಗಳನ್ನು ಕಟ್ಟಿಕೊಂಡು ತಮ್ಮ ವಿಲಾಸಿ ಜೀವನ ಶೈಲಿಗಳಿಗೆ ಅನುಕೂಲ ಮಾಡಿಕೊಂಡವರು ಹಲವರಿದ್ದಾರೆ. ಕ್ಯಾಪಿಟೇಷನ್ ಫೀ ಪಡೆವ ವಿದ್ಯಾಸಂಸ್ಥೆಗಳ ಮೇಲೂ ತೆರಿಗೆ ಹೇರಬಹುದಾಗಿತ್ತು. ಮೇಲಿಂದ ಮೇಲೆ ನೋಡಿದಾಗಲೇ ಕಾಣುವ ಮೂಲಗಳು. ತೆರಿಗೆ ನೆಲೆಯನ್ನು ಈ ರೀತಿ ವಿಸ್ತರಿಸಿ 7000-8000 ಕೋಟಿ ರೂ. ಸಂಗ್ರಹಿಸುವ ಸಾಧ್ಯತೆಯಿತ್ತು. ಬೆಂಗಳೂರು ಜಗತ್ತಿನ ವಿವಿಧ ಮೂಲೆಗಳಿಂದ ಹೂಡಿಕೆಯನ್ನು ಆಕರ್ಷಿಸುತ್ತಿರುವುದರಿಂದ ತೆರಿಗೆ ಹೇರಲು ಇನ್ನು ಹಲವು ಅವಕಾಶಗಳು ಇದ್ದೇ ಇವೆ. ಸರ್ಕಾರಕ್ಕೆ ಇರುವ ಅಪಾರ ಮಾಹಿತಿಯನ್ನು ಈ ಉದ್ದೇಶದಿಂದ ಬಳಸಿಕೊಂಡರೆ ಸಂಪನ್ಮೂಲದ ಕೊರತೆ ಇರಲೇ ಬಾರದು ಸಂಪನ್ಮೂಲಗಳ ಕೊರತೆ ಎಂಬುದು ಬರೀ ನೆಪ ಮಾತ್ರ.

ಬಂಡವಾಳ ವೆಚ್ಚಕ್ಕಾಗಿ ತೆಗೆದಿರಿಸಿರುವ ಹಣದ ಮೊತ್ತವೂ ಬಹಳ ಅಲ್ಪವೇ.

ಹೀಗೆ ಸ್ವಾತಂತ್ರ್ಯದ ಐವತ್ತನೇ ವರ್ಷವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಹಿಂದೆ ಸಾಧಿಸದೇ ಇರುವ ಹಲವನ್ನು ಗಮನದಲ್ಲಿಟ್ಟು ಕೊಂಡು ಜನಪರವಾದ ಬಜೆಟ್ಟನ್ನು ತಯಾರಿಸಿ ರಾಜ್ಯದ ಏಳಿಗೆಗೆ ಪ್ರಯತ್ನವನ್ನು ಜನತಾದಳ ಸರ್ಕಾರ ಮಾಡಬಹುದಾಗಿತ್ತು. ಆದರೆ ಅಂತಹ ರಾಜಕೀಯ ಸಂಕಲ್ಪಶಕ್ತಿ ತನ್ನಲ್ಲಿ ಇಲ್ಲ ಎಂಬುದನ್ನು ಈ ಸರ್ಕಾರ ತೋರಿಸಿ ಕೊಟ್ಟಿದೆ.

ಬಂಡವಾಳಿಗರು, ವಿಶ್ವಬ್ಯಾಂಕ್ ಐ.ಎಂ.ಎಫ್. ಗಳು ವಿಧಿಸಿದ ಮಿತಿಗಳೊಳಗೇ ತಾನು ನಡೆಯುತ್ತೇನೆಂದು ಅದು ಹೇಳಿದಂತಿದೆ.

ಬಜೆಟ್ಟಿನ ಒಂದು ರೂಪಾಯಿ

ಎಲ್ಲಿಂದ ಬರುತ್ತದೆ

ರಾಜ್ಯ ತೆರಿಗೆ ಆದಾಯ	51 ಪೈ.
ಕೇಂದ್ರ ತೆರಿಗೆಗಳ ಪಾಲು	15 ಪೈ.
ಸಾಲ	13 ಪೈ.
ಕೇಂದ್ರ ಸರ್ಕಾರದಿಂದ ಅನುದಾನ	10 ಪೈ
ರಾಜ್ಯ ತೆರಿಗೆಯೇತರ ಆದಾಯ	9 ಪೈ.
ಸಾರ್ವಜನಿ ಖಾತೆ (ನಿವ್ವಳ)	1 ಪೈ.
ಸಾಲ ಮತ್ತು ಮುಂಗಡದ ವಸೂಲಿ	1 ಪೈ

ಎಲ್ಲಿಗೆ ಹೋಗುತ್ತದೆ

ಇತರ ಆರ್ಥಿಕ ಸೇವೆಗಳು	19 ಪೈ.
ಇತರ ಸಾರ್ವತ್ರಿಕ ಸೇವೆಗಳು	16 ಪೈ.
ಶಿಕ್ಷಣ	15 ಪೈ
ಸಾಲ ಸೇವೆ	13 ಪೈ.
ನೀರಾವರಿ	10 ಪೈ.
ಕೃಷಿ	6 ಪೈ.
ಸಾಮಾಜಿಕ ಕಲ್ಯಾಣ	5 ಪೈ.
ಆರೋಗ್ಯ	5 ಪೈ
ಗ್ರಾಮೀಣಾಭಿವೃದ್ಧಿ	4 ಪೈ.
ಇತರ ಸಾಮಾಜಿಕ ಸೇವೆಗಳು ,	4 ಪೈ
ನೀರು ಪೂರೈಕೆ	3 ಪೈ

ವಿಶ್ವಾಸದ್ರೋಹಕ್ಕೆ ಬಂಡಾಯದ ಪ್ರತಿರೋಧ

ದೇಶದ ಜಾತ್ಯಾತೀತ ಶಕ್ತಿಗಳ ಬೆನ್ನಲ್ಲಿ ಇರಿದು ಕೋಮುವಾದಿ ಭಾರತೀಯ ಜನತಾಪಕ್ಷ ನೇತೃತ್ವದ ಸರಕಾರಕ್ಕೆ ಬೆಂಬಲ ನೀಡಿದ ತೆಲುಗುದೇಶಂ ಪಕ್ಷ ಇದೀಗ ಈ ಕಾರಣಕ್ಕಾಗಿ ಬಿಕ್ಕಟ್ಟಿಗೆ ಸಿಲುಕಿದೆ.

ಬಿಜೆಪಿಯಿಂದಲೂ ಕಾಂಗ್ರೆಸ್ಸಿನಿಂದಲೂ ಸಮಾನದೂರ ಇರುವುದಾಗಿ ಹೇಳುತ್ತಿದ್ದ ನೀತಿಯನ್ನು ಬದಲಾಯಿಸಿಕೊಂಡು ಬಿಜೆಪಿ ಕೂಟಕ್ಕೆ ಬೆಂಬಲ ನೀಡಿದ್ದನ್ನು ವಿರೋಧಿಸಿ ಆಂಧ್ರಪ್ರದೇಶದ ಕೈಗಾರಿಕೆ ಖಾತೆ ಸಚಿವ ಬಷೀರುದ್ದೀನ್ ಬಾಬುಖಾನ್ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ.

ಫ್ಯಾಸಿಸ್ಟ್-ಕೋಮುವಾದಿ ಬಿಜೆಪಿ ನೇತೃತ್ವದ ಸರಕಾರಕ್ಕೆ ಬೆಂಬಲ ಕೊಟ್ಟಿರುವುದಕ್ಕೆ ಪ್ರತಿಭಟನೆಯಾಗಿಯೇ ತಾವು ಪದತ್ಯಾಗ ಮಾಡಿದ್ದು. ತಮ್ಮ ನಿಲುವನ್ನು ಬದಲಾಯಿಸಿಕೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲ ಎಂದು ಖಾನ್ ಸ್ಪಷ್ಟಪಡಿಸಿದ್ದಾರೆ.

ಇವರ ರಾಜಿನಾಮೆ ಪ್ರಕರಣ ಆಂಧ್ರಪ್ರದೇಶ ವಿಧಾನಸಭೆಯಲ್ಲಿಯೂ ಪ್ರಸ್ತಾಪವಾಗಿ ಭಾರೀ ಕೋಲಾಹಲವೇ ಉಂಟಾಯಿತು.

ಈ ಹಿನ್ನೆಲೆಯಲ್ಲಿ ಸದನಕ್ಕೆ ಒಂದು ಸುದೀರ್ಘ ಹೇಳಿಕೆ ನೀಡಿ ತಮ್ಮ ನಿರ್ಧಾರಕ್ಕೆ ಕಾರಣವೇನು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು.

ಇನ್ನೊಂದು ಹೊಡೆತ

ಸಚಿವ ಬಾಬು ಖಾನ್‌ರ ರಾಜಿನಾಮೆ ಯಿಂದ ಆಘಾತಕ್ಕೊಳಗಾದ ತೆಲುಗುದೇಶಂ ಚೇತರಿಸಿಕೊಳ್ಳುವಷ್ಟರಲ್ಲೇ ಅದಕ್ಕೆ ಇನ್ನೊಂದು ಹೊಡೆತ ಬಿದ್ದಿದೆ. ಈ ಮಾರಕ ಏಟು ಹಾಕಿದವರು ಪಕ್ಷದ ಒಬ್ಬ ಹಿರಿಯ ಮುಖಂಡ ಮಹಮದ್ ಖಲೀಲ್ ಉರ್ ರಹಮಾನ್. ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡಿದ್ದನ್ನು ಪ್ರತಿಭಟಿಸಿ ಅವರು ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದ್ದಾರೆ.

ಎರಡು ಸಲ ಸಂಸತ್ ಸದಸ್ಯರಾಗಿದ್ದ ರಹಮಾನ್, ಬಿಜೆಪಿಯಂತಹ ಕೋಮು ವಾದಿ ಹಾಗೂ ಫ್ಯಾಸಿಸ್ಟ್ ಶಕ್ತಿಗಳ ಜತೆ ತೆಲುಗುದೇಶಂ ಕೈ ಜೋಡಿಸಿದ್ದು ದುರಾದೃಷ್ಟಕರ ಎಂದು ಹೇಳಿದ್ದಾರೆ. ಪಕ್ಷದ ನಿರ್ಧಾರ ದಿಂದಾಗಿ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳಿಗೆ, ಮತ್ತು ವಿಶೇಷವಾಗಿ ತೆಲುಗುದೇಶಂಗೆ ಸದೃಢ ಬೆಂಬಲ ನೀಡಿದ ಮುಸ್ಲಿಂ ಅಲ್ಪ ಸಂಖ್ಯಾತರಿಗೆ ವಿಶ್ವಾಸದ್ರೋಹ ಬಗೆದಂತಾಗಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಬಿಜೆಪಿಯೊಂದಿಗೆ ಕೈಜೋಡಿಸುವುದರಿಂದ ಅಪಾಯಕಾರಿ ಪರಿಣಾಮ ಉಂಟಾಗುತ್ತದೆ ಎಂದು ತಾವು ದೇಶಂನ ನಾಯಕ ಚಂದ್ರಬಾಬು ನಾಯ್ಡು ಅವರಿಗೆ ಎಚ್ಚರಿಕೆ ನೀಡಿದ್ದಾಗಿ ರಹಮಾನ್ ತಿಳಿಸಿದ್ದಾರೆ.

ಪತ್ರದ ಮೂಲಕ ಈ ಎಚ್ಚರಿಕೆ ಕೊಟ್ಟ ಮೇಲೂ ಬಿಜೆಪಿ ಕೂಟದ ಸರಕಾರಕ್ಕೆ ಬೆಂಬಲ ಕೊಡಲು ನಾಯ್ಡು ನಿರ್ಧರಿಸಿದರು. ಹೀಗಾಗಿ ಪಕ್ಷದಿಂದ ಹೊರಬರದೆ ಬೇರೆ ವಿಧಿಯಿಲ್ಲ ಎಂದಿದ್ದಾರೆ.

ರಹಸ್ಯ ಒಪ್ಪಂದ

ಲೋಕಸಭೆ ಚುನಾವಣೆಯ ಫಲಿತಾಂಶ ಹೊರಬರುತ್ತಲೇ ತೆಲುಗುದೇಶಂ ನಾಯಕರು ಮತ್ತು ಬಿಜೆಪಿ ಮಧ್ಯೆ ರಹಸ್ಯ ಒಪ್ಪಂದ ಏರ್ಪಟ್ಟಿತ್ತು ಎಂದು ರಹಮಾನ್ ಆಪಾದಿಸಿದರು. ಈ ಆರೋಪದಲ್ಲಿ ಹುರುಳಿರಲು ಸಾಧ್ಯ ಎನ್ನುವುದಕ್ಕೆ ಕೇಂದ್ರದಲ್ಲಿನ ಈಚಿನ ರಾಜಕೀಯ ವಿದ್ಯಮಾನಗಳೇ ಸಾಕ್ಷಿ.

ಇನ್ನಷ್ಟು ಜನರು ತೆಲುಗುದೇಶಂ ಪಕ್ಷಕ್ಕೆ ರಾಜಿನಾಮೆ ಕೊಡುವ ಸಾಧ್ಯತೆಯಿದೆ ಎಂದು ರಹಮಾನ್ ತಿಳಿಸಿದ್ದಾರೆ. ಇದು ತೆಲುಗು ದೇಶಂನಲ್ಲಿ ಬೀಸಲಿರುವ ಅತೃಪ್ತಿಯ ಅಲೆಯ ಒಂದು ಸೂಚನೆಯಾಗಿದೆ.

ಭಯೋತ್ಪಾದಕರ ಗುಂಡಿಗೆ ಸಿಪಿಐ(ಎಂ) ಮುಖಂಡನ ಬಲಿ

ಮನಕಲಕುವ ಆ ದೃಶ್ಯ ಪಂಜಾಬಿನಲ್ಲಿ ಸ್ವಲ್ಪ ಸಮಯದ ಹಿಂದಿನವರೆಗೆ ಭಯೋತ್ಪಾದಕರ ಕುಕೃತ್ಯಗಳಿಂದಾಗಿ ಸೃಷ್ಟಿಯಾಗುತ್ತಿದ್ದ ದೃಶ್ಯಗಳನ್ನು ಹೋಲಿಸುವಂತಿತ್ತು. ಸಿಖ್ ಭಯೋತ್ಪಾದಕರ ಅಮಾನವೀಯ ಹತ್ಯಾಕಾಂಡಗಳಿಂದಾಗಿ ಹತ್ತಾರು ಜನರ ಚಿತೆಯನ್ನು ಏಕಕಾಲಕ್ಕೆ ಹಚ್ಚಲಾಗುತ್ತಿತ್ತು. ಅಂಥದ್ದೇ ಒಂದು ಸನ್ನಿವೇಶ ಉತ್ತರ ಪ್ರದೇಶದ ಸಹರಾನ್ ಪುರ ಜಿಲ್ಲೆಯ ಗಂಗೋನಲ್ಲಿ ಸೃಷ್ಟಿಯಾಗಿತ್ತು, ಮಾರ್ಚ್ 22 ರಂದು.

ಗಢವಾಲ್ ಹಿಮಾಲಯದ ತಪ್ಪಲಿನ ತೆರಾಯಿ ವಲಯದಲ್ಲಿರುವ ಗಂಗೋನಲ್ಲಿ ನೂರಾರು ಜನರು ಶೋಕತಪ್ತರಾಗಿ ತಮ್ಮ ಊರಿನ ಮೂರು ಜನರಿಗೆ ಅಶ್ರುಪೂರ್ಣ ವಿದಾಯ ಹೇಳಿದರು. ಈಚಿನ ವರ್ಷಗಳಲ್ಲಿ ಈ ಪ್ರದೇಶದ ಭಯೋತ್ಪಾದಕರ ಚಟುವಟಿಕೆ ಹೆಚ್ಚಿದ್ದು ಆ ದುರ್ದಿನ ಮೂರು ಜನರ ಹತ್ಯಾಕಾಂಡ ನಡೆಯಿತು.

ಸಿಪಿಐ(ಎಂ) ಸಹರಾನಾಪುರ ಜಿಲ್ಲೆಯ ಪ್ರಮುಖ ನಾಯಕರಲ್ಲಿ ಒಬ್ಬರಾದ, ಕಿಸಾನ್‌ಸಭಾದ ಉತ್ತರ ಪ್ರದೇಶದ ರಾಜ್ಯ ಸಮಿತಿ ಸದಸ್ಯ ಕಾಮ್ರೇಡ್ ಹರಭಜನ್ ಸಿಂಗ್(55 ವರ್ಷ), ಅವರ 22 ವರ್ಷ ಪ್ರಾಯದ ಮಗ ಗುರುದೀಪ್‌ಸಿಂಗ್ ಹಾಗೂ ನಾದಿನಿಯ 14 ವರ್ಷದ ಪ್ರಾಯದ ಮಗಳು ಸಂದೀಪ್ ಕೌರ್ ಭಯೋತ್ಪಾದಕರ ಗುಂಡಿಗೆ ಬಲಿಯಾದರು. ಶಾಲಾ ವಿದ್ಯಾರ್ಥಿನಿ ಸಂದೀಪ್ ಕೌರ್ ರಜೆ ದಿನಗಳನ್ನು ಕಳೆಯಲು ಪಂಜಾಬಿನಿಂದ ಬಂದ ಕೇವಲ ಎರಡು ಗಂಟೆಗಳಲ್ಲಿ ದುರುಳರ ದುಷ್ಕೃತ್ಯಕ್ಕೆ ಆಹುತಿಯಾದಳು.

ರಾತ್ರಿ ಸುಮಾರು ಎರಡು ಗಂಟೆ ಹೊತ್ತಿಗೆ ಬಂದ ಭಯೋತ್ಪಾದಕರು ಕಾ. ಹರಭಜನ್ ಸಿಂಗ್‌ರ ಮನೆಯನ್ನು ಸುತ್ತುವರಿದರು. ಎಕೆ47 ಬಂದೂಕುಗಳಿಂದ ಸಜ್ಜಿತರಾಗಿದ್ದ ಆಕ್ರಮಣಕೋರರ ಪೈಕಿ ಇಬ್ಬರು ಬಾಗಿಲು ಹೊಡೆದು ಒಳಗೆ ನುಗ್ಗಿದರು. ಒಬ್ಬ ಮನೆಯ ಸೂರಿನ ಮೇಲೆ ನಿಂತುಕೊಂಡನು. ಅಪಾಯವನ್ನು ಅರಿತ ಕಾ. ಸಿಂಗ್ ಪಕ್ಕದಲ್ಲಿದ್ದ ತನ್ನ ಸೋದರನ ಮನೆಗೆ ರಹಸ್ಯ ಬಾಗಿಲಿನ ಮೂಲಕ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರು.

ಆದರೆ ಮನೆಯ ಬಗ್ಗೆ ಮೊದಲೇ ಎಲ್ಲಾ ವಿವರ ಸಂಗ್ರಹಿಸಿದ್ದ ಉಗ್ರಗಾಮಿಗಳು ರಹಸ್ಯ ಬಾಗಿಲಿನ ಬಗ್ಗೆಯೂ ಅರಿತಿದ್ದರು. ಕಾ. ಸಿಂಗ್, ಗುರುದೀಪ್ ಮತ್ತು ಮುಗ್ಧ ಬಾಲಕಿ ಸಂದೀಪ್ ಪಕ್ಕದ ಸಂಬಂಧಿಯ ಮನೆಯನ್ನು ತಲುಪಿದಾಗ ಇಬ್ಬರು ಉಗ್ರಗಾಮಿಗಳು ಅಲ್ಲಿ ಕಾಯುತ್ತಿದ್ದರು. ಇವರನ್ನು ಕಂಡ ತಕ್ಷಣವೇ ಗುಂಡಿನ ಸುರಿಮಳೆಗರೆದರು. ಮೂವರೂ ಸ್ಥಳದಲ್ಲೇ ಮೃತಪಟ್ಟರು. ಆಮೇಲೆ ಭಯೋತ್ಪಾದಕರು ಕಾಂ. ಸಿಂಗ್‌ರ ಮನೆಗೆ ಬೆಂಕಿಯಿಟ್ಟರು.

ಕಳೆದ ಡಿಸೆಂಬರ್ ಪಕ್ಷದ ಪಂಜಾಬ್ ರಾಜ್ಯ ಸಮ್ಮೇಳನದ ವೇಳೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ. ಗುಲಾಬ್‌ಸಿಂಗ್ ಅವರ ಮೇಲೆ ಗುಂಡು ಹಾರಾಟದ ಘಟನೆ ಇನ್ನೂ ಹಸಿರಾಗಿರುವಾಗಲೇ ಕಾ. ಹರಭಜನ್‌ಸಿಂಗ್‌ರ ಕೊಲೆ ನಡೆದಿದೆ. ಕಾಂ. ಗುಲಾಬ್‌ಸಿಂಗ್‌ರ ದೇಹದ ಕೆಳಭಾಗ ಪೂರ್ತಿ ನಿಷ್ಕ್ರಿಯವಾಗಿದ್ದು ಅವರೀಗ ದೆಹಲಿಯ ಒಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉನ್ನತ ಶಿಕ್ಷಣ ಪಡೆದಿದ್ದ ಸಂಗಾತಿ

ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರ(MSc)ರಾಗಿದ್ದ ಕಾ. ಹರಿಭಜನ್‌ಸಿಂಗ್ ಉನ್ನತ ಶಿಕ್ಷಣಕ್ಕಾಗಿ ಅಮೆರಿಕ, ಕೆನಡಕ್ಕೂ ಹೋಗಿದ್ದರು. ಆದರೆ, ಭಾರತಕ್ಕೆ ಮರಳಿದ ಮೇಲೆ ಅವರು ಸಿಪಿಐ(ಎಂ) ಸೇರಿ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು.

ಹರಿಭಜನ್ ಸಿಂಗ್‌ರ ಮನೆ ಅವರ ಸೋದರರು ಮತ್ತು ಹತ್ತಿರದ ಸಂಬಂಧಿಗಳ ಮನೆಗಳ ಸಮೂಹದ ಮನೆಗಳಲ್ಲಿ ಸೇರಿತ್ತು. ಅವು ಕಬ್ಬಿನ ಗದ್ದೆಯಲ್ಲಿವೆ. ಕಬ್ಬಿನ ಫಸಲು ಉಗ್ರಗಾಮಿಗಳಿಗೆ ಅಡಗಿಕೊಂಡಿರಲು ಉತ್ತಮ ಅವಕಾಶ ಕಲ್ಪಿಸಿತ್ತು.

'ದೇರಾ'ದ(ಅಂದರೆ ಮನೆಗಳ ಸಮೂಹ) ಬಳಿ ಉಗ್ರಗಾಮಿಗಳು ಅಡಗಿರುವುದನ್ನು ಕಂಡ ಕಾ. ಸಿಂಗ್‌ರ ಹತ್ತಿರದ ಬಂಧುವೊಬ್ಬ ತಕ್ಷಣವೇ ಗಂಗೋ ಪೋಲೀಸ್ ಠಾಣೆಗೆ ಧಾವಿಸಿದ ಆದರೆ ಪೋಲೀಸರು ಬರುವಷ್ಟರಲ್ಲಿ ಮೂರು ಜನರ ಹತ್ಯೆ ನಡೆದಿತ್ತು.

ಕಾ. ಸಿಂಗ್‌ರ ಸಂಬಂಧಿ ಮತ್ತು ಆರು ಪೋಲೀಸರನ್ನು ಹೊತ್ತ ಜೀಪು 'ದೇರಾ' ಸಮೀಪಿಸುತ್ತಿದ್ದಾಗ ಅದು ಉಗ್ರಗಾಮಿಗಳ ದೂರನಿಯಂತ್ರಣದಿಂದ ಸ್ಫೋಟಗೊಂಡು ಅದರಲ್ಲಿದ್ದ ಎಲ್ಲರೂ ಗಂಭೀರವಾಗಿ ಗಾಯಗೊಂಡರು.

ದೇಶದ ಏಕತೆ ಹಾಗೂ ಸಮಗ್ರತೆಗಾಗಿ ಸತತ ಹೋರಾಟ ನಡೆಸಿದ ಕಾ. ಹರಿಭಜನ್‌ಸಿಂಗ್ ಭಯೋತ್ಪಾದಕರ ಕಾಕದೃಷ್ಟಿಗೆ ಬಿದ್ದಿದ್ದರು. ಉಗ್ರಗಾಮಿ ಹಾಗೂ ಭಯೋತ್ಪಾದನೆ ಚಟುವಟಿಕೆಗಳ ವಿರುದ್ಧ ಸಿಂಗ್ ಆಂದೋಲನವನ್ನೇ ನಡೆಸಿದ್ದರು. ಅವನ್ನೆಲ್ಲಾ ನಿಲ್ಲಿಸುವಂತೆ ಇಲ್ಲದಿದ್ದರೆ ಉಗ್ರ ಪರಿಣಾಮ ಎದುರಿಸುವಂತೆ ಹಲವಾರು ಬಾರಿ ಅವರಿಗೆ ಉಗ್ರರು ಬೆದರಿಕೆ ಹಾಕಿದ್ದರು. ಆದರೆ ಅದಕ್ಕೆ ಜಗ್ಗದ ಕಾ. ಸಿಂಗ್ ತಮ್ಮ ಹೋರಾಟವನ್ನು ಮುಂದುವರಿಸಿದ್ದರು.

ಅವರಿಗೆ ಒದಗಿಸಲಾದ ಭದ್ರತಾ ವ್ಯವಸ್ಥೆಯನ್ನು ಆರು ತಿಂಗಳ ಹಿಂದೆ ವಾಪಸ್ ಪಡೆಯಲಾಗಿತ್ತು. ಇನ್ನು 'ಬೆದರಿಕೆ ಇಲ್ಲ' ಎಂಬ ಕಾರಣಕ್ಕೆ ಸರಕಾರ ಈ ಕ್ರಮ ಕೈಗೊಂಡಿತ್ತು. ಭದ್ರತಾ ವ್ಯವಸ್ಥೆಯನ್ನು ಪುನಃ ಒದಗಿಸುವಂತೆ ಕೋರಿ ಕಾ. ಸಿಂಗ್ ಮತ್ತು ಸಿಪಿಐ(ಎಂ) ಜಿಲ್ಲಾ ಸಮಿತಿ ಬಿಜೆಪಿ ಸರಕಾರಕ್ಕೆ ಮನವಿ ಅರ್ಪಿಸುತ್ತಲೇ ಇತ್ತು.

ಕಳೆದ ಕೆಲವು ದಿನಗಳಿಂದ ದುಷ್ಕರ್ಮಿಗಳು ತಮ್ಮನ್ನು ಹಿಂಬಾಲಿಸುತ್ತಿರುವುದನ್ನು ಅರಿತ ಕಾ. ಸಿಂಗ್ ಇದನ್ನು ಪೋಲೀಸ್ ಅಧಿಕಾರಿಗಳ ಗಮನಕ್ಕೂ ತಂದಿದ್ದರು. ಆದರೂ ಅವರು ಅದಕ್ಕೆ ಕ್ಯಾರೇ ಅನ್ನಲಿಲ್ಲ. ಒಟ್ಟಿನಲ್ಲಿ ಕಾ. ಹರಬಜನ್‌ಸಿಂಗ್ ಭಯೋತ್ಪಾದಕರ ಹೇಯ ಕೃತ್ಯಕ್ಕೆ ಹಾಗೂ ರಾಜ್ಯದ ಬಿಜೆಪಿ ಸರಕಾರದ ಅಲಕ್ಷ್ಯದ ನೀತಿಗೆ ಬಲಿಯಾದರು.

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ. ರಾಮಚಂದ್ರನ್ ಪಿಳ್ಳೆ, ಸಂಸತ್‌ಸದಸ್ಯ ನಿಲೋತ್ಪಲ ಬಸು, ಪಂಜಾಬ್ ರಾಜ್ಯ ಕಾರ್ಯದರ್ಶಿ ಮಂಗತ್‌ರಾಮ್ ಪಸ್ಲಾಲ, ಕೇಂದ್ರ ಸಮಿತಿ ಸದಸ್ಯ ಹರಕನ್‌ವಾಲ್ ಸಿಂಗ್ ಮೊದಲಾದವರು ಗಂಗೋಗೆ ಭೇಟಿ ನೀಡಿದ್ದರು.

'ರಾಜಕೀಯ ಕಲೆಗಾರ'ನಿಗೆ ಭಾವಪೂರ್ಣ ನಮನ

ಈಗ ದೇಶದ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಮುಂದಿರುವ ಸವಾಲುಗಳು ಹಾಗೂ ಸಂಕಷ್ಟಗಳನ್ನು ಎದುರಿಸಲಿಕ್ಕಾಗಿ ಕಾಮ್ರೇಡ್ ಇಎಂಎಸ್ ರ ಜೀವನ ಹಾಗೂ ಕೊಡುಗೆಗಳಿಂದ ಸ್ಪೂರ್ತಿಯನ್ನು ಪಡೆಯಬೇಕು...

ತ್ರಿಪುರಾದ ಸಿಪಿಐ(ಎಂ) ಹಾಗೂ ಎಡರಂಗ ನಾಯಕರು ನೀಡಿರುವ ಕರೆಯಿದು. ಕಾ. ಇಎಂಎಸ್ ನಂಬೂದಿರಿಪಾಡ್ ಅವರ ಸ್ಮರಣೆಗಾಗಿ ಸಿಪಿಐ(ಎಂ) ಸಾದರ್ ವಿಭಾಗೀಯ ಸಮಿತಿ ಮಾರ್ಚ 22 ರಂದು ಏರ್ಪಡಿಸಿದ್ದ ಸಭೆಯೊಂದರಲ್ಲಿ ಅವರು ಮಾತನಾಡುತ್ತಿದ್ದರು. ಅಗರ್ತಲಾದ ಪುರಭವನದಲ್ಲಿ ಕಿಕ್ಕಿರಿದು ಸೇರಿದ ಜನರು ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಮತ್ತು ಎಡರಂಗ ಸಂಚಾಲಕ ವೈದ್ಯನಾಥ ಮಜುಂದಾರ್ ಸಹಿತ ಹಲವು ಮುಖಂಡರು ವೀರ ಕಮ್ಯುನಿಸ್ಟ್ ನೇತಾರನ ಬಗ್ಗೆ ಮಾಡಿದ ಭಾಷಣವನ್ನು ಗಮನವಿಟ್ಟು ಆಲಿಸಿದರು.

ರಾಜ್ಯದ ಎಡರಂಗ ಮುಖಂಡರು ಇಎಂಎಸ್‌ರ ಭಾವಚಿತ್ರಕ್ಕೆ ಶ್ರದ್ಧಾಂಜಲಿ ಅರ್ಪಿಸುವುದರೊಂದಿಗೆ ಸಭೆ ಆರಂಭ ಗೊಂಡಿತು. ಕ್ರಾಂತಿಗೀತೆಗಳನ್ನು ಹಾಡಲಾಯಿತು.

ಕಳೆದ 60 ವರ್ಷಗಳಲ್ಲಿ ದೇಶದ ದುಡಿಯುವ ವರ್ಗದ ಚಳುವಳಿಯಲ್ಲಿ ಒಗ್ಗಟ್ಟು ತರುವಲ್ಲಿ, ಹೋರಾಟದಲ್ಲಿ ಶೋಷಣೆ, ಜಾತಿವಾದ ಹಾಗೂ ಕೋಮುವಾದ ವಿರೋಧಿ ಹೋರಾಟದಲ್ಲಿ ಕಾ. ಇಎಂಎಸ್ ವಹಿಸಿದ್ದ ಮಹಾಪುರ ಪಾತ್ರವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯೂ ಆದ ಕಾ. ಮಜುಂದಾರ್ ನೆನಪಿಸಿಕೊಂಡರು.

ತ್ರಿಪುರಾದ ಬುಡಕಟ್ಟು ಹಾಗೂ ಬುಡಕಟ್ಟೇತರ ದುಡಿಯುವ ಜನ ಸಮುದಾಯದ ಒಗ್ಗಟ್ಟನ್ನು ಮುರಿಯಲು ಸ್ಥಾಪಿತ ಹಿತಾಸಕ್ತಿಗಳು ಹೂಡುತ್ತಿರುವ ಪಿತೂರಿಗಳನ್ನು ಸೋಲಿಸಲು ಕಾ. ಇಎಂಎಸ್ ಅವರ ಹೋರಾಟದ ಅಂತಃಸತ್ವ ಹಾಗೂ ತಂತ್ರಗಳನ್ನು ಅಳವಡಿಸಿಕೊಳ್ಳುವುದೇ ತ್ರಿಪುರಾದ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳು ಮಹಾನ್ ನೇತಾರನಿಗೆ ಸಲ್ಲಿಸುವ ನಿಜವಾದ ಗೌರವವಾಗು ತ್ತದೆ ಎಂದು ಕಾ. ಮಜುಂದಾರ್ ಅಭಿಪ್ರಾಯಪಟ್ಟರು.

ಕೇರಳದ ಸಿಪಿಐ(ಎಂ) ನಾಯಕನ ಸ್ಥಾನ ವನ್ನು ಮೀರಿ ಕಾ. ಇಎಂಎಸ್ ಇಡೀ ರಾಷ್ಟ್ರದ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಉನ್ನತ ನಾಯಕರಾಗಿ ಹೊರಹೊಮ್ಮಿದ್ದರು ಎಂದು ಮುಖ್ಯಮಂತ್ರಿ ಕಾ. ಮಾಣಿಕ್ ಸರ್ಕಾರ್ ವಿಶ್ಲೇಷಿಸಿದರು. ಅದೇ ಹೊತ್ತಿಗೆ ತಮ್ಮ ದೂರದೃಷ್ಟಿ ಹಾಗೂ ಸೈದ್ಧಾಂತಿಕ ಸ್ಪಷ್ಟತೆ ಯಿಂದಾಗಿ ಕಾ.ಇಎಂಎಸ್ ಜಗತ್ತಿನ ಕಮ್ಯುನಿಸ್ಟ್ ಆಂದೋಲನದ ಉನ್ನತ ನಾಯಕರಲ್ಲಿ ಒಬ್ಬರಾಗಿದ್ದರು ಎಂದರು.

ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಭಾರತದ ಪರಿಸ್ಥಿತಿಗಳಿಗೆ ಅನ್ವಯಿಸುವ ವಿಚಾರವಾಗಿ ಹೇಳುವುದಾದರೆ ಕಾ. ಇಎಂಎಸ್ ಒಬ್ಬ ರಾಜಕೀಯ ಕಲಾಕಾರನಂತಿದ್ದರು ಎಂದು ಮಾಣಿಕ್ ಸರ್ಕಾರ್ ವರ್ಣಿಸಿದರು.

ಆರ್.ಎಸ್.ಪಿ. ನಾಯಕ ಮುರಾರಿ ಮೋಹನಸಭಾ, ಸಿಪಿಐ ಮುಖಂಡ ಪ್ರಶಾಂತ್ ಕಪಾಲಿ ಮತ್ತು ಫಾರ್ವರ್ಡ್ ಬ್ಲಾಕ್ ನೇತಾರ ಭಜ್‌ಗೋಪಾಲ ರಾಯ್ ಅವರೂ ಮಾತನಾಡಿ ಕಾ. ಇಎಂಎಸ್‌ರ ಆದರ್ಶಗಳನ್ನು ಪಾಲಿಸುವುದರ ಅಗತ್ಯವನ್ನು ಒತ್ತಿಹೇಳಿದರು.

ಕಲ್ಕತ್ತೆಯಲ್ಲಿನ ಶ್ರದ್ಧಾಂಜಲಿ ಸಭೆಯಲ್ಲಿ ಸುರ್ಜಿತ್ ಮತ್ತು ಜ್ಯೋತಿಬಸು



ಸರ್ಕಾರಿ ಸರ್ವೆಗಳಿಗೆ ನಿರುದ್ಯೋಗಿಗಳ ನೇಮಕಕ್ಕೆ ಡಿವೈಎಫ್ಐ ಒತ್ತಾಯ

ಸರಕಾರ ಕಾಲಕಾಲಕ್ಕೆ ಹಲವಾರು ಸರ್ವೆ ಕಾರ್ಯಗಳನ್ನು ನಡೆಸುತ್ತಿದ್ದು, ಬಾಲ ಕಾರ್ಮಿಕರ ಸಮೀಕ್ಷೆ, ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಜನಗಣತಿ, ಜಾನುವಾರು ಗಣತಿ, ಅಂಗವಿಕಲರ ಸಮೀಕ್ಷೆ, ಮತದಾರರ ಯಾದಿಗಳನ್ನು ತಯಾರಿಸುವುದು, ಕಡ್ಡಾಯ ಶಿಕ್ಷಣ ಯೋಜನೆಯ ಕೆಳಗೆ 5.6 ವರ್ಷದೊಳಗಿನ ಚಿಕ್ಕ ಬಾಲಕರ ಯಾದಿ ತಯಾರಿಸುವುದು ಇವೆಲ್ಲ ಕಾರ್ಯಗಳು ನಿರಂತರವಾಗಿ ನಡೆಯುತ್ತಿದೆ.

ನಿರಂತರವಾಗಿ ಮೇಲಿಂದ ಮೇಲೆ ನಡೆಯುತ್ತಿರುವ ಈ ಕಾರ್ಯ ನಡೆಸಲು ಪ್ರತ್ಯೇಕ ಇಲಾಖೆ ಇಲ್ಲದಿರುವುದರಿಂದ ಬೇರೆ ಇಲಾಖಾ ಮುಖ್ಯಸ್ಥರ ಮೇಲ್ವಿ ಚಾರಣೆಯಲ್ಲಿ ಸರ್ವೆ ಕಾರ್ಯ ನಡೆಸ ಲಾಗುತ್ತಿದೆ. ಶಿಕ್ಷಕರು, ಕೃಷಿ ಸಹಾಯಕರು, ಗ್ರಾಮ ಲೆಕ್ಕಿಗರು, ಅಂಗನವಾಡಿ ನೌಕರರು ಇತ್ಯಾದಿಯವರನ್ನು ನೇಮಿಸಿಕೊಳ್ಳ ಲಾಗುತ್ತದೆ.

ಸರ್ವೆಕಾರ್ಯಗಳಿಗೆ ನೇಮಕವಾದ ಸಿಬ್ಬಂದಿಗಳು ತಮ್ಮ ನಿತ್ಯದ ಕೆಲಸವನ್ನು ನಿಲ್ಲಿಸಿ ಈ ಕೆಲಸ ಮಾಡುತ್ತಾರೆ. ಇದರಿಂದ ಶಿಕ್ಷಕರಿಲ್ಲದೇ ವಿದ್ಯಾರ್ಥಿಗಳ ಬೋಧನೆಗೆ ತೊಂದರೆ ಆಗುತ್ತದೆ. ಇತರ ಅಧಿಕಾರಿ ಗಳಿಲ್ಲದೇ ಅವರ ಕಾರ್ಯಾಲಯಗಳಲ್ಲಿ ತೊಂದರೆ ಆಗುತ್ತದೆ.

ನಮ್ಮ ರಾಜ್ಯದಲ್ಲಿ ಸಾವಿರಾರು ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗ ಕ್ಕಾಗಿ ಚಡಪಡಿಸುತ್ತಿದ್ದಾರೆ. ಇಂತಹ ವಿದ್ಯಾವಂತ ನಿರುದ್ಯೋಗಿಗಳಿಗೆ ಕಾಲಕಾಲಕ್ಕೆ ನಡೆಯುವ ಸರ್ವೆ ಕಾರ್ಯ ಮಾಡಲು ನೇಮಿಸಿ ಅವರಿಗೆ ತರಬೇತಿ ನೀಡಿದ್ದಲ್ಲಿ ಸಮೀಕ್ಷೆ ಮಾಡುವಂತಹ ರಾಷ್ಟ್ರೀಯ ಕಾರ್ಯಗಳ ಬಗ್ಗೆ ಅವರಿಗೆ ಮಾಹಿತಿ ನೀಡಿ ದಂತಾಗುತ್ತದೆ. ಅವರಿಗೆ ಪ್ರೋತ್ಸಾಹಿಸಿ ದಂತಾಗುತ್ತದೆ. ಅಷ್ಟೇ ಅಲ್ಲ ಇದರಿಂದ ಶಿಕ್ಷಕರನ್ನು, ಗ್ರಾಮ ಲೆಕ್ಕಿಗರನ್ನು, ಕೃಷಿ ಸಹಾಯಕರನ್ನು, ಅಂಗನವಾಡಿ ನೌಕರರನ್ನು ಅವರ ನಿತ್ಯದ ಕಾರ್ಯದಲ್ಲೇ ಇರುವಂತೆ ಮಾಡಲು ಸಾಧ್ಯವಾಗುತ್ತದೆ ಎಂದು ಡಿವೈಎಪ್‌ಐ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಸರ್ವೆ ಕಾರ್ಯದ ಬಗ್ಗೆ ಕಾಯಂ ಸರ್ಕಾರಿ ನೌಕರರಿಗೆ ಕೊಡುವ ಸಂಭಾವನೆ ಅಥವಾ ಗೌರವಧನವನ್ನು ಸರ್ವೆ ಕಾರ್ಯ ಮಾಡಿದ ವಿದ್ಯಾವಂತ ನಿರುದ್ಯೋಗಿಗಳಿಗೆ ನೀಡುವುದರಿಂದ ಅವರ ಜೀವನೋಪಾಯಕ್ಕೆ ಸ್ವಲ್ಪ ಸಹಾಯ ಮಾಡಿದಂತಾಗುತ್ತದೆ.

ಆ ಕಾರಣ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ರಾಜ್ಯ ಸಮಿತಿ ರಾಜ್ಯಾದ್ಯಂತ ಎಲ್ಲ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಅರ್ಪಿಸಿದೆ.

ಹರಪನಹಳ್ಳಿ: ಜೆ.ಎಂ.ಎಸ್.ನಿಂದ ಹಾಡಿನ ಕಾರ್ಯಾಗಾರ

ಮಾರ್ಚ್ 15 ರಂದು ಹರಪನಹಳ್ಳಿಯಲ್ಲಿ ಜನವಾದಿ ಮಹಿಳಾ ಸಂಘಟನೆಯು ಹೋರಾಟದ ಹಾಡು ಗಳ ಕಾರ್ಯಗಾರವನ್ನು ಸಂಘಟನೆಯ ಕಾರ್ಯಕರ್ತೆಯರಿಗಾಗಿ ಸಂಘಟಿಸಿತ್ತು.

ಹಾಡುಗಳ ತರಬೇತಿ ಕಾರ್ಯಕ್ರಮವನ್ನು ಡಿ.ವೈ.ಎಫ್.ಐ ನ ಜಿಲ್ಲಾ ಸಂಚಾಲಕ ಕಾಂ|| ಕೆ. ಮಹಾಂತೇಶ್ ನಡೆಸಿಕೊಟ್ಟರು. ಹರಪನ ಹಳ್ಳಿಯ ಹತ್ತು ಘಟಕಗಳ ಸುಮಾರು 15 ಜನ ಸಂಘಟನೆಯ ಕಾರ್ಯಾಕರ್ತರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಇದೇ ತರಬೇತಿ ಶಿಬಿರದಲ್ಲಿ ಮಹಿಳಾ ಮೀಸಲಾತಿ ಕುರಿತಂತೆ ಚರ್ಚೆ ಕೂಡ ನಡೆಯಿತು. ಚರ್ಚೆಯಲ್ಲಿ ಪತ್ರಕರ್ತರಾದ ಎಲ್ಲಪ್ಪ, ಮಂಜುನಾಥ, ಅಶೋಕ್ ಹಾಗೂ ವಕೀಲರಾದ ಬಸವರಾಜ್ ಹಾಗು ಜೆ.ಎಂ.ಎಸ್ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

ಆರಂಭದಲ್ಲಿ ಜೆ.ಎಂ.ಎಸ್. ಕಾರ್ಯದರ್ಶಿ ಕಾಂ|| ಖಮರುನ್ನಿಸಾ ಬೇಗಂ ಸ್ವಾಗತಿಸಿ ಸಂಘಟನೆಯ ಬಗ್ಗೆ ಪ್ರಸ್ತಾಪಿಸಿದರು ಕೊನೆಯಲ್ಲಿ ಅಮೃತಾರವರು ವಂದಿಸಿದರು.

ಇ.ಎಂ.ಎಸ್. ಕೊಡುಗೆ ಅಪಾರ

ಮಾರ್ಚ್ 19, 1998 ರಂದು ಕಾಂ. ಇ.ಎಂ.ಎಸ್.ನಂಬೂದಿರಿಪಾಡ್‌ರು ಕೊನೆಯುಸಿರೆಳೆದರು. ತಕ್ಷಣ ಕೇರಳದಾದ್ಯಂತ ಜನತೆ ತಮ್ಮ ಎಲ್ಲಾ ವ್ಯವಹಾರಗಳನ್ನು ಸ್ವಯಂ ನಿಲ್ಲಿಸಿದರು. ಅಸಂಖ್ಯಾತ ಮಂದಿ ಕಾಂ. ಇ.ಎಂ.ಎಸ್.ರಿಗೆ ತಮ್ಮ ಅಂತಿಮ ನಮನ ಮಾಡಿದರು. ಕಮ್ಯುನಿಸ್ಟ್ ಮುಂದಾಳುಗಳು ದೇಶದ ಹಲವು ಭಾಗಗಳಿಂದ ತಿರುವನಂತಪುರಂಗೆ ಬಂದು ಮಾರ್ಚ್ 20, 1998 ರಂದು ಅಲ್ಲಿ ನಡೆದ ಅಂತಿಮಯಾತ್ರೆಯಲ್ಲಿ ಲಕ್ಷಾಂತರ ಜನರ ಜತೆ ಭಾಗವಹಿಸಿದರು. ರಾಷ್ಟ್ರಾಧ್ಯಕ್ಷರು, ಪ್ರಧಾನಿಗಳು, ಚೈನಾ ಮತ್ತು ವಿಯೆಟ್‌ನಾಮ್, ಕ್ಯೂಬಾ ಕಮ್ಯುನಿಸ್ಟ್ ಪಕ್ಷಗಳು ಸಂದೇಶ ಕಳಿಸಿದ್ದವು. ಎಲ್ಲಾ ಪಕ್ಷಗಳ ಮುಖಂಡರು 'ಸರ್ವಪಕ್ಷಗಳ ಶ್ರದ್ಧಾಂಜಲಿ ಸಭೆ' ಯಲ್ಲಿ ಭಾಗವಹಿಸಿ ತಾವು ಕಂಡ ಇಎಂಎಸ್‌ರನ್ನು ನೆನಪಿಸಿಕೊಳ್ಳುತ್ತಾ ಕಣ್ಣೀರೆರೆದು ಶ್ರದ್ಧಾಂಜಲಿ ಅರ್ಪಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕರ್ನಾಟಕ ಸಮಿತಿ ಕಾರ್ಯದರ್ಶಿ ಕಾಂ. ಪಿ.ರಾಮಚಂದ್ರರಾವ್ ರಾಜ್ಯಸಮಿತಿಯ ಪರವಾಗಿ ತಿರುವನಂತಪುರಕ್ಕೆ ಹೋಗಿ ಕಾಂ. ಇ.ಎಂ.ಎಸ್. ರಿಗೆ 'ಕೆಂಪುವಂದನೆ'ಯನ್ನು ಅರ್ಪಿಸಿದರು. ಶವಯಾತ್ರೆಯಲ್ಲಿ ಇತರ ಕಮ್ಯುನಿಸ್ಟ್ ಮುಖಂಡರೊಡನೆ ಭಾಗವಹಿಸಿದರು. ಅವರ ಹಲವು ಜೀವನದ ಒಡನಾಡಿಗಳ ಜತೆ ಇಎಂಎಸ್ ಕುರಿತು ಅನುಭವ ವಿನಿಮಯ ಮಾಡಿದರು.

ಕಾಂ. ಇಎಂಎಸ್ ಇವರ ವ್ಯಕ್ತಿತ್ವ ಅತ್ಯುನ್ನತ ಮಟ್ಟದ ವ್ಯಕ್ತಿತ್ವವಾಗಿದೆ. ಅವರ ಪ್ರತಿಭೆಗಳು ಹತ್ತು ಹಲವಾರು. ಹತ್ತಾರು ವಿಷಯಗಳಲ್ಲಿ ಸಾಕಷ್ಟು ಪರಿಶ್ರಮ ಪಟ್ಟವರು ಹಾಗೂ ಪ್ರತಿಯೊಂದರಲ್ಲಿ ತಮ್ಮ ಯೋಗದಾನವಿತ್ತವರು. ಹೀಗೆ ಇಲ್ಲಿ ಇಎಂಎಸ್ ಇವರನ್ನು ಬರಹಗಾರರೆಂದೂ, ತತ್ವಜ್ಞಾನಿಯೆಂದೂ, ಹೋರಾಟಗಾರನೆಂದೂ, ಸತತವಾಗಿ ಪತ್ರಿಕೆಗಳಿಗೆ ದಿನನಿತ್ಯ ಲೇಖನಗಳನ್ನು, ಒಕ್ಕಣೆಗಳನ್ನು ಕೊಡುವ ಭಾತ್ಮಿದಾರರೆಂದೂ ಕಲೆ, ಸಾಹಿತ್ಯ, ಇತ್ಯಾದಿಗಳ ಒಬ್ಬ ಪ್ರಸಿದ್ಧ ಟೀಕಾಕಾರ ಎಂದೂ ಜನರು ಗುರುತಿಸಿದ್ದಾರೆ.

ಕಾಂ. ಇಎಂಎಸ್ ರ ಜೀವನ ಅತೀ ಸರಳವಾಗಿತ್ತು. 'ಸರಳ ಜೀವನ ಮತ್ತು ಉತಷ್ಕ ಚಿಂತನ' ಎಂಬ ನಾಣ್ನುಡಿಗೆ ತಕ್ಕುದಾದವರು. ತಮ್ಮ ಆಸ್ತಿಯನ್ನು ಮಾರಾಟ ಮಾಡಿ ಬಂದ ಎಲ್ಲವನ್ನು ಪಕ್ಷದ 'ದೇಶಾಭಿಮಾನಿ' ದಿನ ಪತ್ರಿಕೆಗೆ ಸಮರ್ಪಿಸಿದರು. 100 ಕ್ಕೂ ಅಧಿಕ ಪುಸ್ತಕಗಳ ರಾಯಲ್ಟಿ ಹಣವನ್ನೆಲ್ಲಾ ಪಕ್ಷಕ್ಕೆ ಬರೆದುಕೊಟ್ಟವರು. ಕೊನೆಯ ಕಾಲದವರೆಗೂ ಒಂದು ಬಾಡಿಗೆ ಮನೆಯಲ್ಲಿದ್ದವರು. ತಮ್ಮ ಮಕ್ಕಳ ಮದುವೆ ವೇಳೆ ತಾವೇ ಬರೆದ ಪುಸ್ತಕಗಳನ್ನು ತಮ್ಮ ಮಕ್ಕಳಿಗೆ ಉಡುಗೊರೆಯಾಗಿ ಕೊಟ್ಟವರು.

ಜಗತ್ತಿನಲ್ಲೇ ಪ್ರಥಮವಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಕೇರಳದ ಮುಖ್ಯಮಂತ್ರಿಯಾದವರು. ಕಮ್ಯುನಿಸ್ಟ್ ಮುಖ್ಯಮಂತ್ರಿಯಾಗಿದ್ದು ಭಾರತದ ಬೆಳವಣಿಗೆ ಹೇಗಾಗಬೇಕೆಂಬುದಕ್ಕೆ ಮಾರ್ಗದರ್ಶನ ಮಾಡಿದವರು. ತೀವ್ರ ಭೂಸುಧಾರಣೆ ಮತ್ತು ಸಂಸ್ಥಾಪಕರುಗಳ ಹಿಡಿತದಿಂದ ಬಿಡುಗಡೆಯಾದ ವಿದ್ಯಾಭ್ಯಾಸದ ಮೂಲಕ ಬೆಳವಣಿಗೆ ಸಾಧ್ಯ ಎಂದು ಅವರು ತಮ್ಮ ಆಡಳಿತೆಯ ಮೂಲಕ ತೋರಿಸಿ ಕೊಟ್ಟರು. ಒಬ್ಬ ಪ್ರಭುದ್ಧ ಆಡಳಿತಗಾರ ಎಂದು ಸಾಧಿಸಿ ಕೊಟ್ಟವರು.

ಪ್ರಮುಖವಾಗಿ, ಕಾಂ. ಇಎಂಎಸ್ ಮಾರ್ಕ್ಸ್‌ವಾದವನ್ನು ಭಾರತದ ವಿಶಿಷ್ಟ ಪರಿಸ್ಥಿತಿಗೆ ಅನ್ವಯಿಸಿ ಪಕ್ಷದ ಬೆಳವಣಿಗೆಗೆ ಹಾಗೂ ಕಮ್ಯುನಿಸ್ಟ್ ಚಳುವಳಿಗೆ ಕೊಡುಗೆಗಳನ್ನು ಕೊಟ್ಟವರು.

ಒಂದು ಇ.ಎಂ.ಎಸ್. ಭಾರತದ ಕ್ರಾಂತಿಯ ಹಾದಿಯನ್ನು ಸೂಚಿಸುವ ಸಿಪಿಐ(ಎಂ) ಪಕ್ಷ ಜನತಾಪ್ರಜಾಪ್ರಭುತ್ವ ಕ್ರಾಂತಿಯ ಮೂಲಕ ಎರಡನೇ ಹಂತದಲ್ಲಿ ಸಮಾಜವಾದದೆಡೆಗೆ ಒಯ್ಯುವ ಕಾರ್ಯಕ್ರಮವನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳನ್ನು ಪರಿಗಣಿಸಿ ರೂಪಿಸಿದ ರೂವಾರಿಗಳಲ್ಲಿ ಒಬ್ಬರು. ಇದೊಂದು ಮಹತ್ವದ ಮಾರ್ಕ್ಸ್‌ವಾದಿ ಅನುಭವದ ಕೊಡುಗೆಯಾಗಿದೆ.

ಎರಡು, 'ಕೇರಳ - ಅಂದು, ಇಂದು, ನಾಳೆ' ಭಾರತದ ಚರಿತ್ರೆಯ ರೂಪುರೇಶೆಗಳು ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಎಂಬ ಚಾರಿತ್ರಿಕ ಗ್ರಂಥಗಳನ್ನು ಆಳವಾದ ಮಾರ್ಕ್ಸ್‌ವಾದಿ ಅಭ್ಯಾಸದ ಮೂಲಕ ಬರೆದು ಭಾರತದ ಲಕ್ಷೋಪಲಕ್ಷ ಕ್ರಾಂತಿಕಾರಿಗಳಿಗೆ ಪ್ರಾಯೋಗಿಕವಾಗಿ ಕ್ರಿಯಾತ್ಮಕರಾಗಲು ಸಹಾಯ ಮಾಡಿದ್ದಾರೆ.

ಮೂರು, ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆಯು ಸಮಾಜದಲ್ಲಿ ಎಲ್ಲಾ ರೀತಿಗಳ ಶೋಷಣೆ, ದಬ್ಬಾಳಿಕೆಗೆ ಒಳಗಾದ ಕಾರ್ಮಿಕರೂ ರೈತರೂ ಶೋಷಣೆ, ದಬ್ಬಾಳಿಕೆಯ ವಿರುದ್ಧ ವರ್ಗ ಸಮರಗಳನ್ನು ಹೂಡುವುದು, ಕಾಂ. ಇಎಂಎಸ್ ಭಾರತದಲ್ಲಿ ಈ ಪ್ರಜಾಪ್ರಭುತ್ವ ಚಳುವಳಿಯ ಹೋರಾಟಗಳಿಗೆ ಸೈದ್ಧಾಂತಿಕ ನೆಲೆಯನ್ನು ಒದಗಿಸಿದರು.

ನಾಲ್ಕು, ಭಾರತದ ಸಮಾಜದಲ್ಲಿ ವರ್ಗ ಮತ್ತು ಜಾತಿಗಳು ಒಂದಕ್ಕೊಂದು ಹಾಸುಹೊಕ್ಕಾಗಿರುವುದರಿಂದ ವರ್ಗಹೋರಾಟಕ್ಕೂ ಜಾತಿ ಹೋರಾಟಕ್ಕೂ ಇರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅರ್ಥೈಸುವುದು ಅತ್ಯಾವಶ್ಯಕ. ಈ ವಿಷಯದಲ್ಲಿ ಭಾರತದ ವಿಶಿಷ್ಟ ಸನ್ನಿವೇಶವನ್ನು ಅರ್ಥ ಮಾಡುವುದಕ್ಕೆ ಕಾಂ. ಇಎಂಎಸ್ ಮಾರ್ಗದರ್ಶನ ಮಾಡಿದ್ದಾರೆ.

ತಮ್ಮ ನಂಬೂದಿರಿ ಸಮಾಜದ ಹೆಣ್ಣು ಮಕ್ಕಳಿಗೆ ಜೀವನದ ಕ್ರೂರತೆಯ ವಿರುದ್ಧ ಎಲ್ಲಾ ನಂಬೂದಿರಿ ಹೆಣ್ಣು ಮಕ್ಕಳ ಹಕ್ಕುಗಳಿಗಾಗಿ ಯುವಕನಾಗಿದ್ದಾಗ ಎಲ್ಲಾ ಕಟ್ಟುಕಟ್ಟಳೆ, ಕಂದಾಚಾರ, ಅಂಧ ವಿಶ್ವಾಸ ಇತ್ಯಾದಿಗಳ ವಿರುದ್ಧ ಹೋರಾಡುತ್ತ, ದೇಶದ ಉದ್ದಗಲದಲ್ಲಿ ಸಂಚರಿಸಿ ಭಾರತದ ದುಡಿಯುವ ಜನರ ಕ್ರಾಂತಿಕಾರಿ ಹೋರಾಟಕ್ಕೆ ಮುಂದಾಳ್ತನದಲ್ಲಿ ನಿಂತವರು. ಅವರಿಗಾಗಿ ಸೈದ್ಧಾಂತಿಕ ನೆಲೆಗಳನ್ನು ಕಂಡುಕೊಂಡು ಸಾರಿದವರು.


ವಿಧಾನಸಭೆಯಲ್ಲಿ ತಮ್ಮ ಪಕ್ಷಕ್ಕೆ ಬಹುಮತವಿದ್ದಾಗ್ಯೂ ವಿಧಾನಸಭೆಯನ್ನು ವಿಸರ್ಜಿಸಿ ತಮ್ಮ ಮಂತ್ರಿಮಂಡಳವನ್ನು ಉರುಳಿಸಿದ ಪಂಡಿತ್ ಜವಾಹರಲಾಲ್ ನೆಹರೂರವರು 'ಭಾರತದ ಪ್ರಜಾಸತ್ತಾತ್ಮಕ ಚಳುವಳಿಗೆ ಕೊಡಲಿ ಏಟು ಕೊಟ್ಟಿದ್ದಾರೆ' ಎಂದು ಸಾರಿದವರು ಇಎಂಎಸ್. ಮುಂದಕ್ಕೆ ಆಂಧ್ರದಲ್ಲಿ ಎನ್.ಟಿ.ರಾಮರಾವ್ ಅವರ ಮಂತ್ರಿಮಂಡಳವನ್ನು ಅಲ್ಲಿ ಗವರ್ನರ್‌ರವರು ಕಿತ್ತು ಹಾಕಿದಾಗ, ದೇಶಾದ್ಯಂತ ಹೋರಾಟ ಮಾಡಿ ಅವರನ್ನು ಪುನಃ ಅಧಿಕಾರರೂಢರನ್ನಾಗಿ ಮಾಡಲಾಯಿತು. 'ಆಗ ನಮ್ಮ ಪಕ್ಷವು ಮಾತ್ರ ಹೋರಾಡಿತು. ಇಂದು ದೇಶದ, ಎಲ್ಲಾ ವಿರೋಧ ಪಕ್ಷಗಳು ಹೋರಾಡಲು ಸಾಧ್ಯವಾಗಿದೆ' ಎಂದು ಇಎಂಎಸ್ ಆಗ, ದೇಶದಲ್ಲಿ ಪ್ರಜಾಪ್ರಭುತ್ವ ಚಳುವಳಿಯ ಬೆಳವಣಿಗೆಯನ್ನು ಬೊಟ್ಟು ಮಾಡಿ ತೋರಿಸಿದರು.

ಕಲಾಗಾರರಿಗೆ - ಅವರು ನಾಟಕಕಾರರಾಗಲೀ, ಚಿತ್ರಗಾರರಾಗಲೀ, ಶಿಲ್ಪಿಗಳಾಗಲೀ, ಬರಹಗಾರರಾಗಲೀ, ... ಅವರಿಗೆಲ್ಲಾ ಕಾಂ. ಇಎಂಎಸ್ ಕೊಟ್ಟ ಸಲಹೆ ಒಂದೇ -'ನೀವು ಕಲಾಕೃತಿಗಳನ್ನು ಸೃಷ್ಟಿಸುವಾಗ ನಿಮ್ಮ ಕಲಾಕೃತಿಗಳು ಶೋಷಣೆಗೊಳಗಾದ ಸಮಾಜದ ಜನ ವಿಭಾಗಗಳ ಜಾಗೃತಿಯನ್ನು ಹೆಚ್ಚಿಸಲು, ಅವರಲ್ಲಿ ವಿಶ್ವಾಸವನ್ನು ಹುಟ್ಟಿಸಲು, ಅವರು ಮನುಷ್ಯರಾಗಿ ಹೋರಾಟ ಮಾಡಲು ಉದ್ಯುಕ್ತರಾಗುವುದಕ್ಕೆ ಸಹಾಯವಾಗುವಂತಾಗಲು ಬುದ್ಧಿಪೂರ್ವಕವಾಗಿ ಶ್ರಮಿಸಿರಿ ಎಂದು. ಕಲೆ ಕಲೆಗಾಗಿ ಎಂಬ ತತ್ವವು ಕಲಾಕ್ಷೇತ್ರದಲ್ಲಿ ಅನುಸರಣೀಯವಲ್ಲ ಎಂದು ಕಾ.ಇಎಂಎಸ್ ಅಭಿಪ್ರಾಯ ಪಟ್ಟರು.

ಪಿ.ರಾಮಚಂದ್ರರಾವ್

ಜೀವನದ ಕೊನೆಯ ವರ್ಷಗಳಲ್ಲಿ ಅವರು ದೇಶದ ಬೆಳವಣಿಗೆಯ ಹಿತದೃಷ್ಟಿಯಿಂದ ಹಲವು ಪ್ರಮುಖ ಚರ್ಚೆಗಳನ್ನು ನಡೆಸಿದರು. ಒಂದು ದೇಶದ ಯೋಜನೆಗಳು ನಿಜವಾಗಿ ಹಳ್ಳಿಯಿಂದ ಆರಂಭವಾಗಿ, ತಾಲೂಕು, ಜಿಲ್ಲೆ, ರಾಜ್ಯ ಹಾಗೆಯೇ ದೇಶದ ಯೋಜನೆಯಾಗಿ ಬೆಳೆಯುವ ಪ್ರಕ್ರಿಯೆಯಾಗಬೇಕು. ಎಲ್ಲಾ ಭೇದ ಭಾವಗಳನ್ನು ಬಲಿಗೊಟ್ಟು, ಎಲ್ಲಾ ಮತದಾರರು ಗ್ರಾಮಾಂತರಗಳಲ್ಲಿ ಎಂಜಿನಿಯರರು, ಆಡಳಿತಗಾರರು, ವಿಜ್ಞಾನಿಗಳು, ಇವರ ಸಹಾಯದಿಂದ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡುವ ಮೂಲಕ ಯೋಜನೆಯು ಗ್ರಾಮಮಟ್ಟದಿಂದ ತಯಾರಾಗಬೇಕು. **ಎರಡು**, ಈಶ್ವರವಾದಿಗಳೂ ನಿರೀಶ್ವರವಾದಿಗಳೂ ಶತಶತಮಾನಗಳವರೆಗೆ - ತಮ್ಮ ತಮ್ಮ ನಿಲುಮೆಗಳನ್ನು ಪ್ರತಿಪಾದಿಸುತ್ತಾ ಹೋಗುವುದು ತಪ್ಪಿದ್ದಲ್ಲ. ಆದರೆ ಈ ಪರಸ್ಪರ ಭಿನ್ನ ನಿಲುಮೆಗಳ ವ್ಯಕ್ತಿಗಳೂ ಎಲ್ಲರೂ ಒಂದೇ ಸಮಾಜದ ಭಾಗವಾದ್ದರಿಂದ ಅವರೆಲ್ಲರಿಗೂ ಸಮಾಜದ 'ಅಭಿವೃದ್ಧಿ' ಕಾರ್ಯಗಳ ಅವಶ್ಯಕತೆ ಇದೆ - ಅವರು ಈ ಅವಶ್ಯಕತೆಗಳ ಪೂರೈಕೆಗಾಗಿ ಪರಸ್ಪರ ಸಹಕಾರ ದೃಷ್ಟಿಯಿಂದ ದುಡಿಯುವುದರಿಂದ ಸಮಾಜದ ಮುನ್ನಡೆಗೆ ಬಹಳಷ್ಟು ಅನುಕೂಲವಾಗಬಹುದು ಎಂಬ ತಮ್ಮ ಅಭಿಪ್ರಾಯವನ್ನು ವಿವಿಧ ಮತಗಳ ಮುಖ್ಯಸ್ಥರ ಜತೆ ಕಾ. ಇಎಂಎಸ್ ವಿಚಾರ ವಿನಿಮಯ ಮಾಡುತ್ತಿದ್ದರು. **ಮೂರು**, ಸಾಮೂಹಿಕ ಸಂಘಟನೆಗಳು ಇಂದು ಭಾರತದಲ್ಲಿ ವಿವಿಧ ಜನವಿಭಾಗಗಳು, ಸಮರ್ಥವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಸಾಮೂಹಿಕ ಸಂಘಟನೆಗಳಾಗಿ ಬೆಳೆದು ಬರಬೇಕಾದರೆ ಇಂದು ಅವುಗಳು ಪಕ್ಷಗಳ ಬಾಲಂಗೋಚಿಗಳಂತೆ ಕಾರ್ಯವೆಸಗುವ ಪರಿಯನ್ನು ತ್ಯಜಿಸಬೇಕು, ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯವೆಸಗುವ ಸಂಘಟನೆಗಳಾಗಿ ಮಾರ್ಪಾಡು ಹೊಂದಬೇಕು ಎಂದು ಕಾಂ. ಇಎಂಎಸ್ ರವರು ಪ್ರತಿಪಾದಿಸಿದರು.

ಕಾಂ. ಇಎಂಎಸ್ 1909 ರಿಂದ 1998 ರ ವರೆಗಿನ 89 ವರ್ಷಗಳ ಕಾಲದ ದೀರ್ಘ ಜೀವನವು ಒಂದು ಸಾಗರ. ಅಪಾರವಾದ ಅನುಭವಗಳಿಂದ ಕೂಡಿದ ಜೀವನ, ನಮಗೆಲ್ಲರಿಗೂ ಮಾದರಿಯಾಗಿರುತ್ತದೆ. ಕ್ರಾಂತಿ ಪಥದಲ್ಲಿ ಕೆಲವು ಹೆಜ್ಜೆಗಳನ್ನು ಇಟ್ಟು ಮುಂದೆ ಹೋಗಲು ಖಂಡಿತವಾಗಿ ಈ ಅನುಭವಗಳು ನಮಗೆಲ್ಲರಿಗೂ ದಾರಿದೀಪವಾಗಲಿ ಎಂದು ಹಾರೈಸುತ್ತೇವೆ.



ಸಂಸ್ಕೃತಿಯ ಕುರಿತು ಕಾಂ. ಇ.ಎಂ.ಎಸ್.

ಇಎಂಎಸ್‌ರ ನಿಧನದಿಂದ ಕರ್ನಾಟಕದ ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಗೆ ಅಪಾರ ನಷ್ಟವಾದುದೇ ಅಲ್ಲದೆ 'ಸಮುದಾಯ'ದಂತಹ ಪ್ರಗತಿಪರ ಸಾಂಸತಿಕ ಆಂದೋಲನಕ್ಕೂ ತುಂಬಲಾಗದ ನಷ್ಟವುಂಟಾಗಿದೆ ಎಂದು ಹೃದಯಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತ ಕರ್ನಾಟಕದ ಈ ಪ್ರಮುಖ ಸಾಂಸತಿಕ ಸಂಘಟನೆಯ ಒಬ್ಬ ಮುಖಂಡರಾದ ಸಿ.ಆರ್.ಭಟ್ ಇಎಂಎಸ್‌ರೊಡನೆ ತಾವು ನಡೆಸಿದ ಸಂದರ್ಶನವನ್ನು ನಮಗೆ ಕಳಿಸಿದ್ದಾರೆ. 1996 ರ ಜುಲೈ 28 ರಂದು ಅವರು 'ಸಮುದಾಯ'ದ ಇನ್ನಿಬ್ಬರು ಸಂಗಾತಿಗಳಾದ ಎಂ.ಜಿ.ವೆಂಕಟೇಶ್ ಹಾಗೂ ಕೆ.ಗುಂಡಣ್ಣರವರ ಜತೆಗೆ ಇಎಂಎಸ್‌ರನ್ನು ಭೇಟಿಯಾಗಿದ್ದರು. ತಿರುವನಂತಪುರದ ಹೊರವಲಯದಲ್ಲಿರುವ ಕಿರುರಸ್ತೆಯ ಬದಿಯಲ್ಲಿನ ಪುಟ್ಟಮನೆಯಲ್ಲಿ ವಾಸಿಸುತ್ತಿದ್ದ ಇಎಂಎಸ್ ಮೊದಲೇ ಟೈಪ್ ಮಾಡಿಸಿಟ್ಟುಕೊಂಡಿದ್ದ ಈ ಸಂಗಾತಿಗಳ ಪ್ರಶ್ನೆಗಳಿಗೆ ಉತ್ತರವನ್ನು ಒಪ್ಪಿಸಿ ಆತ್ಮೀಯತೆಯಿಂದ ವಿಚಾರ ವಿನಿಮಯ ನಡೆಸಿದರು. ಇಎಂಎಸ್ ಅವರ ಪ್ರಶ್ನೆಗಳಿಗೆ ನೀಡಿದ ಕೆಲವು ಉತ್ತರಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಪ್ರ: *ಸಂಸತಿ ಮತ್ತು ಸಾಂಸತಿಕ ಆಂದೋಲನ ಎಂದರೇನು? ಅದು ಪ್ರಚಾರದಿಂದ ಹೇಗೆ ಭಿನ್ನವಾಗಿದೆ?*

ಉ: ಸಂಸತಿ ಮತ್ತು ಸಾಂಸತಿಕ ಆಂದೋಲನವನ್ನು ವಿಶಾಲ ದೃಷ್ಟಿಯಿಂದ ಮತ್ತು ಸೀಮಿತ-ಹೆಚ್ಚು ಜನಪ್ರಿಯ ದೃಷ್ಟಿಯಿಂದ ಅರ್ಥೈಸಲಾಗುತ್ತದೆ. ವಿಶಾಲದೃಷ್ಟಿಯಲ್ಲಿ ಮಾನವನ ಎಲ್ಲಾ ಬೌದ್ಧಿಕ ಮತ್ತು ಕಲಾತ್ಮಕ ಚಟುವಟಿಕೆಗಳನ್ನು ಒಳಗೊಂಡಿರುವುದು. ಇದರಿಂದಾಗಿಯೇ ಮಾನವನು ಪ್ರಾಣಿಗಳಿಂದ ವಿಭಿನ್ನವಾಗಿರುವುದು. ಸೀಮಿತ ಮತ್ತು ಹೆಚ್ಚು ಜನಪ್ರಿಯ ದೃಷ್ಟಿಯಿಂದ ಹೇಳುವುದಾದರೆ, ಸಂಸತಿ ಮತ್ತು ಸಾಂಸತಿಕ ಆಂದೋಲನವು ಕೇವಲ ಕಲೆ ಮತ್ತು ಸಾಹಿತ್ಯವನ್ನು ಒಳಗೊಂಡಿರುತ್ತದೆ. ಸಾಮಾನ್ಯ ದೃಷ್ಟಿಕೋನದಿಂದ ಎರಡೂ ಪ್ರಚಾರಕ್ಕೆ ಸಂಬಂಧಿಸಿದವುಗಳೇ ಆಗಿವೆ. ಅವುಗಳು ಜನರ ಮಧ್ಯೆ ಆಳುವವರ ಮತ್ತು ಆಳಲ್ಪಡುವವರ ವಿಚಾರಗಳನ್ನು ಪ್ರಚಾರ ಮಾಡುತ್ತವೆ. ಆದರೆ, ಸಂಸತಿಯ ಮೂಲಕ ಪ್ರಚಾರವನ್ನು ಪ್ರಜ್ಞಾಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಮಾಡಲಾಗದೇ ಇರಬಹುದು.

ಪ್ರ: *ಸಂಸತಿ ಮತ್ತು ಧರ್ಮ ಇವುಗಳ ಮಧ್ಯೆ ಇರುವ ಮೂಲಭೂತ ವ್ಯತ್ಯಾಸಗಳೇನು? ಇವೆರಡನ್ನು ಪ್ರತ್ಯೇಕಿಸಬಹುದೇ? ಉದಾ: ಹಿಂದೂ ಸಂಸತಿ ಮತ್ತು ಹಿಂದೂ ಧರ್ಮ?*

ಉ: ಸಂಸತಿಯು ಸರ್ವಸಾಮಾನ್ಯವಾಗಿ ಜಾತ್ಯಾತೀತ - ಧರ್ಮನಿರಪೇಕ್ಷಿತವಾಗಿದೆ. ಅದು ಜನಜೀವನದ ಸಮಸ್ಯೆಗಳ ಕುರಿತು ಚಿಂತನೆ ಮಾಡುತ್ತದೆ. ಅದರ ಬದಲು ಧರ್ಮವು ಮಾನವನ ಮತ್ತು ದೇವರ ನಡುವಿನ ಸಂಬಂಧದ ಕುರಿತಾದ ಸಮಸ್ಯೆಗಳನ್ನು ಚಿಂತನೆ ಮಾಡುತ್ತದೆ. ಇವೆರಡನ್ನೂ ಪ್ರತ್ಯೇಕಿಸಬಹುದು. ಹಿಂದೂ ಸಂಸತಿಯನ್ನು ಹಿಂದೂಧರ್ಮದಿಂದ ಪ್ರತ್ಯೇಕಿಸಬಹುದು. ಆಗ ಅದು ಜಾತ್ಯಾತೀತ - ಧರ್ಮನಿರಪೇಕ್ಷಿತ ಸಂಸತಿಯಾಗುವುದು.

ಪ್ರ: *ಜನಪ್ರಿಯ, ಜನಪರ ಮತ್ತು ಪ್ರಗತಿಪರ ಸಾಂಸತಿಕ ಆಂದೋಲನಗಳೆಂದರೇನು?*

ಉ: ಜನಪ್ರಿಯ ಸಂಸತಿಯು ಸಾಮಾನ್ಯಜನರಿಂದ ಮೆಚ್ಚಲ್ಪಡುವುದೇ ಅಲ್ಲದೆ ಸೃಷ್ಟಿಸಲ್ಪಡಲೂ ಬಹುದು. ಜನಪರ ಸಂಸತಿಯು ಜನರ ಸಂಸತಿ ಆಗಬೇಕಾಗಿಲ್ಲ. ಅದು ಜನರಿಗಾಗಿ ಇರಬೇಕಾದದ್ದು. ಪ್ರಗತಿಪರ ಸಾಂಸತಿಕ ಆಂದೋಲನವು ಪ್ರಗತಿಪರ ಧ್ಯೇಯೋದ್ದೇಶಗಳಿಗಾಗಿ ಸಂಸತಿಯ ಎಲ್ಲಾ ಆಯಾಮಗಳನ್ನು ಬಳಸುವುದಾಗಿದೆ. ಆದರೆ, ಹೆಚ್ಚಿನ ಸಾಂಸತಿಕ ಕಾರ್ಯಕರ್ತರಿಗೆ ತಮ್ಮ ಕೃತಿಗಳ ಪುರೋಗಾಮಿ ಗುಣಲಕ್ಷಣಗಳ ಕುರಿತು ಪ್ರಜ್ಞೆ ಇಲ್ಲದಿರಬಹುದು.

ಪ್ರ: *ಸಾಂಸತಿಕ ಆಂದೋಲನವು ಇತರ ಸಾಮೂಹಿಕ ಆಂದೋಲನಗಳಾದ - ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನ, ಮಹಿಳಾ... ಹೇಗೆ ಭಿನ್ನವಾಗಿದೆ?*

ಉ: ಕಾರ್ಮಿಕ ಮತ್ತು ರೈತ ಆಂದೋಲನಗಳು ಬಂಡವಾಳಶಾಹಿ ಮತ್ತು ಭೂಮಾಲಕರ ವಿರುದ್ಧದ ವರ್ಗ ಆಂದೋಲನಗಳು. ವಿದ್ಯಾರ್ಥಿ, ಯುವಜನ ಮತ್ತು ಮಹಿಳಾ ಆಂದೋಲನಗಳು ವರ್ಗ ಆಂದೋಲನಗಳಲ್ಲ. ಬದಲು ಅವುಗಳು ಸಂಬಂಧಪಟ್ಟ ಜನ ವಿಭಾಗಗಳ ಸಮಸ್ಯೆಗಳ ಕುರಿತಾಗಿವೆ. ಈ ಜನ ವಿಭಾಗಗಳು, ಪಾಳೆಯಗಾರಿ ಮತ್ತು ಬಂಡವಾಳಶಾಹಿ ವರ್ಗಗಳೂ ಸೇರಿದಂತೆ, ಎಲ್ಲಾ ವರ್ಗಗಳಿಂದ ಬಂದಿರಬಹುದು.

ಪ್ರ: *ಸಾಂಸತಿಕ ಆಂದೋಲನವನ್ನು ನಡೆಸಿಕೊಂಡು ಹೋಗಲು ಸಂಘಟನಾ ಸಂರಚನೆಯು ಅಗತ್ಯವಿದೆಯೇ? ಅಗತ್ಯವಿದ್ದರೆ, ಅದು ಕಲೆ ಸಾಹಿತ್ಯದಲ್ಲಿ ವಸ್ತುಗಳ ಹಾಗೂ ರೂಪಗಳ ಆಯ್ಕೆಯಲ್ಲಿ ಒಬ್ಬನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಲ್ಲುದೇ?*

ಉ: ಸಾಂಸತಿಕ ಆಂದೋಲನದ ಬೆಳವಣಿಗೆಗೆ ಸಂಘಟನೆಯ ಸಂರಚನೆಯು ಉಪಯುಕ್ತವಾಗುವುದು. ಅಂತಹ ಸಂಘಟನಾ ಸಂರಚನೆಯು ಐಚ್ಛಿಕವಾದುದರಿಂದ ಯಾರೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಾರದು. ಇದರಲ್ಲಿ ಸಂಘಟನಾ ಶಿಸ್ತಿನ ಪ್ರಶ್ನೆ ಬರುವುದಿಲ್ಲ.

ಪ್ರ: *ಸಾಂಸತಿಕ ಧೋರಣೆಯ ಒಂದು ಸ್ಥೂಲ ದೃಷ್ಟಿಕೋನ ರೂಪಿಸಿಕೊಳ್ಳಲು ಅಖಿಲ ಭಾರತ ಮಟ್ಟದಲ್ಲಿ ಎಲ್ಲಾ ಪುರೋಗಾಮಿ ಸಾಂಸತಿಕ ಸಂಘಟನೆಗಳ ನಡುವೆ ವಿಶಾಲ ತಳಹದಿಯಲ್ಲಿ ಸಮನ್ವಯ ಸಮಿತಿ ಬೇಡವೇ?*

ಉ: ಎಲ್ಲಾ ಪುರೋಗಾಮಿ ಸಾಂಸತಿಕ ಸಂಘಟನೆಗಳ ನಡುವೆ ರಾಷ್ಟ್ರೀಯ ಮಟ್ಟದಲ್ಲಿ ವಿಶಾಲ ತಳಹದಿಯಲ್ಲಿ ಸಮನ್ವಯ ಏರ್ಪಡಿಸಿಕೊಳ್ಳುವುದು ಸಾಧ್ಯವಿಲ್ಲ ಮತ್ತು ಅಗತ್ಯವಿಲ್ಲ ಎಂದು ನನಗನಿಸುವುದು. ನಾವು ಏನು ಮಾಡಬಹುದು ಎಂದರೆ ವಿವಿಧ ರಾಜ್ಯಗಳ ಸಾಂಸತಿಕ ಸಂಘಟನೆಗಳೊಂದಿಗೆ ನಿರಂತರ ಸಂಪರ್ಕ ಹಾಗೂ ವಿಚಾರ ವಿನಿಮಯ ನಡೆಸುತ್ತಿರಬಹುದು. ಭಾರತದ ಸನ್ನಿವೇಶದಲ್ಲಿ, ಯಾವುದೇ ರಾಜ್ಯದ ಸಂಸ್ಕೃತಿಯು ಆ ರಾಜ್ಯದ ರಾಷ್ಟ್ರೀಯತೆಯನ್ನು ಪ್ರತಿಬಿಂಬಿಸುತ್ತದೆ. ನಮ್ಮದು ಬಹುರಾಷ್ಟ್ರೀಯ ದೇಶವಾಗಿದೆ. ಆದುದರಿಂದಲೇ ಇಡೀ ದೇಶಕ್ಕೆ ಏಕರೂಪದ ರಾಷ್ಟ್ರೀಯ ಸಾಂಸತಿಕ ಧೋರಣೆ ಇರಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೂ ಸ್ವಲ್ಪಮಟ್ಟಿಗೆ ಸಮನ್ವಯಕ್ಕಾಗಿ ಪ್ರಯತ್ನಿಸಲಾಗಿತ್ತು. ಉದಾ: ಇಪ್ಟಾ, ಪುರೋಗಾಮಿ ಬರಹಗಾರರ ಸಂಘ... ಆದರೆ, ಸಮನ್ವಯ ಯಶಸ್ವಿಯಾಗಲಿಲ್ಲ. ಏನಾದರೂ ಸ್ವಲ್ಪ ಆಗಿದ್ದರೂ ಅದು ಕೆಲವೇ ರಾಷ್ಟ್ರೀಯತೆಗಳಿಗೆ ಸೀಮಿತವಾಗಿತ್ತು. ಮುಂದೆ ಸ್ವಾತಂತ್ರ್ಯದ ಸುವರ್ಣ ಉತ್ಸವದ ಸಂದರ್ಭ ರಾಜ್ಯಗಳಲ್ಲಿ ಪರಸ್ಪರ ಸಾಂಸತಿಕ ಕಾರ್ಯಕ್ರಮಗಳನ್ನು ವಿನಿಮಯ ಮಾಡಿಕೊಳ್ಳಬಹುದು.

ಪ್ರ: *ಕಾರ್ಮಿಕ ವರ್ಗದ ಪಕ್ಷ ಮತ್ತು ಸಾಂಸತಿಕ ಆಂದೋಲನದ ನಡುವಿನ ಸಂಬಂಧವನ್ನು ನೀವು ಪುನಃ ಸ್ಪಷ್ಟೀಕರಿಸಿ ಹೇಳಬಹುದೇ?*

ಉ: ಪಕ್ಷದ ಯಶಸ್ವಿಗೆ ಸಾಮೂಹಿಕ ಆಂದೋಲನಗಳು, ಸಾಮೂಹಿಕ ಹೋರಾಟಗಳು, ಪುರೋಗಾಮಿ ಸಾಂಸತಿಕ ಆಂದೋಲನಗಳು ಅಗತ್ಯವಾಗಿದೆ. ಆದರೆ, ಸಾಂಸತಿಕ ಆಂದೋಲನವು ಸಾಮೂಹಿಕ ಆಂದೋಲನಕ್ಕಿಂತ ಪ್ರತ್ಯೇಕವಾಗಿದೆ. ಸಂಸತಿಗೆ ತನ್ನದೇ ಆದ ಪ್ರತ್ಯೇಕ ಕಾರ್ಯ ಚಟುವಟಿಕೆಗಳ ಕ್ಷೇತ್ರವಿದೆ. ಅದೇ ಹೊತ್ತಿಗೆ, ಅದು ಸಾಮೂಹಿಕ ಆಂದೋಲನದಿಂದ ಸ್ವತಂತ್ರವಲ್ಲ ಮತ್ತು ಸಾಮೂಹಿಕ ಆಂದೋಲನದ ಕುರಿತು ಅದು ನಿರ್ಲಿಪ್ತವಾಗಿರುವುದು ಸಾಧ್ಯವಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ ಸಾಂಸತಿಕ ಆಂದೋಲನವು ಸಾಮೂಹಿಕ ಆಂದೋಲನವನ್ನು ತಿರಸ್ಕರಿಸುವಂತಿಲ್ಲ. ಆಂಧ್ರ ಮತ್ತು ಕೇರಳದಲ್ಲಿ ಈ ಎರಡೂ ಆಂದೋಲನಗಳು ಪರಸ್ಪರ ಪೂರಕವಾಗಿವೆ. ಕರ್ನಾಟಕದಲ್ಲಿ ಮಾತ್ರ ಸಾಂಸತಿಕ ಆಂದೋಲನವು ರಾಜಕೀಯ ಆಂದೋಲನಕ್ಕಿಂತ ಸ್ವಲ್ಪ ಮುಂದೆ ಹೋಗಿದೆ. ಸಾಂಸತಿಕ ಆಂದೋಲನದ ಅಭಿವೃದ್ಧಿ ರಾಜಕೀಯ ಆಂದೋಲನವನ್ನು ಬಲಪಡಿಸುವಂತಿರಬೇಕು. ಇದನ್ನು ಯಶಸ್ವಿಯಾಗಿ ಹೇಗೆ ಮಾಡುವುದು ಎಂದು ಸಾಂಸತಿಕ ಆಂದೋಲನವೇ ತೀರ್ಮಾನಿಸಬೇಕು.

ಹೆಚ್ಚುತ್ತಿರುವ ರಾಜಕೀಯ ಭ್ರಷ್ಟಾಚಾರ ರಾಷ್ಟ್ರದ ಪ್ರಗತಿಗೆ ಎಡ ಚಳುವಳಿಗೆ ಮಾರಕವಾಗುತ್ತಿದೆ

ಚುನಾವಣಾ ಮಂಡಳಿಯ (Commission) ಕಟ್ಟು ನಿಟ್ಟಾದ ನಿರ್ದೇಶನ ಹಾಗೂ ಅದರಿಂದ ನಿಯೋಜಿಸಲ್ಪಟ್ಟವರ ತಪಾಸಣೆ ಸಾಕಷ್ಟು ಹೆಚ್ಚಾಗಿರುವಾಗಲೇ ಬಂಡವಾಳಶಾಹಿ ರಾಜಕೀಯಪಕ್ಷದ ಅಭ್ಯರ್ಥಿಗಳ ಲೋಕಸಭಾ ಚುನಾವಣಾ ವೆಚ್ಚ ಹೆಚ್ಚಾಗಿದೆ ಎಂಬುದು ವಿಪರ್ಯಾಸವಾದರೂ ಕಹಿ ಸತ್ಯವಾಗಿದೆ. ಅಭ್ಯರ್ಥಿಯೊಬ್ಬ ಸಾಮಾನ್ಯವಾಗಿ ಒಂದು ಕೋಟಿಯಿಂದ ಮೂರು ಕೋಟಿಯವರೆಗೆ ಖರ್ಚುಮಾಡಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿ ತನ್ನ ಪಕ್ಷದ ಕಾರ್ಯಕರ್ತರಿಗೆ ವಾಹನ, ಪ್ರಚಾರ ಸಾಮಗ್ರಿಗಳಿಗೆ ಖರ್ಚುಮಾಡಿದುದನ್ನು ಅಂದಾಜು ಮಾಡುವುದೇ ಕಷ್ಟ. ಚುನಾವಣೆಯ ಕೊನೆಯ ಎರಡು ದಿನದಲ್ಲಿ ಮತದಾರರಿಗೆ ನೇರವಾಗಿ ಕೆಲವೆಡೆ ಹಣ, ಹೆಂಡ, ಸರಾಯಿ, ವಿಸ್ಕಿ,(ವಿಭಿನ್ನ ಗುಂಪಿನ ಆಧಾರದಲ್ಲಿ) ಹಂಚುವುದು, ಇನ್ನು ಕೆಲವೆಡೆ, ಗುಡಿ ಗುಡಾರಗಳಿಗೆ ಹಣ ಮೈಕ್ ಸೆಟ್, ಭಜನಾ ಸೆಟ್ಟುಗಳಿಗೆ ಹಣ ಕೊಡುವುದೂ ಸೇರಿದಂತೆ ಬೂತಿನ ಖರ್ಚಿಗಾಗಿ ಒಂದು ವಿಧಾನ ಸಭಾ ಕ್ಷೇತ್ರದಲ್ಲಿ ನೂರರಿಂದ ನೂರಿಪ್ಪತ್ತು ಬೂತುಗಳಿದ್ದು ಪ್ರತಿ ಬೂತಿಗೆ 3000 ದಿಂದ 5000/ ರೂ ವೆಚ್ಚಮಾಡಲಾಗುತ್ತಿದೆ. ಆದರೆ ಸಾಮಾನ್ಯವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಐದು ಲಕ್ಷವಾದರೆ ಏಳರಿಂದ ಎಂಟು ವಿಧಾನ ಸಭಾ ಕ್ಷೇತ್ರಗಳಿಗೆ 35 ರಿಂದ 40 ಲಕ್ಷ ವೆಚ್ಚಮಾಡಲಾಗುತ್ತದೆ.

ಚುನಾವಣಾ ವೆಚ್ಚ ಯಾಕೆ ಹೆಚ್ಚಾಗುತ್ತಿದೆ

ಚುನಾಯಿತ ಜನ ಪ್ರತಿನಿಧಿಗಳು ಮುಂದೆ ಮತ್ತೊಂದು ಚುನಾವಣೆ ಬರುವವರೆಗೆ ಮತದಾರನಿಗೆ ಸಿಗುವುದಿಲ್ಲ. ಎರಡನೇದಾಗಿ ಹಲವಾರು ಹಾದಿಯಿಂದ ಅಪಾರ ಸಂಪತ್ತನ್ನು ಗಳಿಸಿ ತಮ್ಮ ಜೀವನ ಕ್ರಮವನ್ನೇ ಬದಲಾಯಿಸಿಕೊಳ್ಳುತ್ತಿದ್ದಾರೆ.

ಇದರಿಂದಾಗಿ ಮತದಾರರು ಚುನಾವಣೆ ನಂತರ ಕೈಗೆ ಸಿಕ್ಕುವದಿಲ್ಲ, ಯಾವುದಕ್ಕೂ ಅವರು ಪ್ರಯೋಜನವಾಗುವುದಿಲ್ಲವೆಂಬ ಕಾರಣದಿಂದ, ಚುನಾವಣೆ ಬಗ್ಗೆ ಜಿಗುಪ್ಸೆ ಬಂದಿದೆ,ಕಾರಣ ಹಣವಾಗಲಿ, ಗ್ರಾಮಕ್ಕೆ ಯಾವುದಾದರು ಕಾಣಿಕೆಯನ್ನಾಗಲಿ ಮತದಾರರು ಕೇಳುತ್ತಾರೆ. ಇನ್ನು ಕೊಡಲೇ ಬೇಕೆಂಬ ಭಾವನೆ ಬೆಳೆದು ಬರಲಿಕ್ಕೆ ಚುನಾಯಿತರಾಗಿ ದುಡ್ಡು ಮಾಡುತ್ತಾರೆಂಬುದು ಸಾಮಾನ್ಯ ನಂಬಿಕೆಯಾಗಿದ್ದು ರಾಜಕೀಯ ಭ್ರಷ್ಟಾಚಾರದಿಂದ ಬಂದ ಹಣದಲ್ಲಿ ಒಂದು ಪಾಲು ಯಾಕೆ ನಮಗೆ ಕೊಡಬಾ ರದೆಂಬ ಭಾವನೆ ಬೆಳೆಸಿಕೊಳ್ಳುವ ಮುಖಾಂತರ ಅಪ್ರತ್ಯಕ್ಷವಾಗಿ ಭ್ರಷ್ಟಾ ಚಾರಕ್ಕೆ ಮತದಾರರು ಪ್ರೋತ್ಸಾಹ ನೀಡುವಂತಾಗಿದೆ.

ರಾಜಕೀಯ ಭ್ರಷ್ಟಾಚಾರದ ವಿಭಿನ್ನ ಮುಖಗಳು

ಮೇಲ್‌ಸ್ಥರದ ರಾಜಕೀಯ ಭ್ರಷ್ಟಾಚಾರ (ಸ್ಕಾಮ್) ಗಳು ಸಾಮಾನ್ಯ ಮತದಾರರನ್ನು ಪ್ರಭಾವಗೊಳಿಸುವದಕ್ಕಿಂತ, ಕೆಳಹಂತದ ಭ್ರಷ್ಟಾಚಾರಗಳು ಅವರ ಕಣ್ಣು ಮುಂದೆ ನಡೆಯುತ್ತಿದ್ದು ಅರ್ಥಮಾಡಿಕೊಳ್ಳಲು ಸುಲಭವಾಗಿವೆ. ಅವುಗಳನ್ನು ನೋಡಿ ಪ್ರತಿಭಟನೆಗಿಂತಲೂ ಜಿಗುಪ್ಸೆಯನ್ನು ಬೆಳೆಸಿಕೊಂಡಿದ್ದಾರೆ.

ಲೋಕಸಭಾ ಸದಸ್ಯರಿಗೆ ಪ್ರತಿ ವರ್ಷಕ್ಕೆ ಒಂದುಕೋಟಿ ಹಣ ಕೇಂದ್ರ ಸರಕಾರದಿಂದ ಬರುತ್ತಿದ್ದು ಆದರಲ್ಲಿ 20 ಭಾಗ ಕಾಮಗಾರಿ ಪಡೆದವರು ಲಂಚ ಕೊಡುತ್ತಾರೆ. ಅಂದರೆ ಇದು ಕೋಟ್ಯಾಂತರದಲ್ಲಿ ಜಮವಾಗುತ್ತದೆ.

ರಾಜಕೀಯ ಭ್ರಷ್ಟಾಚಾರ ಹೆಚ್ಚು ಸ್ಪಷ್ಟವಾಗಿ ಕಾಣುವುದು ವಿಧಾನಸಭಾ ಸದಸ್ಯರ, ಜಿಲ್ಲಾ ಪಂಚಾಯತಿ, ತಾಲೂಕಾ ಪಂಚಾಯತಿ ಸದಸ್ಯರ ಗ್ರಾಮ ಪಂಚಾಯತಿ ಅಧ್ಯಕ್ಷರ ಹಂತದಲ್ಲಿ.

ಚುನಾವಣಾ ಲೆಕ್ಕ ಮರಳಿ ಜಮಾ

ವಿಧಾನಸಭಾ ಸದಸ್ಯ ಚುನಾಯಿತರಾಗಿ ಬಂದ ತಕ್ಷಣ ಎಲ್ಲಾ ಇಲಾಖೆಯ ಮುಖ್ಯಸ್ತರನ್ನು ಅದರಲ್ಲೂ ವಿಶೇಷವಾಗಿ ಹೆಚ್ಚು ಹಣದ ಚಲಾವಣೆ ನಡೆಸುವ ಇಲಾಖೆಯ ಮುಖ್ಯಸ್ತರನ್ನೆಲ್ಲಾ ವರ್ಗಾಯಿಸಿ ಶಾಸಕರ ಜಾತಿಯವರನ್ನು ಇಲ್ಲವೇ ಸಂಬಂಧಿಗಳಿದ್ದರೆ ಅಂತಹವರನ್ನು ಆ ಸ್ಥಳಗಳಿಗೆ ತರಲಾಗುತ್ತದೆ. ಅಂದರೆ ತಹಸೀಲ್ದಾರ್, ಬಿ.ಡಿ.ಓ, ತಾಲೂಕಾ ಪಂಚಾಯತ್ ಎಕ್ಸಿಕ್ಯೂಟಿವ್ ಆಫೀಸರ್, ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಅಸಿಸ್ಟೆಂಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಜೂನಿಯರ್ ಇಂಜಿನಿಯರ್ಸ್, ಪಿ.ಡಬ್ಲುಡಿ/ ಜಿಲ್ಲಾ ಪಂಚಾಯತ್/ ತಾಲೂಕು ಪಂಚಾಯತ್/ ಕಿರು ನೀರಾವರಿ ಇಲಾಖೆಗಳು / ಕೃಷಿ ಅಧಿಕಾರಿ/ ಸಬ್ ರಿಜಿಸ್ಟ್ರಾರ್ ಗಳನ್ನೊಳಗೊಂಡು ಕನಿಷ್ಟ 25000 ರೂ ನಿಂದ 50000, ಕೆಲವೆಡೆ ಒಂದು ಲಕ್ಷದವರೆಗೆ ಹಣ ಪಡೆದು ವರ್ಗಾಯಿಸಿ ಕೊಳ್ಳಲಾಗುತ್ತದೆ. ಅಂದರೆ ಒಣ ಬೇಸಾಯ ಪ್ರದೇಶವಾಗಿದ್ದರೆ ಐದರಿಂದ ಎಂಟು ಲಕ್ಷ ನೀರಾವರಿ ಪ್ರದೇಶವಾಗಿದ್ದರೆ ಹತ್ತರಿಂದ ಇಪ್ಪತ್ತು ಲಕ್ಷ ದಷ್ಟು ಚುನಾವಣೆಗಾಗಿ ಮಾಡಿದ ವೆಚ್ಚ ಮರಳಿ ಜಮಾ ಅಗುತ್ತದೆ.

ಚಂದ್ರಶೇಖರ ಬಾಳೆ

ಶಾಸಕರು ಒಂದು ತಾಲೂಕಿ(ಕ್ಷೇತ್ರ)ನ ಪ್ರಶ್ನಾತೀತ ಪಾಳೇಗಾರಿ ಮಹಾರಾಜರಿದ್ದಂತೆ. ಯಾವುದೇ ಇಲಾಖೆಯ ಸಾಮಾನ್ಯ ಕಾರಕೂನನನ್ನು ವರ್ಗಾವಣೆ ಮಾಡಲು ಇವರನ್ನು ಕೇಳಬೇಕು. ಅಂದರೆ ಅವರಿಗೆ ನೌಕರನ ಸಂಬಳ ಹಾಗೂ ಗಿಂಬಳ(ಲಂಚ) ದ ಒಟ್ಟು ಆದಾಯದ ಆಧಾರದಲ್ಲಿ ಲಂಚ ಕೊಡಬೇಕಾಗುತ್ತದೆ.

ರಸ್ತೆ ಕಟ್ಟಡ ಸೇರಿದಂತೆ ತಾಲೂಕಿನ ಅಭಿವೃದ್ಧಿಗಾಗಿ ಬಂದ ಯಾವದೇ ಹಣದಿಂದ ಅಧಿಕಾರಿಗಳಿಂದ ಇಲ್ಲವೇ ಗುತ್ತಿಗೆ ಪಡೆದವರಿಂದ 10ರಿಂದ 20 ಶೇಕಡಾ ನೀಡಬೇಕಾಗುತ್ತದೆ ಅಂದರೆ ಒಂದು ಕೋಟಿ ಹಣ ಬಂದಿದ್ದರೆ ಶಾಸಕರಿಗೆ ಹತ್ತರಿಂದ ಇಪ್ಪತ್ತು ಲಕ್ಷ ಸಂದಾಯವಾಗುತ್ತದೆ.

ಇದಲ್ಲದೆ ಶ್ರೀಮಂತರು ತಮ್ಮ ಖಾಸಗೀ ಕೆಲಸಕ್ಕಾಗಿ ವಶೀಲಿ ಪಡೆಯಲು ನಿಗದಿತ ಮೊತ್ತವನ್ನು ಕೊಡಬೇಕಾಗುತ್ತದೆ. ಇಂತಹ ಕೆಲಸಗಳಿಗಾಗಿ ಒಬ್ಬೊಬ್ಬರು ಶಾಸಕರ ಸಹಾಯಕರಿರುತ್ತಾರೆ.

ಈ ಮೇಲಿನ ರಾಜಕೀಯ ಭ್ರಷ್ಟಹಣ ಕ್ರೋಢಿಕರಿಸುವುದಕ್ಕಾಗಿಯೇ ಸಮಯದ ಅಭಾವವಾಗಿ ಮತದಾರರ ಸಮಸ್ಯೆಗಳನ್ನು ಕೇಳಲು ಹೇಳಲು ಸಮಯ ದೊರೆಯದಂತಾಗುತ್ತದೆ. ಹೀಗಾಗಿ ಜಮಾ ಮಾಡಿದ ಕೊಟ್ಯಾಂತರ ಹಣದಲ್ಲಿ ಹತ್ತಿಪ್ಪತ್ತು ಲಕ್ಷ ವೆಚ್ಚಮಾಡಿ ಮತದಾರರನ್ನು ಭ್ರಷ್ಟಗೊಳಿಸಿ ಆಯ್ಕೆಯಾಗುತ್ತಾರೆ, ಸೋತು ಹೋದರೆ ಮತ್ತೊಂದು ಚುನಾವಣೆಗಾಗಿ ಕಾಯುತ್ತಾರೆ.

ರೂಪಾಯಿಯಲ್ಲಿ 30 ಪೈಸೆ ಮಾತ್ರ

ಅಂದರೆ ಒಂದು ತಾಲೂಕಿಗೆ ಬರುವ ಒಂದು ರೂಪಾಯಿಯಲ್ಲಿ ಹತ್ತರಿಂದ ಇಪ್ಪತು ಪೈಸೆಯಂತೆ ಶಾಸಕರಿಗೆ ಜಿಲ್ಲಾ ಪಂಚಾಯತ್ ಸದಸ್ಯರಿಗೆ ತಾಲೂಕು ಪಂಚಾಯತ್ ಸದಸ್ಯರಿಗೆ ಗ್ರಾಮಪಂಚಾಯತ್ ಅಧ್ಯಕ್ಷರಿಗೆ ಅಧಿಕಾರಿಗಳಿಗೆ ಪರ್ಸೆಂಟೇಜ ಕೊಟ್ಟಾದ ನಂತರ ಉಳಿದ ಹಣದಲ್ಲಿ ಕಾಮಗಾರಿ ಮಾಡಿದ ಗುತ್ತೇದಾರನ ಲಾಭ ತೆಗೆಯುವಾಗ ಒಟ್ಟು 70 ಪೈಸೆ ಹೋಗಿ ಉಳಿಯುವುದು ಕೇವಲ 30 ಪೈಸೆ ಮಾತ್ರ.

ಇದರಿಂದಾಗಿ ರಸ್ತೆ, ಕಟ್ಟಡಗಳು ಜನತಾ ಮನೆಗಳು ಹೆಸರಿಗೆ ಮಾತ್ರ ನಿರ್ಮಾಣವಾಗುತ್ತವೆ. ಜನರ ಉಪಯೋಗಕ್ಕೆ ಬಾರದಂತಾಗುತ್ತವೆ.

ಇಂತಹ ಭ್ರಷ್ಟ ಹಣ ಪಡೆಯುವ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳು ಜೊತೆಗೆ ಕಾಮಗಾರಿ ಮಾಡುವ ಗುತ್ತೆದಾರರು (ವೃತ್ತಿನಿರತ ಗುತ್ತೆದಾರರು, ರಾಜಕಾರಣಿಗಳಾಗಿದ್ದು ಗುತ್ತೇದಾರಿಕೆ ಮಾಡುವವರು) ಎಲ್ಲಾ ಇಲಾಖೆಯ ಅಧಿಕಾರಿಗಳು, ಸಹಕಾರಿ ಸಂಘದ ಅಧ್ಯಕ್ಷರುಗಳು, ನ್ಯಾಯಬೆಲೆ ಅಂಗಡಿ ಗುತ್ತೇದಾರರು, ಈ ವಸ್ತುಗಳ ಸಾಗಾಣಿಕೆ ಮಾಡುವವರು, ಮೇಲಿನ ಕಛೇರಿಗಳಿಗೆ ಸ್ಟೇಶನರಿ, ಫೈಪುಗಳು ವಾಹನಗಳು, ರಿಪೇರಿಗಳು ಇತರೆ ಸಪ್ಲೆಮಾಡುವ ಗುತ್ತೇದಾರರು ಹಾಗೂ ದಲ್ಲಾಳಿಗಳು ಸೇರಿದಂತೆ ರಾಜ್ಯ ಹಾಗೂ ಕೇಂದ್ರ ಸರಕಾರದಿಂದ ಬರುವ ಯಾವುದೇ ಹಣವನ್ನು ಅತೀ ಕಡಿಮೆ ಶ್ರಮ ಹಾಕಿ ಅತೀ ಹೆಚ್ಚು ಹಣ ಮಾಡುವ ಭ್ರಷ್ಟಚಾರದಿಂದ ರಾಷ್ಟವನ್ನು ಕೆಳಹಂತದಲ್ಲಿ ಕೊಳ್ಳೆಹೊಡೆಯುವ ರಾಜಕೀಯ ಭ್ರಷ್ಟ ರಾಜಕಾರಣಿಗಳು ವಂಚಕರಾಗಿದ್ದಾರೆ.

ಇವರು ಪ್ರತಿಹಳ್ಳಿಯಿಂದ ಹತ್ತಿಪ್ಪತ್ತು ಜನರಂತೆ ಹಂಚಿಹೋಗಿದ್ದು ಇವರೇ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರಾಗಿದ್ದಾರೆ. ಶ್ರಮವಿಲ್ಲದೆ ಸಂಗ್ರಹಣೆಯಾದ ಈ ಹಣದ ಹತ್ತಿಪ್ಪತ್ತು ಭಾಗವನ್ನು ಖರ್ಚುಮಾಡುವ ಮುಖಾಂತರ, ಜನತೆಯ ಚಳುವಳಿ ಹೋರಾಟ, ಸಂಘಟನೆಯನ್ನು ವಿರೋಧಿಸಲು ಸದೆಬಡಿಯಲು, ತಪ್ಪು ದಾರಿಗೆಳೆಯಲು ಪೋಲಿಸರಿಂದ ಕೇಸುಗಳನ್ನು ಹಾಕಿಸಿ ಚಳುವಳಿ ತಡೆಯಲು ಪ್ರಯತ್ನಿಸುತ್ತಾರೆ.

ಸಮಸ್ಯೆಗಳು ಗಂಭೀರವಾಗಿರುವಾಗ ದೊಡ್ಡ ಹೋರಾಟಗಳಾಗಿ ಬರುವಾಗ ತಾವೂ ಅದರಲ್ಲಿ ಸೇರಿ ಕೊಂಡುಬಿಡುತ್ತಾರೆ. ಒಳಗಿದ್ದುಕೊಂಡು ಸಂಘಟನೆಯನ್ನು ದುರ್ಬಲಗೊಳಿಸುತ್ತಾರೆ. ಇಲ್ಲವಾದಲ್ಲಿ ಚುನಾವಣೆ ಬಂದಾಗ ತಮ್ಮ ಸ್ಥಾನ ಮಾನ ಮತ್ತು ಸಂಬಂಧ, ಜಾತಿಗಳನ್ನು ಬಳಸಿ ಹಣ ಹೆಂಡ, ಸಾಲ ಸಹಾಯ ನೀಡುವ ಮುಖಾಂತರ ಯಾವುದಾದರೊಂದು ಬಂಡವಾಳಶಾಹಿ ಪಕ್ಷಕ್ಕೆ ಮತ ಚಲಾಯಿಸುವಂತೆ ಮಾಡುವಲ್ಲಿ ಯಶಸ್ಸನ್ನು ಸಾಧಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜಕೀಯ ಭ್ರಷ್ಟಾಚಾರದಿಂದ ಹಣ ಮಾಡುವ ಜನ ಗ್ರಾಮದ ಭೂಮಾಲೀಕ ಶ್ರೀಮಂತ ರೈತ ಕುಟುಂಬಗಳಿಂದ ಬಂದು ಇರುವ ವ್ಯವಸ್ಥೆಯನ್ನು ಉಳಿಸಿ ಕೊಳ್ಳಲು ಸಫಲ ರಾಗುತ್ತಿದ್ದಾರೆ. ಮೀಸಲಾತಿಯಿಂದ ಹಿಂದುಳಿದ ವಿಭಾಗದವರು ಚುನಾಯಿತರಾಗಿ ಬಂದವರು ಇದೇ ಸಾಲಿಗೆ ಸೇರಿ, ಬಂಡವಾಳಶಾಹಿ ರಾಜಕೀಯ ಪಕ್ಷಗಳ ರಕ್ಷಕರಾಗಿದ್ದಾರೆ.

ಹೋರಾಟದ ಒಂದು ಬೇಡಿಕೆ

ಭ್ರಷ್ಟಹಣ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಮತದಾರರನ್ನು ಭ್ರಷ್ಟಗೊಳಿಸಲು ರಾಷ್ಟ್ರದ ಪ್ರಗತಿಯನ್ನು ತಡೆಯಲು ಜನಪರ ಚಳುವಳಿಯಿಂದ ಬೆಳೆಯುತ್ತಿರುವ ಎಡಚಳುವಳಿಯನ್ನು ನಿರುತ್ಸಾಹಗೊಳಿಸುವ ಮುಖಾಂತರ ಮತದಾರ ನಾಲ್ಕು ಕಳ್ಳರಲ್ಲಿ ಯಾರನ್ನಾದರು ಒಬ್ಬರನ್ನು ಚುನಾಯಿಸಬೇಕು ಇಲ್ಲವೇ ಮತದಾನದಿಂದ ದೂರ ಉಳಿಯಬೇಕೆಂಬ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ.

ರಾಷ್ಟ್ರದ ಅಭಿವೃದ್ಧಿಯನ್ನು ಮುಂದೆ ಕೊಂಡೊಯ್ಯಲು ಹಾಗೂ ಎಡ ಚಳುವಳಿಯನ್ನು ಕ್ರೋಢೀ ಕರಿಸಿ ಅಭಿವೃದ್ಧಿ ಗೊಳಿಸಲು ರಾಜಕೀಯ ಭ್ರಷ್ಟಾಚಾರದ ವಿರುದ್ಧ ನಿರ್ದಿಷ್ಟವಾದ ತೀವ್ರತರವಾದ ಹೋರಾಟ ಅನಿವಾರ್ಯ ಹಾಗೂ ಅತ್ಯಗತ್ಯವಾಗಿದೆ.

ಆ ಮುಖಾಂತರವೇ ಶ್ರಮವಿಲ್ಲದೆ ಸಂಗ್ರಹಣೆಯಾಗುವ ಭ್ರಷ್ಟ ಹಣದ ಶೇಖರಣೆಯನ್ನು ತಡೆಯಲು ಜನತೆಯ ತೆರಿಗೆಯಿಂದ ಶೇಖರಣೆಯಾಗಿ ಸರಕಾರದಿಂದ ಬರುವ ಹಣವನ್ನು ಅಭಿವೃದ್ಧಿಗಾಗಿ ಬಳಸಲು ಸಾಧ್ಯ. ಜನತೆಯಲ್ಲಿ ಭರವಸೆಯನ್ನು ಮೂಡಿಸಲು ಚುನಾವಣೆಯಲ್ಲಿ ಬಳಕೆ ಯಾಗುವ ಭ್ರಷ್ಟ ಹಣವನ್ನು ತಡೆಯಲು ಸಾಧ್ಯ. ರಾಜಕೀಯ ಭ್ರಷ್ಟಾಚಾರದ ವಿರುದ್ಧ ಕೆಳಹಂತದಿಂದ ಹೋರಾಟವಮಾಡುತ್ತ ಮೇಲ್‌ಸ್ಥರದ ಸ್ಕಾಮ್‌ಗಳನ್ನು ತಿಳಿಯಲು ಹಾಗೂ ತಡೆಯಲು ಸಾಧ್ಯ. ಸಾಮಾನ್ಯ ಬೇಡಿಕೆಗಳ ಜೊತೆಗೆ ರಾಜಕೀಯ ಭ್ರಷ್ಟಾಚಾರ ಒಂದು ಪ್ರಮುಖ ಹೊರಾಟದ ಬೇಡಿಕೆಯಾಗಬೇಕಾಗಿದೆ.

ಚೆನ್ನೈನಲ್ಲಿ ಸಿಐಟಿಯು ಜನರಲ್ ಕೌನ್ಸಿಲ್ ಸಭೆ

ದೇಶದಲ್ಲಿ ಮೊತ್ತಮೊದಲ ಕಾರ್ಮಿಕ ಸಂಘ ವಿಧ್ಯುಕ್ತವಾಗಿ ರಚನೆಗೊಂಡ ಚೆನ್ನೈ ನಗರದಲ್ಲಿ ಸಿಐಟಿಯುನ ಮಹಾಮಂಡಳಿ(ಜನರಲ್ ಕೌನ್ಸಿಲ್) ಸಭೆ ಏಪ್ರಿಲ್‌ನಲ್ಲಿ ನಡೆಯಲಿದ್ದು, ಅದಕ್ಕೆ ಈಗಾಗಲೇ ಸಿದ್ಧತೆ ಆರಂಭವಾಗಿದೆ. ಚೆನ್ನೈನಲ್ಲಿ ಸಿಐಟಿಯು ಮಹಾಮಂಡಳಿ ಸಭೆ ನಡೆಯುತ್ತಿರುವುದು ಇದೇ ಮೊದಲು.

ಮಾರ್ಚ್ 10 ರಂದು ಚೆನ್ನೈ ಮತ್ತು ಸುತ್ತಮುತ್ತಲಿನ ಸಿಐಟಿಯು ಸಂಘಟನೆಗಳ ಮುಖಂಡರು ನೌಕರರು, ವಿಮಾ, ಬ್ಯಾಂಕ್, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು, ವೈದ್ಯಕೀಯ ಪ್ರತಿನಿಧಿಗಳ ಸಂಘಟನೆಗಳ ಮುಖಂಡರಲ್ಲದೆ ಮಹಿಳಾ, ಯುವಜನ, ವಿದ್ಯಾರ್ಥಿ ಸಂಘಟನೆಗಳ ಮುಖಂಡರೂ ಭಾಗವಹಿಸಿದ್ದ ಸಭೆಯಲ್ಲಿ 150 ಸದಸ್ಯರಿರುವ ಒಂದು ಸ್ವಾಗತ ಸಮಿತಿ ರಚನೆಗೊಂಡಿದೆ. ಎ.ಸೌಂದರರಾಜನ್ ಇದರ ಅಧ್ಯಕ್ಷರು, ಇ.ಪೊನ್ನಡಿ ಕಾರ್ಯದರ್ಶಿ ಹಾಗೂ ಡಿ.ಜಾನಕೀ ರಾಮನ್ ಖಜಾಂಚಿ. ಸೋದರ ಸಂಘಟನೆಗಳ ಮುಖಂಡರು ಸ್ವಾಗತ ಸಮಿತಿಯಲ್ಲಿದ್ದು ತಮ್ಮ ಸಂಪೂರ್ಣ ಸಹಾಯ-ಸಹಕಾರಗಳ ಭರವಸೆ ನೀಡಿದರು.

ಏಪ್ರಿಲ್ 25 ರಂದು ಚೆನ್ನೈ ನಗರದಲ್ಲಿ ಒಂದು ರ್‍ಯಾಲಿ ನಡೆಯಲಿದ್ದು ಜ್ಯೋತಿಬಸು, ಇ.ಬಾಲಾನಂದನ್, ಎಂ.ಕೆ.ಫಂದೆ, ಆರ್.ಉಮಾನಾಥ್ ಮತ್ತಿತರರು ಅದನ್ನುದ್ದೇಶಿಸಿ ಮಾತನಾಡುತ್ತಾರೆ.

ಕರ್ನಾಟಕದ ತೋಟ ಕಾರ್ಮಿಕರ ಖಂಡನೆ

ಪುಟ 1 ರಿಂದ

ಕಾರ್ಮಿಕರ ಒಕ್ಕೂಟದ ಉಪಾಧ್ಯಕ್ಷರಾಗಿದ್ದ ಕಾಂ|| ಬಿಮಲಸಿನ್ಹ ಹಾಗೂ ಅವರ ಕಿರಿಯ ಸಹೋದರನನ್ನು ತ್ರಿಪುರಾದ ಉಗ್ರಗಾಮಿಗಳ ತಂಡ ಗುಂಡಿಕ್ಕಿ ಬರ್ಬರ ಹತ್ಯೆ ನಡೆಸಿರುವುದನ್ನು ಕರ್ನಾಟಕ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟವು ತೀವ್ರವಾಗಿ ಖಂಡಿಸಿದೆ.

ಕಾಂ|| ಬಿಮಲ ಸಿನ್ಹರವರ ಘೋರ ಹತ್ಯೆಯ ಸುದ್ದಿಯು ಕರ್ನಾಟಕದ ತೋಟ ಕಾರ್ಮಿಕರನ್ನು ತಲ್ಲಣಗೊಳಿಸಿದೆ. ನಮ್ಮ ರಾಜ್ಯದ ಪ್ಲಾಂಟೇಷನ್‌ಗಳಿಂದ ಸುಮಾರು ಮೂರು ಸಾವಿರಕ್ಕಿಂತಲೂ ದೂರವಿರುವ ತ್ರಿಪುರಾದ ತೋಟ ಕಾರ್ಮಿಕರ ಮುಖಂಡರಾಗಿದ್ದರೂ ಕರ್ನಾಟಕದ ನಮ್ಮ ಸಂಘಟನೆಗಳ ಸಾವಿರಾರು ಕಾರ್ಮಿಕರಿಗೆ ಚಿರಪರಿಚಿತರು. ಅವರು ಕಳೆದ ಹತ್ತಾರುವರ್ಷಗಳಿಂದ ಅನೇಕ ಸಲ ಕರ್ನಾಟಕಕ್ಕೆ ಭೇಟಿ ಕೊಟ್ಟಿದ್ದರು. ಚಿಕ್ಕಮಗಳೂರಿನಲ್ಲಿ ನಡೆದ ತೋಟಕಾರ್ಮಿಕರ ರಾಜ್ಯ ಸಮಾವೇಶ, ಸಕಲೇಶಪುರದಲ್ಲಿ ನಡೆದ ತೋಟಕಾರ್ಮಿಕರ 4ನೇ ರಾಜ್ಯ ಸಮ್ಮೇಳನ, ಕೊಡಗಿನ ವೀರಾಜ ಪೇಟೆಯಲ್ಲಿ ನಡೆದ ಅಖಿಲಭಾರತ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆಗಳ ಸಂದರ್ಭಗಳಲ್ಲಿ ಎರಡು ಮೂರು ದಿನಗಳ ಕಾಲ ಬೆರೆತು ಮಾತನಾಡಿ, ತಮ್ಮ ಅಮೋಘ ಶೈಲಿಯ ಕ್ರಾಂತಿಕಾರಕ ಭಾಷಣ ದಿಂದ ಕಾರ್ಮಿಕರನ್ನು ಆಕರ್ಷಿಸಿದ್ದರು ಎಂದು ಕರ್ನಾಟಕದ ಸಂಘಟನೆಯ ಕಾರ್ಯದರ್ಶಿ ವಿ.ಸುಕುಮಾರ್ ಹೇಳಿದ್ದಾರೆ.

ಈ ಧೀರ ಹೋರಾಟಗಾರ, ತೋಟಕಾರ್ಮಿಕರ ಅಖಿಲ ಭಾರತ ಜನಪ್ರಿಯ ನಾಯಕರ ಹತ್ಯೆಯ ಆಘಾತಕರ ಸುದ್ದಿ ತಿಳಿದ ಹಾಸನ ಜಿಲ್ಲೆಯ ವಿವಿಧ ತೋಟಗಳ ನೂರಾರು ಕಾರ್ಮಿಕರು ತಮ್ಮ ಕೆಲಸ ನಿಲ್ಲಿಸಿ ಸಕಲೇಶಪುರದ ತಮ್ಮ ಕಛೇರಿಯ ಬಳಿ ಏಪ್ರಿಲ್ ಒಂದರಂದು ಬೆಳಗ್ಗೆಯೇ ಸಭೆ ಸೇರಿ ಅಗಲಿದ ತಮ್ಮ ಅಖಿಲ ಭಾರತ ನಾಯಕನಿಗೆ ಸಂತಾಪ ಸೂಚನೆಯನ್ನು ಅರ್ಪಿಸಿದರು.

ಸಾದರ ಸ್ವೀಕಾರ

ದಂಗೆ	ಗೀತಾ ನಾಗಭೂಷಣ	ಬೆಲೆ 65 ರೂ.
ನದಿ ನೀರಿನ ಸ್ಪೆಷಲ್	ಪರಂಜ್ಯೋತಿ	ಬೆಲೆ 40 ರೂ.
ಅಗಲಿಕೆಯ ದುಃಖ	ಡಾ|| ಸಿ.ಆರ್.ಚಂದ್ರಶೇಖರ್	ಬೆಲೆ 30 ರೂ.
ತಲೆನೋವು ಏಕೆ?		
ಪರಿಹಾರ ಎಂದು	ಡಾ|| ಸಿ.ಆರ್.ಚಂದ್ರಶೇಖರ್	ಬೆಲೆ 13 ರೂ.
ಸಿಂಗರಾಯನ ಗವಿ	ನೀಲಾಂಬರಿ	ಬೆಲೆ 15 ರೂ.
ಕಣ್ಣು 106 ಪ್ರಶ್ನೆಗಳು	ಡಾ|| ಹೆಚ್.ಎಸ್.ಮೋಹನ್	ಬೆಲೆ 15 ರೂ.
ಬದಿ	ಇಂದಿರಾ ಹೆಗ್ಗಡೆ	ಬೆಲೆ 50 ರೂ.
ಯುಗಚೇತನ ಪ್ರೇಮಚಂದ್	ದು.ನಿಂ. ಬೆಳಗಲಿ	ಬೆಲೆ 75 ರೂ.
ಸೂರ್ಯನಲ್ಲಿಗೆ ನಿಯೋಗ	ನೀಲಾಂಬರಿ	ಬೆಲೆ 15 ರೂ.


ಮೇಲಿನ ಎಲ್ಲಾ ಪುಸ್ತಕಗಳ ಪ್ರಕಾಶಕರು

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್

ಎಂಬೆಸಿ ಸೆಂಟರ್, ಕ್ರಿಸೆಂಟ್ ರಸ್ತೆ, ಬೆಂಗಳೂರು-560 001

ವಾರದ ವ್ಯಂಗ್ಯ ಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27